ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಮುಲ್ಲನಪುರದಲ್ಲಿ ಇಂದು ದಕ್ಷಿಣ ಆಫ್ರಿಕಾ ವಿರುದ್ಧ ನಡೆಯಲಿರುವ 2ನೇ ಟಿ-20 ಪಂದ್ಯಕ್ಕೆ ಅಭ್ಯಾಸ ನಡೆಸುತ್ತಿರುವ ಭಾರತ ತಂಡದ ಆಟಗಾರರ...

11 ಡಿಸೆಂಬರ್ 2025 ಗುರುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 269 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಧನುರ್ಮಾಸದ ಕಥೆ ಹಾಗೂ ಮಾಹಿತಿ » 2


ಆಧುನಿಕ ತಂತ್ರಜ್ಞಾನದಿಂದ ಕೃಷಿಯಲ್ಲಿ ಲಾಭ » 3


ಅರ್ಜುನನ ಸಾವಿಗೆ ನ್ಯಾಯ ಕೇಳಿದವರ ವಿರುದ್ಧ ಐಫ್ಐಆರ್ » 4

# ದ್ವೇಷ ಭಾಷಣ ಬಂದ್‌ಗೆ ವಿಧೇಯಕ ಮಂಡನೆ

## ಬಿಜೆಪಿ ಸದಸ್ಯರ ತೀವ್ರ ವಿರೋಧ | ವಾಕ್ ಸ್ವಾಂತಂತ್ರ್ಯ ಹರಣವೆಂದು ಆಕ್ಷೇಪ

• ಪ್ರಜೋದಯ ವರದಿ

**ಬೆಳಗಾವಿ:** ರಾಜ್ಯದಲ್ಲಿ ದ್ವೇಷ ಭಾಷಣಗಳಿಗೆ ಕಡಿವಾಣ ಹಾಕಲು ರಾಜ್ಯ ಸರ್ಕಾರ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿ ಬಂಧಕ) ವಿಧೇಯಕವನ್ನು ವಿಧಾನಸಭೆಯಲ್ಲಿ ಮಂಡಿಸಿದೆ.



ಬುಧವಾರ ಪ್ರಶ್ನೋತ್ತರ ಕಲಾಪದ ನಂತರ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು, ದ್ವೇಷ ಭಾಷಣ ಪ್ರತಿಬಂಧಕ ಮಸೂದೆ ಮಂಡಿಸಿದರು. ಅದಕ್ಕೆ ಬಿಜೆಪಿ ಸದಸ್ಯರು ತೀವ್ರ ವಿರೋಧ ವ್ಯಕ್ತ ಪಡಿಸಿ, ವಾಕ್ ಸ್ವಾಂತಂತ್ರ್ಯ ಹರಣ ಮಾಡಲಾಗುತ್ತಿದೆ ಎಂದು ಪ್ರತಿಪಕ್ಷದ ನಾಯಕರು ಆಕ್ಷೇಪ ವ್ಯಕ್ತಪಡಿಸಿದರು.

ಈ ಮಸೂದೆಯು ಒಂದು ಲಕ್ಷ ರೂ. ವರೆಗೆ ದಂಡ ಮತ್ತು ಗರಿಷ್ಠ 10 ವರ್ಷಗಳವರೆಗೆ ಜೈಲು ಶಿಕ್ಷೆಗೆ ಅವಕಾಶ ನೀಡುತ್ತದೆ. ಈ ಮಸೂದೆಯನ್ನು ಡಿ.4 ರಂದು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಅಂಗೀಕರಿಸಲಾಗಿತ್ತು. ಪರಮೇಶ್ವರ ಅವರು ಮಸೂದೆಯನ್ನು ಮಂಡಿಸಲು ಸದನದ ಅನುಮತಿ ಕೋರಿದಾಗ ಮತ್ತು ಸ್ಪೀಕರ್ ಯು.ಟಿ.ಖಾದರ್ ಅದನ್ನು ಧ್ವನಿ ಮತಕ್ಕೆ ಹಾಕಿದಾಗ, ವಿರೋಧ ಪಕ್ಷದ ಬಿಜೆಪಿ ಸದಸ್ಯರು ಬೇಡ ಎಂದು ಕೂಗುವ ಮೂಲಕ ಅದನ್ನು ವಿರೋಧಿಸಿದರು. ಸುನಿಲ್ ಕುಮಾರ್ ಸೇರಿ ಕೆಲವು ಬಿಜೆಪಿ ಸದಸ್ಯರು ಮತಗಳ ವಿಭಜನೆಯನ್ನು ಕೋರಿದರೂ, ಸ್ಪೀಕರ್ ಸದನದಲ್ಲಿ ಮಸೂದೆಯನ್ನು ಮಂಡಿಸುವ ಪ್ರಕ್ರಿಯೆಯನ್ನು ಮುಂದುವರಿಸಿದರು.

ದ್ವೇಷ ಭಾಷಣ ಪ್ರಸರಣೆ, ಪ್ರಕಟಣೆ, ಪ್ರಚಾರ ತಡೆಯುವ ವಿಧೇಯಕ ಇದಾಗಿದ್ದು, ಯಾವುದೇ ಪೂರ್ವಾಗ್ರಹ ಪೀಡಿತ ಹಿತಾಸಕ್ತಿ ಯನ್ನು ಪೂರೈಸಲು, ಜೀವಂತ ಅಥವಾ ಸತ್ತ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿನ ವಿರುದ್ಧ ದ್ವೇಷ ಅಥವಾ ದ್ವೇಷದ ಭಾವನೆಗಳನ್ನು ಉಂಟು ಮಾಡುವ ಉದ್ದೇಶದಿಂದ ಮಾಡಿದ ಭಾಷಣ, ಪ್ರಕಟಿಸಿದ ಅಥವಾ ಪ್ರಸಾರ ಮಾಡಿದ ಯಾವುದೇ ಅಭಿವ್ಯಕ್ತಿಯನ್ನು ದ್ವೇಷ ಭಾಷಣ ಎಂದು ವರ್ಗೀಕರಿಸಲಾಗಿದೆ.

» ನಾಲ್ಕನೇ ಪುಟದಲ್ಲಿ

### ಅಧಿವೇಶನದಲ್ಲೂ ಸಿಎಂ ಕುರ್ಚಿ ಕದನ

ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ನಾಯಕತ್ವ ಬಿಕ್ಕಟ್ಟಿನ ಸಮಸ್ಯೆಯನ್ನು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಬುಧವಾರ ವಿಧಾನಸಭೆಯಲ್ಲಿ ಪ್ರಸ್ತಾಪಿಸಿದರು. ರಾಜಕೀಯ ಅಸ್ಥಿರತೆ ಹಾಗು ಮುಖ್ಯಮಂತ್ರಿ ಸ್ಥಾನದ ಬಗ್ಗೆ ಸಾರ್ವಜನಿಕರ ಚರ್ಚೆಯಿಂದ ರಾಜ್ಯದ ಅಭಿವೃದ್ಧಿ ಮೇಲೆ ಪರಿಣಾಮ ಬೀರಿದೆ ಎಂದರು.
ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ಚರ್ಚೆ ವೇಳೆ ಸಿದ್ದರಾಮಯ್ಯ ಹಾಗು ಡಿ.ಕೆ.ಶಿವಕುಮಾರ್ ನಡುವಿನ ಮುಖ್ಯಮಂತ್ರಿ ಕುರ್ಚಿ ಬದಲಾವಣೆ ವಿಚಾರ ಪ್ರಸ್ತಾಪಿಸಿದ ಆರ್.ಅಶೋಕ್, ನನ್ನ ಕಣ್ಣೆದುರೇ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಳಿತಿದ್ದಾರೆ. ಆದರೆ ಪದೇ ಪದೇ ಕಾಂಗ್ರೆಸ್‌ನಲ್ಲಿ ನಾಯಕತ್ವದ ಬಗ್ಗೆಯೇ ಗಲಾಟೆ ನಡೆಯುತ್ತಿದೆ ಎಂದು ದೂರಿದರು. ಪ್ರಮುಖ ವಿಷಯದಿಂದ ಬೇರೆಡೆಗೆ ಚರ್ಚೆ ಹೋಗದಂತೆ ಸ್ಪೀಕರ್ ಯು.ಟಿ.ಖಾದರ್ ಹೇಳಿದರು.
ಇದಕ್ಕೆ ಪ್ರತಿಕ್ರಿಯಿಸಿದ ಆರ್.ಅಶೋಕ್, ನಾನು ಏಕೆ ನಾಯಕತ್ವ ವಿಚಾರವಾಗಿ ಮಾತ ನಾಡಬಾರದು. ಸಿದ್ದರಾಮಯ್ಯ ನಾಯಕತ್ವ ಬಗ್ಗೆ ಮಾತನಾಡುತ್ತಿಲ್ಲ. ನಾಯಕತ್ವದ ಸಮಸ್ಯೆ ಇದ್ದರೆ ಉತ್ತರ ಕರ್ನಾಟಕದ ಅಭಿವೃದ್ಧಿ ಆಗುವುದಿಲ್ಲ ಎಂದರು.
ಈ ಹಂತದಲ್ಲಿ ಆಡಳಿತ ಹಾಗು ವಿಪಕ್ಷ ಸದಸ್ಯರ ನಡುವೆ ತೀವ್ರ ಮಾತಿನ ಚಕಮಕಿ ನಡೆಯಿತು. ನಿಮ್ಮ ಅವಧಿಯಲ್ಲಿ ಐವರನ್ನು ಬದಲಾವಣೆ ಮಾಡಿದ್ರಿ. ಯಡಿಯೂರಪ್ಪ ಅವರನ್ನ ಕೆಳಗಿಳಿಸಿದ್ರಿ ಎಂದು ನೆನಪಿಸಿ ಆರ್.ಅಶೋಕ್ ಮಾತಿಗೆ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದರು. ಹೆಚ್.ಸಿ. ಬಾಲಕೃಷ್ಣ, ಬೇಳೂರು ಗೋಪಾಲಕೃಷ್ಣ ಸೇರಿ ಹಲವು ಕಾಂಗ್ರೆಸ್ ನಾಯಕರು ಬಿಜೆಪಿ ವಿರುದ್ಧ ಮುಗಿಬಿದ್ದರು.

# ಎಂಟಿಇಎಸ್ ಆಡಳಿತ ಮಂಡಳಿ ಸಭೆಗೆ ಹೈಕೋರ್ಟ್ ತಡೆ

## ಗುರುದೇವ್ ಸಲ್ಲಿಸಿದ್ದ ರಿಟ್ ಅರ್ಜಿ ಪುರಸ್ಕರಿಸಿದ ನ್ಯಾಯಾಲಯ | ಜ.7 ರಂದು ಮುಂದಿನ ವಿಚಾರಣೆ

• ಪ್ರಜೋದಯ ವರದಿ

**ಹಾಸನ:** ನಗರದ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿಯಲ್ಲಿ ಡಿ.11 ರಂದು ನಡೆಯಬೇಕಿದ್ದ ಕಾರ್ಯಕಾರಿ ಸಮಿತಿ ಸಭೆಗೆ ಹೈಕೋರ್ಟ್ ಬುಧವಾರ ತಡೆಯಾಜ್ಞೆ ನೀಡಿದೆ.

ಸಂಸ್ಥೆಯನಿರ್ದೇಶಕಬಿ.ಆರ್.ಗುರುದೇವ್ ಅವರು ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣ ಕುಮಾರ್ ಅವರ ಪೀಠವು ಸಭೆ ನಡೆಸದಂತೆ ಆದೇಶ ಹೊರಡಿಸಿದೆ. ಪ್ರತಿವಾದಿಗಳು ಡಿ.4 ರಂದು ಹೊರಡಿಸಿದ್ದ ಸಭಾ ನೋಟೀಸ್‌ಗೆ ನ್ಯಾಯಾಲ ಯವು ತಡೆಯಾಜ್ಞೆ ನೀಡಿದ್ದು, ಡಿ.11, 2025ಕ್ಕೆ ನಿಗದಿಯಾಗಿದ್ದ ಕಾರ್ಯಕಾರಿ ಸಮಿತಿ ಸಭೆಯನ್ನು ರದ್ದುಪಡಿಸಲಾಗಿದೆ. ಎರಡೂ ಪ್ರತಿವಾದಿಗಳಿಗೆ (ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ) ಮುಂದಿನ ವಿಚಾರಣೆಯ ದಿನಾಂಕವಾದ ಜ.7, 2026 ರವರೆಗೆ ಯಾವುದೇ ಆಡಳಿತಾತ್ಮಕ ಸಭೆಗಳನ್ನು ನಡೆಸದಂತೆ ಸ್ಪಷ್ಟ ನಿರ್ಬಂಧ ವಿಧಿಸಲಾಗಿದೆ.

ಅರ್ಜಿದಾರರ ಕೋರಿಕೆಯಂತೆ ರಾಜ್ಯ ಸರ್ಕಾರವನ್ನು (ಶಿಕ್ಷಣ ಇಲಾಖೆ ಕಾರ್ಯದರ್ಶಿಗಳ ಮೂಲಕ) ಈ ಮೊಕದ್ದಮೆಗೆ ಹೆಚ್ಚುವರಿ ಪ್ರತಿವಾದಿಯಾಗಿ ಸೇರಿಸಲು ನ್ಯಾಯಾಲಯ ಅನುಮತಿ ನೀಡಿದೆ.

» ನಾಲ್ಕನೇ ಪುಟದಲ್ಲಿ




### ಆಡಳಿತಾತ್ಮಕ ತಡೆಯಾಜ್ಞೆ ನೀಡಿಲ್ಲ: ಜಗದೀಶ್

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿಗೆ ಸಂಬಂಧಿಸಿದಂತೆ ಕಾರ್ಯಕಾರಿ ಸಮಿತಿ ಸಭೆ ನಡೆಸದಂತೆ ಅಷ್ಟೇ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದು, ಆಡಳಿತಾತ್ಮಕ ವಿಚಾರವಾಗಿ ಯಾವುದೇ ತಡೆಯಾಜ್ಞೆ ನೀಡಿಲ್ಲ ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಚೌಡುವಳ್ಳಿ ತಿಳಿಸಿದ್ದಾರೆ.
ಹೈಕೋರ್ಟ್ ಆದೇಶಕ್ಕೆ ಪ್ರತಿಕ್ರಿಯಿಸಿದ ಅವರು, ಜಿಲ್ಲಾ ನ್ಯಾಯಾಲಯದ ಆದೇಶದನ್ವಯ ನಾವು ಕಾರ್ಯಚಟುವಟಿಕೆಯನ್ನು ಮುಂದುವರೆಸುತ್ತೇವೆ. ಜಿಲ್ಲಾ ನ್ಯಾಯಾಲಯ ನಮ್ಮ ಪರ ತೀರ್ಪು ನೀಡಿದ್ದು, ಆಡಳಿತಾತ್ಮಕ ವಿಚಾರದಲ್ಲಿ ಯಾವುದೇ ತೊಂದರೆ ನೀಡದಂತೆ ಎದು ರಾಳಿಗಳಿಗೆ ಸ್ಪಷ್ಟವಾಗಿ ಸೂಚನೆ ನೀಡಿದೆ. ಅಂತೆಯೇ ಪ್ರತಿ ಡಿ.11 ರಂದು ಸಭೆ ನಿಗದಿ ಪಡಿಸಿ ಅಮಾನತ್ತುಗೊಂಡಿದ್ದ ಮೂವರನ್ನು ಹೊರತುಪಡಿಸಿ ಉಳಿದ 21 ನಿರ್ದೇಶಕರು ಸಭೆಗೆ ಹಾಜರಾಗುವಂತೆ ಆಹ್ವಾನ ನೀಡಲಾಗಿತ್ತು. ಹೈಕೋರ್ಟ್ ಆದೇಶವನ್ನು ಗೌರವಪೂರ್ವಕವಾಗಿ ಸ್ವಾಗತಿಸುತ್ತಾ, ಕಾನೂನಾತ್ಮಕವಾಗಿಯೇ ಉತ್ತರ ನೀಡುತ್ತೇವೆಂದು ಹೇಳಿದ್ದಾರೆ.
ನಮಗೆ ಕೆಲಸ ಮಾಡಲು ಅವಕಾಶ ಸಿಕ್ಕಿದೆ. ನಮ್ಮ ಹಿರಿಯರಾದ ಮುದ್ದೇಗೌಡರ ಮಾರ್ಗದರ್ಶನದಲ್ಲಿ ಹಿರಿಯರಾದ ಅಶೋಕ್ ಹಾರನಹಳ್ಳಿ, ಗುರುದೇವ್ ಅವರನ್ನು ಸೇರಿ ಎಲ್ಲಾ ಒಗ್ಗಟ್ಟಿನಿಂದ ಸಂಸ್ಥೆಯ ಹಿತದೃಷ್ಟಿಯಿಂದ ಕಾರ್ಯ ನಿರ್ವಹಿಸಬೇಕೆಂಬುದು ನಮ್ಮ ಬಯಕೆ ಮುಂದಿನ ದಿನಗಳಲ್ಲಿ ಅವರೂ ಸಹಕಾರ ನೀಡುತ್ತಾರೆಂಬ ಭರವಸೆ ಇದೆ ಎಂದರು.


# ಯುವಕನ ಹತ್ಯೆ ಕೇಸ್ ಪ್ರಮುಖ ಆರೋಪಿ ಉಲ್ಲಾಸ್ ಬಂಧನ

## ಕೊಲೆಗೆ ಇಬ್ಬರ ನಡುವಿನ ಜಗಳ ಕಾರಣ | ಎಸ್ಪಿ ಮೊಹಮ್ಮದ್ ಸುಜೀತಾ

• ಪ್ರಜೋದಯ ವರದಿ

**ಹಾಸನ:** ಚನ್ನಪಟ್ಟಣ ಗ್ರಾಮದ ಪವನಪುತ್ರ ಕೋಳಿ ಫಾರಂನ ಖಾಲಿ ಜಾಗದಲ್ಲಿ ಯುವಕನ ಕೊಲೆಗೈದು ವಿಡಿಯೋ ಹರಿಬಿಟ್ಟ ಪ್ರಕರಣದ ಪ್ರಮುಖ ಆರೋಪಿಯನ್ನು ಬಂಧಿಸಿ ಇತರರ ಬಂಧನಕ್ಕೆ ತಂಡ ರಚಿಸಲಾಗಿದೆಯೆಂದು ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿ ಮೊಹಮ್ಮದ್ ಸುಜೀತಾ ಅವರು ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಬುಧವಾರ ಮಾತನಾಡಿ, ಹೂವಿನಹಳ್ಳಿ ಗ್ರಾಮದ ಆಟೋ ಚಾಲಕ ಕೀರ್ತಿ (24) ಎಂಬಾತನನ್ನು ಡಿ.8ರಂದು ಸ್ನೇಹಿತರಾದ ದೊಡ್ಡಕಣಗಾಲ್‌ನ ಉಲ್ಲಾಸ್ ಹಾಗು ಮತ್ತಿತರರು ಕರೆದೊಯ್ದು ಎದೆ ಮೇಲೆ ಕಲ್ಲು ಎತ್ತಿಹಾಕಿ ಹತ್ಯೆಗೈದಿದ್ದಾರೆ. ನಂತರ ಅವರೇ ವಿಡಿಯೋ ಮಾಡಿ ತಮ್ಮ ಸ್ನೇಹಿತರಿಗೆ ವಾಟ್ಸಾಪ್ ಮೂಲಕ ಕಳುಹಿಸಿದ್ದರು. ನಂತರ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿ ವಿಕೃತಿ ಮೆರೆದಿದ್ದರು. ವಿಚಾರ ತಿಳಿಯುತ್ತಿದ್ದಂತೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದರು. ಪ್ರಮುಖ ಆರೋಪಿ ಉಲ್ಲಾಸ್‌ನನ್ನು ವಶಕ್ಕೆ ಪಡೆಯಲಾಗಿದೆ ಎಂದು ಮಾಹಿತಿ ನೀಡಿದರು.



**ಉಲ್ಲಾಸ್‌ಗೆ ಹೊಡೆದಿದ್ದ ಕೀರ್ತಿ**

ಕೀರ್ತಿ, ಉಲ್ಲಾಸ್ ಹಾಗು ಕೃತ್ಯದಲ್ಲಿ ಭಾಗಿಯಾದ ಎಲ್ಲರೂ ಮೂರು ವರ್ಷಗಳಿಂದ ಸ್ನೇಹಿತರಾಗಿದ್ದರು. ಎಲ್ಲರೂ ಆಟೋ ಚಾಲಕರಾಗಿ ಬದುಕು ಕಟ್ಟಿಕೊಂಡಿದ್ದರು. ಡಿ.8 ರಂದು ಉಲ್ಲಾಸ್ ಹಾಗು ಕೀರ್ತಿ ನಡುವೆ ಗಲಾಟೆಯಾಗಿತ್ತು. ಜಗಳದಲ್ಲಿ ಮೃತ ಕೀರ್ತಿಯು ಉಲ್ಲಾಸ್‌ನ ಕೆನ್ನೆಗೆ ಹೊಡೆದಿದ್ದ. ಅದೇ ದ್ವೇಷದಿಂದ ನಿರ್ಜನ ಪ್ರದೇಶಕ್ಕೆ ಆತನನ್ನು ಕರೆದುಕೊಂಡು ಹೋಗಿ ಕಲ್ಲಿನಿಂದ ಜಜ್ಜಿ ಹತ್ಯೆಗೈದಿದ್ದಾರೆಂದರು.

> **ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಪೊಲೀಸ್ ಇಲಾಖೆ ಎಲ್ಲಾ ಕ್ರಮ ಕೈಗೊಂಡಿದೆ. ಆಟೋ ಚಾಲಕರಿಗೆ ಗುರುತಿನ ಚೀಟಿ ನೀಡುವ ಬಗ್ಗೆ ಮೂರು ಸಭೆ ನಡೆಸಲಾಗಿತ್ತು. ಮುಂದಿನ ದಿನಗಳಲ್ಲಿ ಅದನ್ನು ಕಾರ್ಯರೂಪಕ್ಕೆ ತರಲಾಗುವುದು.**
> **-ಮೊಹಮ್ಮದ್ ಸುಜೀತಾ, ಎಸ್ಪಿ**

ಆರೋಪಿ ಉಲ್ಲಾಸ್ ವಿರುದ್ಧ ನಾಲ್ಕು ವರ್ಷಗಳ ಹಿಂದೆ ಪ್ರಕರಣ ದಾಖಲಾಗಿತ್ತು. ಆ ಕೇಸಿ ನಲ್ಲಿ ಖುಲಾಸೆಯಾಗಿದ್ದ. ಉಳಿದಂತೆ ಯಾರ ವಿರುದ್ಧವೂ ಗಂಭೀರ ಪ್ರಕರಣಗಳಿಲ್ಲ. ಡಿ.8 ರಂದು ನಡೆದ ಗಲಾಟೆ ಹೊರತುಪಡಿಸಿ ಇವರ ನಡುವೆ ಯಾವ ದ್ವೇಷವಿರಲಿಲ್ಲ. ಆ ದಿನ ಯಾವ ಕಾರಣಕ್ಕೆ ಜಗಳ ಮಾಡಿಕೊಂಡಿದ್ದರೆಂಬುದು ತನಿಖೆಯಿಂದ ತಿಳಿದು ಬರಬೇಕಿದೆ. ಉಲ್ಲಾಸ್ ಹಾಗು ಸ್ನೇಹಿತರು ಗಾಂಜಾ ಸೇವಿಸಿರುವ ಕುರಿತು ವೈದ್ಯಕೀಯ ವರದಿ ಬಳಿಕ ಗೊತ್ತಾಗುತ್ತದೆಂದರು.

# ಉಪನ್ಯಾಸಕರ ತಪ್ಪಿಗೆ ಹೊಣೆಗಾರನಾಗುವುದಿಲ್ಲ: ಡಿಡಿಪಿಯು ಗಂಗಾಧರ್

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಕೆಲ ಕಾಲೇಜುಗಳ ಉಪನ್ಯಾಸಕರು ನಿಯಮಿತವಾಗಿ ತಮ್ಮ ಹಾಗು ವಿದ್ಯಾರ್ಥಿಗಳ ಹಾಜರಾತಿ ದಾಖಲಿಸುವಲ್ಲಿ ವಿಳಂಬ ಮಾಡಿದ್ದರಿಂದ ಶೇ.24 ರಷ್ಟು ಕೊರತೆಯಾಗಿದ್ದು, ನೀವು ಮಾಡುವ ತಪ್ಪಿಗೆ ನನ್ನನ್ನು ಹೊಣೆಗಾರರನ್ನಾಗಿಸಬೇಡಿ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಪಿ. ಗಂಗಾಧರ್ ಅವರು ಹೇಳಿದರು.




ಪದವಿ ಪೂರ್ವ ಶಿಕ್ಷಣ ಇಲಾಖೆ, ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಗಣಿತ ಶಾಸ್ತ್ರ ವೇದಿಕೆಯಿಂದ ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಬುಧವಾರ ಏರ್ಪಡಿಸಿದ್ದ 2025-26ನೇ ಸಾಲಿನ ಶೈಕ್ಷಣಿಕ ಕಾರ್ಯಾಗಾರ ಮತ್ತು ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿ, ಇಲಾಖೆ ಕಾರ್ಯದರ್ಶಿಗಳು ಇತ್ತೀಚೆಗೆ ನಡೆಸಿದ ಸಭೆ ಯೊಂದರಲ್ಲಿ ಅಧಿಕಾರಿಯೊಬ್ಬರನ್ನು ಉದ್ದೇಶಿಸಿ ಎಲ್ಲರೆದುರು ಅವಹೇಳನಕಾರಿಯಾಗಿ ಮಾತ ನಾಡಿದರು. ನನಗೆ ಆ ರೀತಿ ಬೈಯ್ದರೆ ಆ ದಿನವೇ ವೃತ್ತಿಗೆ ರಾಜೀನಾಮೆ ನೀಡುತ್ತೇನೆ. ಮಾಡದ ತಪ್ಪಿಗೆ ಅವಮಾನ ಸಹಿಸಿಕೊಳ್ಳುವ ಮನಸ್ಥಿತಿ ನನ್ನದಲ್ಲ. ದ್ವಿತೀಯ ಪಿಯುಸಿ ಪರೀಕ್ಷೆಗಳು ಸಮೀಪಿಸುತ್ತಿದ್ದು ಯಾವ ಕಾರಣಕ್ಕೂ ಹಾಜರಾತಿ ನೀಡುವಲ್ಲಿ ನಿರ್ಲಕ್ಷ್ಯ ತೋರಬಾರದೆಂದು ತೀಕ್ಷ್ಣವಾಗಿ ಹೇಳಿದರು.

ಫಲಿತಾಂಶದಲ್ಲಿ ಜಿಲ್ಲೆ ಈ ಬಾರಿ ಉತ್ತಮ ಸ್ಥಾನದಲ್ಲಿರಬೇಕು. ಅಧಿಕಾರಿಗಳ ಸಭೆಯಲ್ಲಿ ನಿಮ್ಮ ಪ್ರಯತ್ನವನ್ನು ಪ್ರಸ್ತುತಪಡಿಸಬೇಕು. ನೀಲನಕ್ಷೆ, ಕ್ವಷನ್ ಬ್ಯಾಂಕ್, ಮಾದರಿ ಪ್ರಶ್ನೆ ಪತ್ರಿಕೆ ತಯಾರಿಸಿ ಮಕ್ಕಳಿಗೆ ಪರೀಕ್ಷೆ ನಡೆಸಿ ಭಯ ಹೋಗಲಾಡಿಸಿರುವ ಕುರಿತು ಹೇಳಬೇಕು. ಮಗು ಎಷ್ಟೇ ಬುದ್ದಿವಂತನಾಗಿದ್ದರೂ ಪ್ರಶ್ನೆ ಪತ್ರಿಕೆಯ ಮಾಹಿತಿ ಹೊಂದಿದ್ದರಿದ್ದರೆ ಅಂಕಗಳಿಸಲು ಸಾಧ್ಯವಿಲ್ಲ. ಆದ್ದರಿಂದ ಇನ್ನುಳಿದ ಸಮಯವನ್ನು ಪ್ರಶ್ನೆ ಪತ್ರಿಕೆಗಳತ್ತ ಗಮನ ಹರಿಸಿ ವಿದ್ಯಾರ್ಥಿಗಳನ್ನು ಅಂತಿಮ ಪರೀಕ್ಷೆಗೆ ಸಜ್ಜುಗೊಳಿಸಬೇಕೆಂದು ಸಲಹೆ ನೀಡಿದರು.

ಪ್ರಸ್ತುತ ಶಿಕ್ಷಣ ವ್ಯವಸ್ಥೆಗೆ ಮೆಚ್ಚುಗೆ 1980-90ರ ಶಿಕ್ಷಣಕ್ಕೂ ಪ್ರಸ್ತುತ ದಿನಮಾನಗಳ ಶೈಕ್ಷಣಿಕ ವ್ಯವಸ್ಥೆಗೆ ಭಾರೀ ಬದಲಾವಣೆಯಾಗಿದೆ. ಮೊದಲೆಲ್ಲ ಗಣಿತ ಕಲಿಕೆಯೆಂದರೆ ವಿದ್ಯಾರ್ಥಿಗಳು ಹೆದರುತ್ತಿದ್ದರು. ಆದರೀಗ ಉಪನ್ಯಾಸಕರು ಸಾಕಷ್ಟು ತಯಾರಿ ಮಾಡಿಕೊಂಡು ಆಧುನಿಕ ತಂತ್ರಜ್ಞಾನಗಳೊಂದಿಗೆ ಸುಲಭ ವಾಗಿ ಅರ್ಥವಾಗುವಂತೆ ಪಾಠ ಮಾಡುತ್ತಾರೆ. ಅದರಿಂದ ಮಕ್ಕಳು ಹೆಚ್ಚು ಅಂಕ ಪಡೆಯಲು ಸಾಧ್ಯವಾಗುತ್ತಿದೆ. ಗಣಿತ ಶಾಸ್ತ್ರ ವಿಭಾಗದಿಂದ ಕಾರ್ಯಕ್ರಮ ಆಯೋಜಿಸಿರುವುದು ಒಳ್ಳೆಯ ಬೆಳವಣಿಗೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಿವೃತ್ತ ಪ್ರಭಾರ ಉಪನಿರ್ದೇಶಕ ರಮೇಶ್ ಅವರು ಮಾತನಾಡಿ, ಎಲ್ಲಾ ಪಠ್ಯಕ್ರಮಗಳನ್ನೊಳ ಗೊಂಡ ಸಂಘ ಮಾಡಿ ಕಾರ್ಯಕ್ರಮ ನಡೆಸುತ್ತಿದ್ದರು. ಆದರೆ ಗಣಿತಕ್ಕೆ ಯಾವ ಸಂಘವಿಲ್ಲದೆ ಇರುವ ಸಂದರ್ಭದಲ್ಲಿ ಅನೇಕ ರೀತಿಯ ಹೋರಾಟಗಳನ್ನು ಮಾಡಿ ಒಂದು ಸಂಘ ಮಾಡಿರುವುದು ಒಳ್ಳೆಯ ಕಾರ್ಯವೆಂದು ಶ್ಲಾಘಿಸಿದರು.

2025-26ನೇ ಸಾಲಿನಲ್ಲಿ ನಿವೃತ್ತರಾದ ಗಣತಿ ಉಪನ್ಯಾಸಕರಾದ ಅನಂತ ಪದ್ಮನಾಭಸ್ವಾಮಿ, ಕೃಷ್ಣಮೂರ್ತಿ, ಶಿವ ಕುಮಾರ್ ಹಾಗು ಕಳೆದ ಸಾಲಿನ ಪರೀಕ್ಷೆಯಲ್ಲಿ ಗಣಿತ ವಿಷಯದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಚ್.ಎಲ್. ಮಲ್ಲೇಶ ಗೌಡ, ಜಿಲ್ಲಾ ಗಣಿತ ಶಾಸ್ತ್ರ ವೇದಿಕೆ ಅಧ್ಯಕ್ಷ ವೆಂಕಟೇಶ್, ಡಿ.ವಿ.ಸುರೇಶ್, ಬಿ.ಆರ್.ದೇವರಾಜು, ಪ್ರಶಾಂತ ಕುಮಾರ್, ಸುರೇಶ್, ಗಿರೀಶ್, ಉದಯಕುಮಾರ್, ಎಸ್. ಲೋಕೇಶ್, ನಂದಿನಿ, ಪುರುಷೋತ್ತಮ್,ಮೋಹನ್‌ಕುಮಾರ್, ಶೋಭಾ, ಪ್ರಾಣೇಶ್‌ರಾವ್ ಹಾಗು ಇತರರಿದ್ದರು.

## ಅಕ್ಕಸಾಲಿಗನ ಮನೆಯಲ್ಲಿ ಚಿನ್ನಾಭರಣ ಕಳವು

**ಹಾಸನ:** ಮನೆಯ ಹೆಂಚು ತೆಗೆದು ಒಳನುಗ್ಗಿರುವ ಕಳ್ಳರು 2.48 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ತಾಲ್ಲೂಕಿನ ಗವೇನಹಳ್ಳಿಯಲ್ಲಿ ನಡೆದಿದೆ.

ಚಿನ್ನಾಭರಣ ರಿಪೇರಿ ಮಾಡಿಕೊಂಡಿದ್ದ ಅಕ್ಕಸಾಲಿಗ ಸೋಮಶೇಖರ ಎಂಬುವವರ ಮನೆಯಲ್ಲಿ ಡಿ.7 ರಿಂದ 9ರ ನಡುವೆ ಕಳ್ಳತನ ನಡೆದಿದೆ. ಬೆಂಗಳೂರಿನ ಅವರ ಮಗಳ ಮನೆಗೆ ಕುಟುಂಬ ಸಮೇತ ತೆರಳಿದ್ದರು. ಮೂರು ದಿನಗಳ ಬಳಿಕ ವಾಪಾಸ್ ಬಂದು ನೋಡಿದಾಗ ಬೀರುವಿನಲ್ಲಿಟ್ಟಿದ್ದ ಆಭರಣ ಇಲ್ಲದಿರುವುದು ಗೊತ್ತಾಗಿದೆ. ಗ್ರಾಹಕರು ಆಭರಣ ತಯಾರಿಕೆ ಹಾಗು ರಿಪೇರಿಗಾಗಿ ಕೊಟ್ಟಿದ್ದ 37 ಗ್ರಾಂ 4 ಮಿಲಿ ಗ್ರಾಂ ತೂಕದ ಚಿನ್ನದ ಘಟ್ಟಿ, 9 ಗ್ರಾಂ 5 ಮಿಲಿ ಗ್ರಾಂ ತೂಕದ ವಿವಿಧ ಬಗೆಯ ಚಿನ್ನಾಭರಣ ಕಳವು ಮಾಡಿದ್ದು ಅದರ ಒಟ್ಟು ಮೌಲ್ಯ 2.48 ಲಕ್ಷ ರೂ. ಆಗಿದೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕಾಡಾನೆ ಹಾವಳಿ ತಡೆಗೆ ರೈತರಿಂದ ಪ್ರತಿಭಟನೆ

## ಸರ್ಕಾರ, ಅರಣ್ಯ ಇಲಾಖೆ ವಿರುದ್ಧ ರೈತರು, ಕಾಫಿ ಬೆಳೆಗಾರರ ಆಕ್ರೋಶ

• ಪ್ರಜೋದಯ ವರದಿ

**ಬೇಲೂರು:** ನಿರಂತರ ಕಾಡಾನೆ ಹಾವಳಿ ಖಂಡಿಸಿ ತಾಲ್ಲೂಕಿನ ಕಣಗುಪ್ಪೆ, ಅನುಘಟ್ಟ ಸೇರಿ ಸುತ್ತಮುತ್ತಲಿನ ಗ್ರಾಮಸ್ಥರು, ರೈತರು ಹಾಗು ಕಾಫಿ ಬೆಳೆಗಾರರು ಬುಧವಾರ ಅರೇಹಳ್ಳಿ-ಬೇಲೂರು ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು.

ಕಾಡಾನೆಗಳ ಹಾವಳಿ ತಡೆಯಲು ವಿಫಲವಾಗಿರುವ ಸರ್ಕಾರ ಹಾಗು ಅರಣ್ಯ ಇಲಾಖೆ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಆಗಮಿಸಬೇಕೆಂದು ಒತ್ತಾಯಿಸಿ ಪ್ರತಿಭಟನೆಯನ್ನು ತೀವ್ರಗೊಳಿಸಿದರು.

ಈ ವೇಳೆ ಮಾತನಾಡಿ ಪ್ರತಿಭಟನಾಕಾರರು, ಮಲೆನಾಡು ಭಾಗವಾದ ಅರೇಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ 30ಕ್ಕೂ ಹೆಚ್ಚು ಕಾಡಾನೆಗಳ ಹಿಂಡು ಅನುಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬೀಡುಬಿಟ್ಟಿವೆ. ಕಾಡಾನೆಗಳನ್ನು ಓಡಿಸುವುದಾಗಲಿ, ಅವುಗಳಿಂದ ಜನರಿಗೆ ರಕ್ಷಣೆ ನೀಡುವುದಕ್ಕೆ ಅರಣ್ಯ ಇಲಾಖೆ ಒಬ್ಬ ಅಧಿಕಾರಿಯೂ ಈ ಭಾಗದ ಸಮಸ್ಯೆ ಆಲಿ ಸಲು ಬರುತ್ತಿಲ್ಲ ಎಂದು ದೂರಿದರು.



ಅನುಘಟ್ಟ ಗ್ರಾಮದಲ್ಲಿ ಕಳೆದ 20 ದಿನಗಳಿಂದ 30ಕ್ಕೂ ಹೆಚ್ಚು ಕಾಡಾನೆಗಳು ಈ ಭಾಗದಲ್ಲಿ ದಾಳಿ ಮಾಡಿ ನೂರಕ್ಕೂ ಹೆಚ್ಚು ಎಕರೆ ಭತ, ಕಾಫಿ, ಶುಂಠಿ, ತೆಂಗು ಸೇರಿ ಇನ್ನಿತರೆ ಬೆಳೆಯನ್ನು ಸಂಪೂರ್ಣ ನಾಶ ಮಾಡಿವೆ. ಇಷ್ಟೆಲ್ಲಾ ಸಮಸ್ಯೆ ಇದ್ದರೂ ಸಹ ಈ ಭಾಗದಲ್ಲಿ ಅರಣ್ಯ ಇಲಾಖೆಯ ಒಬ್ಬ ಅಧಿಕಾರಿಯೂ ಇತ್ತ ಸುಳಿದಿಲ್ಲ.

» ನಾಲ್ಕನೇ ಪುಟದಲ್ಲಿ

### ಡಿ.15ರಂದು ಬೇಲೂರು ಬಂದ್‌ಗೆ ಕರೆ

ಇಂದು ಕೇವಲ ಸಾಂಕೇತಿಕವಾಗಿ ರಸ್ತೆ ತಡೆ ನಡೆಸಿ ಪ್ರತಿಭಟನೆ ಮಾಡುತ್ತಿದ್ದೇವೆ. ಸೋಮವಾರ ಬಿಕ್ಕೋಡು ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆದು ಉಗ್ರ ರೀತಿಯಲ್ಲಿ ಪ್ರತಿಭಟಿಸುವುದರ ಜೊತೆಗೆ ಬೇಲೂರು ಬಂದ್‌ಗೆ ಕರೆ ನೀಡಲಾಗುವುದು. ಈ ವಿಚಾರವಾಗಿ ಸದನದಲ್ಲಿ ಶಾಸಕರು ಎಷ್ಟೇ ಬಾರಿ ಮನವಿ ಮಾಡಿದರು ಸಚಿವರಿಗೆ ಹಾಗು ಸರ್ಕಾರಕ್ಕೆ ರೈತರು, ಕಾಫಿ ಬೆಳೆ ಗಾರರ ಕಷ್ಟ ಅರಿಯಲು ಸಾಧ್ಯವಾಗುತ್ತಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

# ಅನಧಿಕೃತ ಭೂ ಮಂಜೂರಾತಿ ತನಿಖಾ ವರದಿ ಕೇಳಿದ ಸ್ವರೂಪ್

• ಪ್ರಜೋದಯ ವರದಿ

**ಬೆಳಗಾವಿ:** ಹಾಸನ ನಗರ ಸುತ್ತಲು ಸಾವಿರಾರು ಎಕರೆ ಸರ್ಕಾರಿ ಜಾಗವನ್ನು ಅಕ್ರಮವಾಗಿ ಮಂಜೂರು ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿ ನಡೆಸಿರುವ ತನಿಖಾ ವರದಿ ಬಹಿರಂಗವಾಗದೇ ಇರಲು ಕಾರಣವೇನೆಂದು ಶಾಸಕ ಹೆಚ್.ಪಿ.ಸ್ವರೂಪ್ ರಾಜ್ಯ ಸರ್ಕಾರವನ್ನು ಪ್ರಶ್ನಿಸಿದರು.



ಚಳಿಗಾಲದ ಅಧಿವೇಶನದಲ್ಲಿ ಬುಧವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ಪ್ರಕರಣಕ್ಕೆ ಸಂಬಂಧಿಸಿ ತನಿಖೆಗಾಗಿ 2025ರ ಜ.3ರಂದು ಸಮಿತಿ ರಚಿಸಲಾಗಿದೆ. ತನಿಖಾ ವರದಿ ಪರಿಶೀಲನೆ ಹಂತದಲ್ಲಿದೆ ಎಂದು ಮಾಹಿತಿ ನೀಡಲಾಗಿದೆ. ಅನಧಿಕೃತವಾಗಿ ಜಾಗ ಮಂಜೂರು ಮಾಡಿರುವುದು ಹೇಗೆ. ಈಗಾಗಲೇ ಆ ಜಾಗದಲ್ಲಿ ಲೇಔಟ್ ನಿರ್ಮಿಸಲಾಗುತ್ತಿದೆ. ಹಾಸನ ಸುತ್ತಲು ಸಾವಿರಾರು ಎಕರೆ ಅಕ್ರಮವಾಗಿ ಮಂಜೂರಾಗಿದ್ದು ಅದರಿಂದ ಸರ್ಕಾರದ ಬೊಕ್ಕಸಕ್ಕೆ 500 ಕೋಟಿ ರೂ. ನಷ್ಟವುಂಟಾಗಿದೆ. ಆದರೂ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಿಲ್ಲ. ಇದೇ ನಿರ್ಲಕ್ಷ್ಯ ಮುಂದುವರಿದರೆ ಭಾರೀ ತೊಂದರೆಯಾಗಲಿದೆ ಎಂದರು.

## ಸಾವಿರಾರು ಫಲಾನುಭವಿಗಳ ಆಸೆಗೆ ತಣ್ಣೀರು | ಜೆಡಿಎಸ್ ನಾಯಕರ ವಾಗ್ದಾಳಿ

# ಜನರಿಗೆ ಸವಲತ್ತು ನೀಡದೆ ಬರಿಗೈಯಲ್ಲಿ ಕಳಿಸಿದ ಸರ್ಕಾರ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ 50 ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಸವಲತ್ತು ಒದಗಿಸುತ್ತೇವೆಂದು ಸಮಾವೇಶಕ್ಕೆ ಕರೆಸಿಕೊಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾರ್ವಜನಿಕರನ್ನು ಬರಿಗೈಯಲ್ಲಿ ಕಳಿಸಿದ್ದಾರೆ. ಜಿಲ್ಲೆಗೆ ಕಾಂಗ್ರೆಸ್ ಕೊಡುಗೆ ಶೂನ್ಯವೆಂದು ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಟಿಯಲ್ಲಿ ಬುಧವಾರ ಮಾತನಾಡಿ, ಕಂದಾಯ ಇಲಾಖೆಯ ದರಖಾಸ್ತು ಪೋಡಿ, ಪೌತಿ ಖಾತೆ, ಕಂದಾಯ ಗ್ರಾಮ, 94ಸಿ ಹಕ್ಕು ಪತ್ರ ವಿತರಣೆ ಮಾಡುತ್ತಾರೆಂದು ಸಾವಿರಾರು ಜನರು ಆಸೆಗಣ್ಣಿನಿಂದ ಬಂದಿದ್ದರು. ವೇದಿಕೆಗೆ ಬಂದ ಮೇಲೆ ರಾಜಕೀಯ ಸಮಾವೇಶದಂತೆ ಭಾಸವಾಯಿತು. ಕಾಂಗ್ರೆಸ್‌ನ ಬಿಟ್ಟಿ ಪ್ರಚಾರಕ್ಕೆ ಸರ್ಕಾರದ ಹಣ ವ್ಯಯಿಸಿದ್ದಾರೆ. ಜಿಲ್ಲಾಧಿಕಾರಿ ಅವರು ಡಿ.6ರ ಸಮಾವೇಶಕ್ಕೆ ಖರ್ಚಾದ ವಿವರ ನೀಡಬೇಕೆಂದು ಒತ್ತಾಯಿಸಿದರು.




ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಉತ್ತಮ ಕೆಲಸ ಮಾಡುತ್ತಿದ್ದಾರೆ. ಸಮಾವೇಶದಲ್ಲಿ ಎಲ್ಲಾ ಫಲಾನುಭವಿಗಳಿಗೂ ಸೌಲಭ್ಯ ವಿತರಿಸುವುದಾಗಿ ಮೋಸ ಮಾಡಿದ್ದಾರೆ. ಸೌಲಭ್ಯ ಪಡೆದುಕೊಳ್ಳುವ ಆಸೆಗಾಗಿ ಅಂದು ಸಮಾವೇಶಕ್ಕೆ ಬಂದವರಿಗೆ ಇನ್ನೂ ಕೂಡ ಸೌಲಭ್ಯ ಸಿಗದೆ ನಿತ್ಯ ಕಚೇರಿಗೆ ಅಲೆದಾಡುತ್ತಿದ್ದಾರೆಂದರು.

ಕಾಂಗ್ರೆಸ್ ಸರ್ಕಾರವು ಕಳೆದ ಎರಡೂವರೆ ವರ್ಷದಲ್ಲಿ ಜಿಲ್ಲೆಗೆ ಎಷ್ಟು ಅನುದಾನ ಮಂಜೂರು ಮಾಡಿದೆ. ಉದ್ಘಾಟನೆಯಾಗಿರುವ ಕಾಮಗಾರಿಗಳಿಗೆ ಸರ್ಕಾರದ ಅನುದಾನ ಎಷ್ಟು ಎಂಬ ಕುರಿತು ಮಾಹಿತಿ ನೀಡಬೇಕೆಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಹೇಮಾವತಿ ಜಲಾಶಯದ ಬಳಿ ಉದ್ಯಾನವನ ನಿರ್ಮಾಣದ ಭರವಸೆ ನೀಡಿದ್ದಾರೆ. ಅದನ್ನು ನಾವು ಸ್ವಾಗತಿಸುತ್ತೇವೆ. ಈ ಹಿಂದೆ ನಾವು ಕೂಡ ಪ್ರಯತ್ನ ಮಾಡಿದ್ದೆವು. ಆದರೆ ಸಾಕರವಾಗಿ ರಲಿಲ್ಲ. ಇದು ಕೇವಲ ಭರವಸೆಯಾಗಿ ಉಳಿಯ ಬಾರದು. ಈ ಹಿಂದೆಯೂ ಮಲೆನಾಡು ಭಾಗ ದಲ್ಲಿ ರಸ್ತೆ ಕುಸಿತ ತಡೆಗೆ 299 ಕೋಟಿ ರೂ. ಕಳೆದ ಬಜೆಟ್‌ನಲ್ಲಿ ಘೋಷಿಸಿದ್ದರು. ಇದುವರೆಗೂ ಒಂದು ರೂ. ನೀಡಿಲ್ಲ. ಯೋಜನೆಗಳು ಕೇವಲ ಘೋಷಣೆಗೆ ಸೀಮಿತವಾಗಬಾರದೆಂದರು.

ರಾಜ್ಯ ಸರ್ಕಾರ ಅಭಿವೃದ್ಧಿ ಬದಲು ಭ್ರಷ್ಟಾಚಾರದಲ್ಲಿ ಮುಳುಗಿದೆ. ರಾಜ್ಯದಲ್ಲಿ ಶೇ.80 ರಷ್ಟು ಭ್ರಷ್ಟಾಚಾರ ನಡೆಯುತ್ತಿದೆ. ಭಷ್ಟಾಚಾರ ದಲ್ಲಿ ಕರ್ನಾಟಕ ದೇಶದಲ್ಲೇ ಐದನೇ ಸ್ಥಾನದ ಲ್ಲಿದೆ. ಎಸ್‌ಸಿ, ಎಸ್‌ಟಿ ಸಮುದಾಯದ ಅಭಿ ವೃದ್ಧಿಗೆ ಅನುದಾನ ಬಿಡುಗಡೆ ಮಾಡಿಲ್ಲ. ಬಜೆಟ್‌ನಲ್ಲಿ ಘೋಷಿಸಿದ ಅನುದಾನದಲ್ಲಿ 930 ಕೋಟಿ ರೂ. ಬಳಕೆಯಾಗಿಲ್ಲವೆಂದು ಆರೋಪಿಸಿದರು.

**ಹೋರಾಟದ ಎಚ್ಚರಿಕೆ**

ಅರ್ಜುನ ಆನೆ ಸಾವಿನ ಬಗ್ಗೆ ತನಿಖೆ ನಡೆಸುವಂತೆ ಪ್ರತಿಭಟನೆ ನಡೆಸಿದ ಹೋರಾಟಗಾರರ ವಿರುದ್ಧ ಪ್ರಕರಣ ದಾಖಲಿಸಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಪೊಲೀಸ್ ಹಾಗು ಅರಣ್ಯ ಇಲಾಖೆ ಅಧಿಕಾರಿಗಳು ತಮ್ಮ ಜವಾಬ್ದಾರಿ

» ನಾಲ್ಕನೇ ಪುಟದಲ್ಲಿ

# ಕಾಫಿ ಕಳವು: ಪೊಲೀಸ್ ಠಾಣೆ ಮೆಟ್ಟಿಲೇರಿದ ಬೆಳೆಗಾರರು

## ಕಳ್ಳರ ಬಂಧನಕ್ಕೆ ಆಗ್ರಹ: ಪ್ರಕರಣ ಗಂಭೀರವಾಗಿ ಪರಿಗಣಿಸಲು ಒತ್ತಾಯ

• ಪ್ರಜೋದಯ ವರದಿ

**ಅರೇಹಳ್ಳಿ:** ಕಾಫಿ ಫಸಲು ಕಳವು ಮಾಡುತ್ತಿರುವ ಖದೀಮರನ್ನು ಬಂಧಿಸಿ, ಬೆಳೆ ಉಳಿಸಿ ಕೊಡುವಂತೆ ಒತ್ತಾಯಿಸಿ ಕಾಫಿ ಬೆಳೆಗಾರರು ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾರೆ.

ಅರೇಹಳ್ಳಿ ಹೋಬಳಿ ಸುತ್ತಮುತ್ತ ನಾಲ್ಕೈದು ವರ್ಷಗಳಿಂದ ಮಿತಿ ಮೀರಿದ ಕಾಡಾನೆಗಳ ಹಾವಳಿ ನಡುವೆಯೂ ಕೃಷಿಯನ್ನೇ ಅವಲಂಬಿಸಿ ಕಾಫಿ ಹಾಗು ಇತರೆ ಬೆಳೆಗಳನ್ನು ಬೆಳೆಯುತ್ತಾ ಆರ್ಥಿಕ ಸಂಕಷ್ಟದೊಂದಿಗೆ ಜೀವನ ಸಾಗಿಸುತ್ತಿರುವ ಕಾಫಿ ಬೆಳೆಗಾರರಿಗೆ ಇದೀಗ ಕಾಫಿ ಧಾರಣೆ ಏರಿಕೆ ಕಂಡಿರುವುದು ನಿರಾಳತೆ ತಂದಿದೆ. ಆದರೆ ಈ ನಡುವೆ ಕಾಫಿ ಕಳವು ಪ್ರಕರಣಗಳು ಹೆಚ್ಚುತ್ತಿರುವುದು ಬೆಳೆಗಾರರಲ್ಲಿ ಆತಂಕ ಸೃಷ್ಟಿಸಿದೆ. ಹೀಗಾಗಿ ಕಾಫಿ ಬೆಳೆಗಾರರು ಅರೇಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.



ಕಳ್ಳರು ತೋಟಗಳಲ್ಲಿ ಹಸಿ ಕಾಫಿ ಕಳವು ಮಾಡುತ್ತಿರುವುದಲ್ಲದೆ ಇತ್ತೀಚೆಗೆ ಮನೆಯಂಗಳದ ಕಣದಲ್ಲಿಯೂ ಶೇಖರಿಸಿಟ್ಟ ಕಾಫಿಯನ್ನು ಸಹಾ ದೋಚಿತ್ತಿರುವುದು ಬೆಳಕಿಗೆ ಬಂದಿದೆ. ಈ ಹಿನ್ನಲೆ ಬೆಳೆಗಾರರು ದಿನನಿತ್ಯ ಆತಂಕದಿಂದ ಬದುಕುವಂತಹ ಸ್ಥಿತಿ ಎದುರಾಗಿದೆ. ಹೀಗಾಗಿ ಪೊಲೀಸರು ಕಾಫಿ ಕಳವು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಅವಶ್ಯಕ ಸುರಕ್ಷತೆ ಕ್ರಮ ಕೈಗೊಂಡು ನಮ್ಮೆಲ್ಲರಿಗೂ ನ್ಯಾಯ ಒದಗಿಸುವಂತೆ ಪೊಲೀಸರಲ್ಲಿ ಮನವಿ ಮಾಡಲಾಗಿದೆ ಎಂದು ಹೋಬಳಿ ಕಾಫಿ ಬೆಳೆಗಾರರ ಸಂಘ ಒತ್ತಾಯಿಸಿದೆ.

» ನಾಲ್ಕನೇ ಪುಟದಲ್ಲಿ

E-mail : prajodayahsn@gmail.com

ಪ್ರಜೋದಯ

# ಧನುರ್ಮಾಸದ ಕಥೆ ಹಾಗೂ ಮಾಹಿತಿ

ಶ್ರೀ ಕೃಷ್ಣನೇ ಹೇಳಿದಂತೆ ಮಾಸಗಳಲ್ಲಿ ಅತ್ಯಂತ ಶ್ರೇಷ್ಠವಾದ ಮಾಸ ಧನುರ್ಮಾಸ. ಸಾಮಗಳಲ್ಲಿ ಬೃಹತ್ ಸಾಮ, ಛಂದಸ್ಸುಗಳಲ್ಲಿ ಗಾಯಿತ್ರಿ, ಋತುಗಳಲ್ಲಿ ವಸಂತ ಋತು ನಾನಾಗಿರುವೆ ಎಂದು ಶ್ರೀ ಕೃಷ್ಣ ಹೇಳಿದ್ದಾನೆ. ಈ ವರ್ಷ ಡಿಸೆಂಬರ್ 16 ರಿಂದ ಧನುರ್ಮಾಸ ಆರಂಭವಾಗಿದೆ, ಜನವರಿ 14 ಮಕರ ಸಂಕ್ರಾಂತಿಯ ದಿನ ಮುಗಿಯುತ್ತದೆ. ಧನುರ್ ಅಂದರೆ ಬಾಣ, ಈ ಮಾರ್ಗಶಿರ ಮಾಸದಲ್ಲಿ ಸೂರ್ಯ ಒಂದು ರಾಶಿಯಿಂದ ರಾಶಿಗೆ ಸಂಚರಿಸಲು ತೆಗೆದುಕೊಳ್ಳುವ ಸಮಯ ಒಂದು ತಿಂಗಳು. ಸೂರ್ಯನು ಸಂಚರಿಸುತ್ತಾ ಧನುರಾಶಿಯಿಂದ, ಮಕರ ರಾಶಿಗೆ ಪ್ರವೇಶಿಸುವ ಒಂದು ತಿಂಗಳ ಕಾಲವೇ ಧನುರ್ಮಾಸ. ಮಾರ್ಗಶಿರ ಒಂದು ತಿಂಗಳು ಸೂರ್ಯ ಧನು ರಾಶಿಯಲ್ಲಿ ಇರುತ್ತಾನೆ. ಆದ್ದರಿಂದ ಧನುರ್ಮಾಸ ಎಂದು ಕರೆಯುತ್ತಾರೆ.

**ಡಿಸೆಂಬರ್ ಮತ್ತು ಜನವರಿ ತಿಂಗಳಲ್ಲಿ ಚಳಿಯ ಪ್ರಭಾವ**

ತೀವ್ರವಾಗಿರುತ್ತದೆ ಜನರು ಚಳಿ ಹೆಚ್ಚಾಗಿ ಬಿಲ್ಲಿನಂತೆ ಮಲಗಿರುತ್ತಾರೆ. ಈ ಮಾಸ ಧನುರ್ಮಾಸ. ವರ್ಷ ಆರು ತಿಂಗಳು ದಕ್ಷಿಣಾಯನ ಪುಣ್ಯಕಾಲ, ಈ ಕಾಲ ದೇವತೆಗಳಿಗೆ ರಾತ್ರಿ ಮಲಗಿರುತ್ತಾರೆ. ಆರು ತಿಂಗಳು ಉತ್ತರಾಯಣ ಪುಣ್ಯ ಕಾಲ ದೇವತೆಗಳ ಒಂದು ಹಗಲು. ಸೂರ್ಯ ರಾಶಿಯಿಂದ ರಾಶಿಗೆ ಸಂಚರಿಸುತ್ತಾ ಒಂದೊಂದು ಮಾಸದಲ್ಲಿ ಒಂದು ತಿಂಗಳು ಇರುತ್ತಾನೆ. ಆಯನ ಅಂದರೆ ಪಥ ಕೃಷ್ಣಗೆ ಪ್ರಿಯವಾದ ಧನುರ್ಮಾಸದಲ್ಲಿ ಸೂರ್ಯ ಇರುತ್ತಾನೆ. ಈ ಧನುರ್ಮಾಸ ಒಂದು ತಿಂಗಳು ಸೂರ್ಯ ದೇವ ಶ್ರೀಹರಿಯನ್ನು ಪೂಜಿಸುತ್ತಾನೆ.

**ಧನುರ್ಮಾಸದ ಕುರಿತು ಪುರಾಣ ಕಥೆಗಳಿವೆ.**





**ಕಥೆ:-** ಸೃಷ್ಟಿಕರ್ತನಾದ ಬ್ರಹ್ಮ ತನ್ನ ವಾಹನವಾದ ದೊಡ್ಡ ಹಂಸ ಪಕ್ಷಿಯ ಮೇಲೆ ಕುಳಿತು ಸಂಚಾರ ಮಾಡುತ್ತಿರುವಾಗ, ಒಂದು ಕಡೆ ಸೂರ್ಯನು ಬೇಕೆಂದೇ ಒಮ್ಮೆಲೇ ವಿಪರೀತ ಶಾಖವನ್ನು ಬ್ರಹ್ಮನ ಮೇಲೆ ಬಿಡುತ್ತಾನೆ. ಇದರಿಂದ ಶಾಖ ತಡೆಯಲು ಸಾಧ್ಯವಾಗಲಿಲ್ಲ. ಬ್ರಹ್ಮನಿಗೆ ಕೋಪ ಬಂದು, ಸೂರ್ಯನ ತೇಜಸ್ಸು ಕ್ಷೀಣಿಸಲಿ ಎಂದು ಶಾಪ ಕೊಟ್ಟನು. ಆಗ ಸೂರ್ಯನ ಶಾಖ ಸ್ಥಗಿತವಾಯಿತು. ಇದು ಕೆಲವು ಸಮಯಗಳಲ್ಲೇ ಬ್ರಹ್ಮಾಂಡದ ಮೇಲೆ ಪ್ರಭಾವ ಬೀರುತ್ತದೆ. ಮಾನವರು, ಋಷಿಮುನಿಗಳು, ಪಶು ಪಕ್ಷಿ ಪ್ರಾಣಿಗಳು, ಸೂರ್ಯನ ತೇಜಸ್ಸು ಇಲ್ಲದೆ ಒದ್ದಾಡುತ್ತಿದ್ದರು ಎಲ್ಲೆಡೆ ಹಾಹಾಕಾರ ಎದ್ದಿತು. ಋಷಿಮುನಿಗಳು ಸೇರಿ ಬ್ರಹ್ಮನನ್ನು ಕುರಿತು ಘೋರವಾದ ತಪಸ್ಸನ್ನು ಮಾಡಿದರು. ತಪಸ್ಸಿಗೆ ಮೆಚ್ಚಿದ ಬ್ರಹ್ಮನು ಪ್ರತ್ಯಕ್ಷನಾಗಿ ಋಷಿಮುನಿಗಳ ಸಮಸ್ಯೆಗೆ ಪರಿಹಾರ ರೂಪವಾಗಿ, ಸೂರ್ಯನು ಇರುವ ಧನುರ್ಮಾಸದ ಒಂದು ತಿಂಗಳು ಬ್ರಾಹ್ಮಿ ಮುಹೂರ್ತದಲ್ಲಿ ವಿಷ್ಣುವನ್ನು ಆರಾಧಿಸಿದರೆ ಸೂರ್ಯನ ತೇಜಸ್ಸು ಎಂದಿನಂತೆ ಪ್ರಕಾಶಿಸುತ್ತದೆ ಎಂದನು. ಸೂರ್ಯನು ಧನುರ್ಮಾಸದಲ್ಲಿರುವ ಒಂದು ತಿಂಗಳು ಸೂರ್ಯೋದಯ ಆಗುವ ಮೊದಲೇ ವಿಷ್ಣುವಿನ ಆರಾಧನೆ ಮಾಡಿ ಹುಗ್ಗಿಯನ್ನು ನೈವೇದ್ಯ ಮಾಡುತ್ತಿದ್ದನು. ಇದೇ ರೀತಿ 16 ವರ್ಷಗಳ ಮಾಡಿದ ನಂತರ ಸೂರ್ಯನ ತೇಜಸ್ಸು ಬೆಳಗಿ ಲೋಕ ಕಲ್ಯಾಣವಾಗುತ್ತದೆ. ಸೂರ್ಯನಿಂದ ಧನುರ್ಮಾಸದ ಪೂಜೆ ಆರಂಭಗೊಂಡಿದ್ದು ಎನ್ನಲಾಗಿದೆ. ಮಹರ್ಷಿ ಗೌತಮರು, ಭೃಗು ಮಹರ್ಷಿಗಳು, ವಿಶ್ವಾಮಿತ್ರರು, ಅಗಸ್ತ್ಯರು, ಹಾಗೂ ದೇವಾನು ದೇವತೆಗಳು ಧನುರ್ಮಾಸದ ಪೂಜೆ ಹಾಗೂ ಮಹಾವಿಷ್ಣುವಿಗೆ ಪ್ರಿಯವಾದ ಹುಗ್ಗಿಯನ್ನು ಅರ್ಪಿಸಿ ಭಗವಂತನ ಕೃಪೆಗೆ ಪಾತ್ರರಾದರು.

**ಕಥೆ:-** ಮತ್ತೊಂದು ಕಥೆಯ ಪ್ರಕಾರ, ಪಾಂಡವರು ಕಾಮ್ಯಕ ವನದಲ್ಲಿದ್ದಾಗ, ಒಬ್ಬರಲ್ಲ ಒಬ್ಬ ಋಷಿಗಳು ಬಂದು ಪಾಂಡವರ ಆಥಿತ್ಯ ಸ್ವೀಕರಿಸಿ ಅವರಿಗೆ ಸಮಾಧಾನವಾಗುವಂಥ ಕಥೆಗಳನ್ನು ಹೇಳುತ್ತಿದ್ದರು. ಹಾಗೂ ಯುಧಿಷ್ಠಿರನ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತಿದ್ದರು. ಹೀಗಿರುವಾಗ ಒಮ್ಮೆ ನಾರದರು ಬಂದರು. ಯುಧಿಷ್ಠಿರನು, ಮಹರ್ಷಿಗಳೇ, ನಾನು ರಾಜ್ಯ- ಕೋಶಾಧಿಗಳನ್ನು ಕಳೆದು ಕೊಂಡೆ, ಇದರಿಂದ ನನಗೇನು ಬೇಜಾರಿಲ್ಲ ಆದರೆ ನನ್ನ ಪತ್ನಿ ನನ್ನ ತಮ್ಮಂದಿರು ಕಷ್ಟ ಪಡುವುದನ್ನು ನಾನು ನೋಡಲಾರೆ. ಮುಂದೆ ಆಗುವ ಯುದ್ಧದಲ್ಲಿ ನಮಗೆ ಜಯ ಸಿಗಬೇಕಾದರೆ ನಾನು ಏನು ಮಾಡಬೇಕು ಎಂದು ಕೇಳಿದನು. ನಾರದರು, ದ್ರೌಪದಿಯನ್ನು ಕರೆದು, ಧನುರ್ಮಾಸದ ಒಂದು ತಿಂಗಳು ಶ್ರದ್ಧಾ ಭಕ್ತಿಯಿಂದ ವಿಷ್ಣುವಿನ ಪೂಜೆ ಮಾಡು ಎಂದು ಪೂಜೆಯ ಉಪದೇಶ ಮಾಡಿದರು. ಈ ರೀತಿ ಪೂಜೆ ಮಾಡುವುದರಿಂದ ಯುದ್ಧದಲ್ಲಿ ನಿಮಗೆ ಜಯ ಲಭಿಸುತ್ತದೆ ಎಂದರು. ಮುಂದೆ ಪಾಂಡವರೇ ಯುದ್ಧದಲ್ಲಿ ಜಯಗಳಿಸಿದರು.

ಈ ಧನುರ್ಮಾಸ ಅತ್ಯಂತ ಶ್ರೇಷ್ಠವಾದ ಮಾಸವಾಗಿದ್ದು ಭಗವಂತನಿಗೆ ಅರ್ಪಿತವಾದ ಮಾಸ. ಬೆಳಗಿನ ಜಾವ ನಕ್ಷತ್ರ ಇರುವಾಗಲೇ ಎದ್ದು ಶ್ರೀಹರಿಯ ಪೂಜೆ ಮಾಡಿ ಸೂರ್ಯೋದಯ ಆಗುವ ಮೊದಲೇ ನೈವೇದ್ಯವನ್ನು ಸಮರ್ಪಿಸಬೇಕು. ವಿಶೇಷವಾಗಿ ಹುಗ್ಗಿಯನ್ನು ಮಾಡಬೇಕು. ಇದರಲ್ಲೂ ಸಹ ಸಮ ಸಮ ಹೆಸರುಬೇಳೆ ಅಕ್ಕಿ ಹಾಕಿ ಮಾಡಿದ ಹುಗ್ಗಿ ಕೃಷ್ಣನಿಗೆ ಅತ್ಯಂತ ಪ್ರಿಯ, ಅಧಿಕ ಪುಣ್ಯ. ಒಂದು ಅಕ್ಕಿ ಅರ್ಧ ಹೆಸರು ಬೇಳೆ ಹಾಕಿದರೆ ಮಧ್ಯಮ ಪುಣ್ಯ. ಅಕ್ಕಿ ಕಾಲು ಭಾಗ ಹೆಸರು ಬೇಳೆ ಹಾಗೆ ಮಾಡಿದ ಹುಗ್ಗಿಯಿಂದ ಕನಿಷ್ಠ ಪುಣ್ಯ ಲಭಿಸುತ್ತದೆ. ಧನುರ್ಮಾಸ ಪೂರ್ತಿ ತಿಂಗಳು ಇದೇ ರೀತಿ ಮಾಡಲು ಆಗದಿದ್ದರೆ, ಒಂದು ದಿನವಾದರೂ ಬ್ರಾಹ್ಮಿ ಮುಹೂರ್ತದಲ್ಲಿ ಪೂಜೆ ಮಾಡಿ ಹುಗ್ಗಿ ಅರ್ಪಿಸಿದರೆ ಒಂದು ಸಾವಿರ ವರ್ಷಗಳ ಕಾಲ ಪೂಜೆ ಮಾಡಿದ ಪುಣ್ಯ ಲಭಿಸುತ್ತದೆ. ಈ ಮಾಸದಲ್ಲಿ ವಿಷ್ಣು ಸ್ತೋತ್ರಗಳನ್ನು ಹೇಳಬೇಕು ವಿಷ್ಣು ಸಹಸ್ರನಾಮವನ್ನು ಪಠಿಸಬೇಕು. ಈ ಮಾಸದಲ್ಲೇ ವೈಕುಂಠ ಏಕಾದಶಿ ಬರುತ್ತದೆ. ಅಂದು ಸ್ವರ್ಗದ ಬಾಗಿಲು ತೆರೆಯುತ್ತದೆ. ಮಕರ ಸಂಕ್ರಾಂತಿ ಹಬ್ಬದ ದಿನ ದಂದು ಅಂಡಾಳ್ಳು ಕೃಷ್ಣನಿಗೂ ಕಲ್ಯಾಣೋತ್ಸವ ಮಾಡುತ್ತಾರೆ. ಈ ರೀತಿಯಾಗಿ ಹತ್ತು ಹಲವು ರೀತಿಯಲ್ಲಿ ಧನುರ್ಮಾಸ ವಿಶೇಷವಾದ ಮಾಸವಾಗಿದೆ. ಲಕ್ಷ್ಮಿಯ ದ್ವಾದಶ ನಾಮ ಸ್ತೋತ್ರ ಹೇಳಿ ಪೂಜೆ ಮಾಡಿದರೆ ವಿಷ್ಣುವಿನ ಅನುಗ್ರಹ ಜೊತೆ ಲಕ್ಷ್ಮಿಯ ಅನುಗ್ರಹ ದೊರೆಯುತ್ತದೆ.

**ಶ್ರೀ ಲಕ್ಷ್ಮಿ ದ್ವಾದಶ ನಾಮ ಸ್ತೋತ್ರಂ :-**

**ಶ್ರೀದೇವಿ ಪ್ರಥಮಂ ನಾಮ**
**ದ್ವಿತೀಯಮಮೃತೋದ್ಭವಾ!**
**ತೃತೀಯಂ ಕಮಲಾ ಪ್ರೋಕ್ತಾ**
**ಚತುರ್ಥಂ ಲೋಕ ಸುಂದರೀ!!**
**ಪಂಚಮಂ ವಿಷ್ಣು ಪತ್ನೀ ಚ**
**ಷಷ್ಠಂ ಸ್ಯಾತ್ ವೈಷ್ಣವೀ ತಥಾ!**
**ಸಪ್ತತಂ ತು ವರಾರೋಹಾ**
**ಅಷ್ಟಮಂ ಹರಿವಲ್ಲಭಾ!!**
**ನವಮಂ ಶಾರ್ಂಗಿಣೀ ಪ್ರೋಕ್ತಾ**
**ದಶಮಂ ದೇವ ದೇವಿಕಾ!**
**ಏಕಾದಶಂ ತು ಲಕ್ಷ್ಮೀ: ಸ್ಯಾತ್**
**ದ್ವಾದಶಂ ಶ್ರೀ ಹರಿಪ್ರಿಯಾ!!**
**ದ್ವಾದಶೈತಾನಿ ನಾಮಾನಿ**
**ತ್ರೀ ಸಂಧ್ಯಂ ಯ: ಪಠೇನ್ನರ:**
**ಆಯುರಾರೋಗ್ಯಮೈಶ್ವರ್ಯಂ**
**ತಸ್ಯ ಪುಣ್ಯ ಫಲ ಪ್ರದಂ !!**
**ದ್ವಿಮಾಸಂ ಸರ್ವ ಕಾರ್ಯಾಣಿ**
**ಷಣ್ಮಾ ಸಾದ್ರಾಜ್ಯಮೇವ ಚ**
**ಸಂವತ್ಸ ರಂ ತು ಪೂಜಾಯಾ:**
**ಶ್ರೀ ಲಕ್ಷ್ಮೈ: ಪೂಜ್ಯ ಏವ ಚ!!**
**ಲಕ್ಷ್ಮೀಂ ಕ್ಷೀರ ಸಮುದ್ರ ರಾಜ ತನಯಾಂ**
**ಶ್ರೀರಂಗಧಾಮೇಶ್ವರೀಂ**
**ದಾಸಿ ಭೂತ ಸಮಸ್ತ ದೇವ ವನಿತಾಂ**
**ಲೋಕೈಕ ದೀಪಾಂ ಕುರಾನ್!**
**ಶ್ರೀ ಮನ್ಮಂದ ಕಟಾಕ್ಷ ಲಬ್ಧ**
**ವಿಭವ ಬ್ರಹ್ಮೇಂದ್ರ ಗಂಗಾಧರಾಂ**
**ತ್ವಾಂ ತ್ರೈಲೋಕ್ಯ ಕುಟುಂಬಿನೀಂ**
**ಸರಸಿಜಾಂ ವಂದೇ ಮುಕುಂದ ಪ್ರಿಯಾಂ**
**!!**
**ವಂದನೆಗಳೊಂದಿಗೆ,**

**- ಆಶಾ** ನಾಗಭೂಷಣ.

# ನಾನೂ ಟೀಚರ್ ಆಗುವೆ!



ದಿನವೂ ಪಠ್ಯದ ಅಭ್ಯಾಸದ ಜೊತೆಗೆ ವಾರಕ್ಕೊಮ್ಮೆ ಚಟುವಟಿಕೆಗಳನ್ನು ಮಾಡಿ ಸಂತಸ ಪಡುವ ನಮ್ಮ ಮಕ್ಕಳಿಗೆಲ್ಲ ಅಂದು ಸಂತೋಷದ ದಿನ. ಏಕೆಂದರೆ ಅಂದು ಮಕ್ಕಳ ದಿನಾಚರಣೆ. ರಂಗು ರಂಗಿನ ಮೈ ಬಣ್ಣ ಹೊದ್ದು, ಕಣ್ಣುಚ್ಚಿ ಬಿಡುವಷ್ಟರಲ್ಲಿ ಒಂದು ಗಿಡದಿಂದ ಇನ್ನೊಂದು ಗಿಡಕ್ಕೆ ಹಾರುವ ಹೂದೋಟದ ಪತಂಗಗಳಂತೆ ಕಾಣುತ್ತಿದ್ದ, ಬಣ್ಣ ಬಣ್ಣದ ಉಡುಗೆ ತೊಟ್ಟು, ಓಡಿ ಬಂದು ನಮ್ಮನ್ನೆಲ್ಲ ಮುತ್ತುಗೆ ಹಾಕಿ, ಮೌನವಾಗಿಯೇ ನಮ್ಮಿಂದ ಮಕ್ಕಳ ದಿನಾಚರಣೆಯ ಶುಭಾಶಯಗಳನ್ನು ಬಯಸುತ್ತಿದ್ದ ಮಕ್ಕಳ ಹಿಂಡನ್ನು ಕಂಡು, ಮಕ್ಕಳ ಜೊತೆ ನಾವೂ ಮಕ್ಕಳಾಗಿಯೇ ನಲಿದ ದಿನ.

ವಿವಿಧ ಕಾರ್ಯಕ್ರಮಗಳನ್ನು ನೀಡಿದ ಶಿಕ್ಷಕರು ಅಂದು ತಾವೂ ಸಹ ತಮ್ಮ ವಿದ್ಯಾರ್ಥಿ ಜೀವನದ ಆನಂದವನ್ನು ಸವಿದ ಸಂತಸದ ಕ್ಷಣಗಳನ್ನು ಹೇಳಲು ಪದಗಳೇ ಸಾಲದು...! ಅಂತೂ ಎಲ್ಲ ಕಾರ್ಯಕ್ರಮಗಳನ್ನು ಮುಗಿಸಿ, ಊಟದ ನಂತರ ಮಕ್ಕಳಿಗೆಲ್ಲ ಒಂದು ಸಣ್ಣದಾದ ಆಟ ಕೊಟ್ಟೆ, ಅದೇನೆಂದರೆ ಅವರು ದೊಡ್ಡವರಾದ ಮೇಲೆ ಏನಾಗ ಬಯಸುತ್ತಾರೆ? ಎಂಬುದು. ಈ ಪ್ರಶ್ನೆಯನ್ನು ಕೇಳಿದಾಗ ಪ್ರತಿಯೊಂದು ಮಗುವಿನ ಬಳಿಯೂ ಒಂದೊಂದು ವಿಶೇಷತೆಯನ್ನೊಳಗೊಂಡ ಉತ್ತರಗಳೆ ಇದ್ದವು... ಒಬ್ಬರು, ನಾನೂ ಡಾಕ್ಟರ್ ಆಗಿ ರೋಗಿಗಳಿಗೆ ಓಷಧಿ ಕೊಡುತ್ತೇನೆ ಎಂದರೆ ಇನ್ನೊಂದು ಮಗು, ನಾನೂ ಮಿಲಿಟರಿ ಮ್ಯಾನ್ ಆಗಿ ದೇಶ ಕಾಯುತ್ತೇನೆ ಎಂದು. ಇನ್ನು ಹೀಗೆ ಹಲವು ಹಲವು ವೃತ್ತಿಗಳ ಸಮೂಹವೇ ಕೊಠಡಿಯಲ್ಲಿತ್ತು. ಹೇಳಿದ ಎಲ್ಲ ಮಕ್ಕಳಲ್ಲೂ ಬೇರೆ ಬೇರೆ ಆಯ್ಕೆಗಳು ಇದ್ದವು, ಆದರೆ ನಾನು ನಿರೀಕ್ಷೆ ಮಾಡಿದ ಉತ್ತರ ಬಾರದ ಕಾರಣ ಮನಸ್ಸಿಗೆ ಕೊಂಚ ಬೇಜಾರಾಯಿತಾದರೂ, ಮತ್ತೊಂದು ಮಗುವನ್ನು ನಿಲ್ಲಿಸಿ ಕೇಳಿದೆ ನೀ ದೊಡ್ಡವಳಾದ ಮೇಲೆ ಏನಾಗುತ್ತೀ? ಎಂದು.

ವಾಸ್ತವದಲ್ಲಿ ತರಗತಿಯಲ್ಲಿ ಪಾಠ ಮಾಡುವಾಗ ಪಾಠ ಕೇಳದೆ ತನ್ನದೇ ಲೋಕದಲ್ಲಿ ಸಮಯ ಕಳೆಯುವ ಮಗು ಅದು. ಆದರೆ ಅದರ ಉತ್ತರ ಕೇಳಿ ನನ್ನಲ್ಲೊಂದು ನಗು ಅರಳಿತು. ಕಾರಣ. ಮಗು ಹೇಳಿತು ನಾನು ದೊಡ್ಡವಳಾದ ಮೇಲೆ ನಿಮ್ಮ ತರಹ ಟೀಚರ್ ಆಗ್ತೀನಿ ಎಂಬ ದೃಢ ನಿರ್ಧಾರದ ಉತ್ತರ.. ಉತ್ತರ ಕೇಳಿ ಮನಸ್ಸಿಗೆ ಸಂತೋಷವಾಗಿ ಮತ್ತೆ ಅವಳಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿದೆ. ಆಗಲಿ ಪುಟ್ಟ ನೀನು ಟೀಚರ್ ಆಗು, ಆದರೆ ನೀನು ತುಂಬಾ ಓದಿ ದೊಡ್ಡ ಮಕ್ಕಳಿಗೆ ಪಾಠ ಮಾಡುವ ಟೀಚರ್ ಆಗು ಎಂದು ನಾನು ಹೇಳಿದಾಗ ಮಗು ಹೇಳಿತು.. ಇಲ್ಲ ಇಲ್ಲ ನಾನು ನಿಮ್ಮ ಥರ ಟೀಚರ್ ಆಗ್ಬೇಕು ಎಂದು. ನನ್ನ ತರವೇ ಟೀಚರ್ ಆಗ್ಬೇಕಾ? ಅದೇನು ಹಾಗೆ? ಅಷ್ಟೊಂದು ಇಷ್ಟನಾ ನಾನು ನಿನಗೆ? ನೀ ಹೋಂವರ್ಕ್ ಮಾಡದೆ ಇದ್ದಾಗ ನಾನು ನಿನ್ನ ಮೇಲೆ ಸಿಟ್ಟು ಮಾಡುತ್ತೇನೆ, ಕೆಲವೊಮ್ಮೆ ಬೈಯುತ್ತೇನೆ, ಆದರೂ ನಾನು ನಿನಗೆ ಇಷ್ಟನಾ? ಎಂದೆಲ್ಲ ಕೆಲವು ಅಣಕದ ಪ್ರಶ್ನೆಗಳನ್ನು ಕೇಳಿದೆ.

ಆಗ ಮಗು ಹೇಳಿತು.. ನೀವು ನಾನು ಪಾಠ ಕೇಳದೆ ಇದ್ದಾಗ ಶಾಲೆಯಲ್ಲಿ ನನ್ನ ಹೆಸರನ್ನೇ ಕರೆದು ಹೇಳ್ತೀರಲ್ಲ ಅದೇ ನನಗೆ ಇಷ್ಟ, ನನ್ನ ಅಮ್ಮನೂ ಕೂಡ ಹಾಗೆ, ನಾ ಏನಾದರೂ ಕಿತಾಪತಿ ಮಾಡಿದ್ರೆ ನಿಮ್ಮ ಹಾಗೆ ಬೈತಾಳೆ, ಅದಕ್ಕೆ ಅವಳನ್ನ ನಾನು ಯಾವಾಗಲೂ ಕಾಡಿಸ್ತೇನೆ.. ನೀವು ನನ್ನ ಬೈದಾಗಲೆಲ್ಲ ನನಗೆ ಅಮ್ಮನೇ ಬೈತಿದ್ದಾಳೆ ಅನ್ಸತ್ತೆ ಅದ್ಕೆ ನೀವಂದ್ರೆ ನನಗೆ ಇಷ್ಟ, ಎಂದು ಆ ಮಗು ಹೇಳಿದಾಗ ಎಲ್ಲಿಲ್ಲದ ಆನಂದವಾಯಿತು.. ಆ ಮಗು ನನಗೆ ತಾಯಿಯ ಸ್ಥಾನ ಕೊಟ್ಟಿದೆ ಎಂದು. ಅದೆಲ್ಲ ಸರಿ ಆದರೆ ನಿನಗೆ ನಾನು ಇಷ್ಟ ಆಗೋದಕ್ಕೂ ನೀ ಟೀಚರ್ ಆಗೋದಕ್ಕೂ ಏನೂ ಸಂಬಂಧ? ಬಿಡಿಸಿ ಸರಿ ಮಾಡಿ ಹೇಳು ಮಾರಾಯಿತಿ, ಎಂದು ಕೇಳಿದಾಗ ಅವಳ ವಿವರಣೆ ತುಂಬಾ ವಿಶೇಷವಾಗಿತ್ತು.. ನೋಡಿ ಈಗ ನಿಮಗೆ ಇಂಗ್ಲೀಷ್ ಪಾಠ ಮಾಡೋಕು ಗೊತ್ತು, ಮ್ಯಾತ್ಸ್ ಗೊತ್ತಿದೆ, ಇ.ವಿ.ಎಸ್ ಗೊತ್ತು, ಎಲ್ಲ ಸಬ್ಜೆಕ್ಟ್ ಗೊತ್ತು. ನಮಗೆ ಪಿಟಿ ಸಹ ನೀವೇ ಹೇಳಿಕೊಡ್ತೀರಿ, ಮತ್ತೆ ತಿಂಡಿ ಬಾಕ್ಸ್ ಎಲ್ಲ ಓಪನ್ ಮಾಡಿ ಕೊಡ್ತೀರಿ, ಜುಟ್ಟು ಬಿಚ್ಚಿ ಹೋದ್ರೆ, ನೀವೇ ಸರಿ ಮಾಡ್ತೀರಿ, ಊಟ ಬಡಿಸ್ತೀರಿ, ಅಳು ಬಂದಾಗ ಸಮಾಧಾನ ಮಾಡಿ ಅಮ್ಮನಿಗೆ ಫೋನ್ ಮಾಡ್ತೀರಿ, ಎಷ್ಟೊಂದು ಕೆಲಸ ಮಾಡ್ತೀರಾ, ನೀವು ಬುದ್ಧಿವಂತರು ನಿಮಗೆ ಎಲ್ಲ ಗೊತ್ತಿದೆ. ಅದ್ಕೆ ನಾನು ನಿಮ್ಮ ಥರಾನೇ ಆಗ್ತೀನಿ ಎಂಬ ಆ ಮಗುವಿನ ನಿಷ್ಕಲ್ಮಶ ಮನಸ್ಸಿನ ಉತ್ತರ ಕೇಳಿ ಮನ ತುಂಬಿ ಬಂದಿತ್ತು. ಶಿಕ್ಷಕ ವೃತ್ತಿಯಲ್ಲಿರುವುದರ ಸಾರ್ಥಕತೆ, ಹೆಮ್ಮೆ ಆ ಕ್ಷಣ ಇಮ್ಮಡಿಯಾಗಿತ್ತು..!

ಎಷ್ಟೋ ಕ್ಷುಲ್ಲಕ ಕಾರಣಗಳಿಗೋಸ್ಕರ, ಅಯ್ಯೋ ಈ ಕೆಲಸವು ಬೇಡ ಈ ರಗಳೆಯೂ ಬೇಡ ಎಂದು ಬೇಜಾರು ಮಾಡಿಕೊಂಡ ಕ್ಷಣಗಳ ಅಪರಾಧಿ ಭಾವ ಅಂದು ಕಣ್ಮುಂದೆ ಬಂದಿತ್ತು. ಇರುವ ಭಾಗ್ಯವಾ ನೆನೆದು ಬಾರೇನೆಂಬುದ ಬಿಡು, ಹರುಷಕ್ಕಿದೆ ದಾರಿ ಎಂಬ ಡಿ. ವಿ. ಜಿ ಅವರ ನುಡಿಗಳಂತೆ ಕೆಲವೊಮ್ಮೆ ನಮ್ಮಲ್ಲಿರುವ ಸಂತೋಷ, ನೆಮ್ಮದಿ, ವಿಶೇಷತೆಗಳನ್ನು ಬಿಟ್ಟು ಬೇರೇನನ್ನೋ, ಬೇರೆಲ್ಲೋ ಹುಡುಕುವ ವ್ಯರ್ಥ ಪ್ರಯತ್ನವನ್ನು ಬಿಟ್ಟು, ನಮ್ಮ ಕೆಲಸದಲ್ಲಿ ನಿಷ್ಠತೆ, ಪ್ರಾಮಾಣಿಕತೆ, ಪ್ರೀತಿ ಇವೆಲ್ಲದರ ಜೊತೆ ಸಾಗಿದರೆ ಅದಕ್ಕಿಂತ ಸಂತೋಷ ಬೇರೊಂದಿಲ್ಲ ಎಂಬುವ ನೀತಿಯನ್ನು ಕೆಲವೊಮ್ಮೆ ಪ್ರಪಂಚದ ಅರಿವೇ ಇರದ ಮುಗ್ಧ ಮಕ್ಕಳಿಂದ ನಾವೂ ಕಲಿಯಬೇಕಿದೆ.

**- ರಮ್ಯಾ ಆರ್ ಭಟ್,** ಕುಂದಾಪುರ


## 11-12-2025 ದಿನ ಭವಿಷ್ಯ



**ಮೇಷ:** ಆರೋಗ್ಯ ಚೆನ್ನಾಗಿರುತ್ತದೆ. ಯೋಜಿತವಲ್ಲದ ಮೂಲಗಳಿಂದ ಹಣದ ಲಾಭ ನಿಮ್ಮ ದಿನವನ್ನು ಬೆಳಗಿಸುತ್ತದೆ. ನಿಮ್ಮ ಆಹ್ಲಾದಕರ ವರ್ತನೆ ಕುಟುಂಬ ಜೀವನವನ್ನು ಬೆಳಗುತ್ತದೆ. ಕೆಲವೇ ಜನರು ಇಂಥ ಪ್ರಾಮಾಣಿಕ ನಗುವಿರುವ ವ್ಯಕ್ತಿಯನ್ನು ನಿರ್ಲಕ್ಷಿಸಬಲ್ಲರು. ನೀವು ಇತರರ ಜೊತೆ ಚೆನ್ನಾಗಿರಬಹುದಾದಾಗ -ನೀವು ಒಂದು ಸುವಾಸನಾಯುಕ್ತ ಹೂವಿನ ಹಾಗೆ ಇರುತ್ತೀರಿ.



**ವೃಷಭ:** ಅನಂತ ಚೈತನ್ಯ ಮತ್ತು ಉತ್ಸಾಹ ನಿಮ್ಮನ್ನು ಆವರಿಸುತ್ತದೆ ಮತ್ತು ನೀವು ಯಾವುದೇ ಅವಕಾಶವನ್ನು ನಿಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತೀರಿ. ಇತರರ ಮೇಲೆ ಪ್ರಭಾವ ಬೀರಲು ತುಂಬಾ ವೆಚ್ಚ ಮಾಡಬೇಡಿ. ನಿಮ್ಮ ಕುಟುಂಬ ಸದಸ್ಯರೆಡೆಗೆ ನಿಮ್ಮ ಸರ್ವಾಧಿಕಾರಿ ಧೋರಣೆ ಕೇವಲ ಅನುಪಯುಕ್ತ ವಾದಗಳನ್ನು ಪ್ರಾರಂಭಿಸುತ್ತದೆ ಮತ್ತು ಇದು ಟೀಕೆಯನ್ನೂ ತರಬಹುದು.




**ಮಿಥುನ:** ಮಕ್ಕಳ ಸಂಗದಲ್ಲಿ ಶಾಂತಿ ಪಡೆಯಿರಿ. ನಿಮ್ಮ ಸ್ವಂತದ್ದಷ್ಟೇ ಅಲ್ಲದೇ ಬೇರೆಯವರ ಮಕ್ಕಳ ಚಿಕಿತ್ಸಕ ಶಕ್ತಿಗಳೂ ನಿಮಗೆ ಸಾಂತ್ವನ ನೀಡಬಹುದು ಮತ್ತು ನಿಮ್ಮ ಆತಂಕವನ್ನು ಶಮನಗೊಳಿಸಬಹುದು. ಹೊಸ ಹಣಗಳಿಕೆಯ ಅವಕಾಶಗಳು ಲಾಭದಾಯಕವಾಗಿರುತ್ತವೆ. ನಿಮ್ಮ ಪ್ರಣಯದ ಸಂಬಂಧಕ್ಕೆ ಇಂದು ಹಾನಿಯಾಗುತ್ತದೆ.




**ಕರ್ಕಾಟಕ:** ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ದೀರ್ಘಕಾಲದ ಲಾಭಗಳಿಗೆ ಸ್ಟಾಕ್‌ಗಳು ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದನ್ನು ಶಿಫಾರಸು ಮಾಡಲಾಗಿದೆ. ಗೃಹ ಜೀವನ ಶಾಂತಿಯುತ ಮತ್ತು ಉತ್ತಮವಾಗಿರುತ್ತದೆ ಪ್ರೇಮ ಜೀವನ ಭರವಸೆ ತರುತ್ತದೆ ಯಾವುದೇ ಹೊಸ ಜಂಟಿ ಉದ್ಯಮಕ್ಕೆ ಬದ್ಧರಾಗಬೇಡಿ




**ಸಿಂಹ:** ಗರ್ಭಿಣಿಯರಿಗೆ ವಿಶೇಷ ಕಾಳಜಿಯ ದಿನ. ಈ ರಾಶಿಚಕ್ರದ ವಿವಾಹಿತ ಜನರಿಗೆ ಇಂದು ಅತ್ತೆಮನೆಯ ಕಡೆಯಿಂದ ಹಣದ ಪ್ರಯೋಜನವಾಗುವ ಸಾಧ್ಯತೆ ಇದೆ. ಒಂದು ಹಳೆಯ ಸಂಪರ್ಕ ನಿಮಗೆ ಕೆಲವು ಸಮಸ್ಯೆಗಳನ್ನು ಸೃಷ್ಟಿಸಬಹುದು ನಿಮ್ಮ ಪ್ರೇಮದ ಸಂಗಾತಿ ನಿಮ್ಮನ್ನು ಹೊಗಳಬಹುದು. ಅವರನ್ನು ಏಕಾಂಗಿಯಾಗಿ ಈ ಪ್ರಪಂಚದಲ್ಲಿ ಬಿಡಬೇಡಿ.




**ಕನ್ಯಾ:** ಹಲ್ಲು ನೋವು ಅಥವಾ ಹೊಟ್ಟೆ ಹಾಳಾಗುವಿಕೆ ನಿಮಗೆ ಕೆಲವು ಸಮಸ್ಯೆಗಳನ್ನು ತರಬಹುದು. ತಕ್ಷಣ ಪರಿಹಾರ ಪಡೆಯಲು ವೈದ್ಯರ ಸಲಹೆ ಪಡೆಯಿರಿ. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡುಬರುತ್ತವೆ. ನಿಮ್ಮ ಸ್ನೇಹಿತರು ನಿಮ್ಮ ಉದಾರ ವರ್ತನೆಯ ದುರುಪಯೋಗ ಮಾಡಲು ಬಿಡಬೇಡಿ.



**ತುಲಾ:** ಸಂತೋಷದ ಸುದ್ದಿ ಪಡೆಯುವ ಸಾಧ್ಯತೆಯಿದೆ. ಹಣ ನಿಮಗೆ ಅಗತ್ಯವಾಗಿದೆ ಆದರೆ ನಿಮ್ಮ ಸಂಬಂಧಗಳನ್ನು ಹಾಳುಮಾಡುವಷ್ಟು ಹಣದ ಬಗ್ಗೆ ಗಂಭೀರವಾಗಬೇಡಿ. ಒಬ್ಬ ಹಳೆಯ ಸ್ನೇಹಿತ ದಿನದ ಅಂತ್ಯದಲ್ಲಿ ಒಂದು ಆಹ್ಲಾದಕರ ಭೇಟಿ ನೀಡುತ್ತಾರೆ.



**ವೃಶ್ಚಿಕ:** ಹೊರಾಂಗಣ ಚಟುವಟಿಕೆಗಳು ಇಂದು ದಣವು ಮತ್ತು ಒತ್ತಡ ತರುತ್ತವೆ. ಮನರಂಜನೆ ಅಥವಾ ಹೊರನೋಟದ ಸುಧಾರಣೆಗಾಗಿ ಹೆಚ್ಚು ಖರ್ಚು ಮಾಡಬೇಡಿ. ನೀವು ಸ್ನೇಹಿತರ ಮೂಲಕ ಪ್ರಮುಖ ಸಂಪರ್ಕಗಳನ್ನು ಹೊಂದುತ್ತೀರಿ. ಕೆಲವರಿಗೆ ಮದುವೆಯಾಗುವ ಸಾಧ್ಯತೆಗಳು ಹಾಗೂ ಇನ್ನೂ ಕೆಲವರಿಗೆ ಪ್ರಣಯ ಕಾಲ. ನೀವು ಸ್ವಲ್ಪ ಕಾಲ ಒಬ್ಬಂಟಿಯಾಗಿದ್ದಂತೆ ತೋರುತ್ತದೆ



**ಧನು:** ಕೆಲಸದ ನಡುವೆ ವಿಶ್ರಾಂತಿ ಪಡೆಯಲು ಪ್ರಯತ್ನಿಸಿ ಮತ್ತು ತಡರಾತ್ರಿ ಕೆಲಸ ಮಾಡುವುದನ್ನು ತಪ್ಪಿಸಿ. ನೀವು ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಮತ್ತು ಈ ಕೆಲಸದಲ್ಲಿ ದೀರ್ಘಕಾಲ ತೊಡಗಿಸಿಕೊಂಡಿದ್ದರೆ, ಇಂದು ನೀವು ಸಾಲ ಪಡೆಯಬಹುದು. ಸಂಬಂಧಿಗಳು ನಿಮ್ಮ ಅತೀ ಉದಾರ ವರ್ತನೆಯ ಅನುಚಿತ ಲಾಭ ಪಡೆಯಲು ಪ್ರಯತ್ನಿಸುತ್ತಾರೆ.



**ಮಕರ:** ಜನರಲ್ಲಿ ಬೆರೆಯುವ ಭಯ ನಿಮ್ಮನ್ನು ಧೈರ್ಯಗೆಡಿಸಬಹುದು. ಇದನ್ನು ತೆಗೆದುಹಾಕಲು ನಿಮ್ಮ ಸ್ವಾಭಿಮಾನವನ್ನು ಪ್ರೋತ್ಸಾಹಿಸಿ. ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಮತ್ತು ಸಮೃದ್ಧಿ ತರುತ್ತದೆ. ಸಾಮಾಜಿಕ ಕಾರ್ಯಗಳಿಗೆ ಹಾಜರಾಗಲು ಅವಕಾಶಗಳಿರಬಹುದು ಹಾಗೂ ಇದು ನಿಮ್ಮನ್ನು ಪ್ರಭಾವಿ ವ್ಯಕ್ತಿಗಳ ಜೊತೆ ನಿಕಟ ಸಂಪರ್ಕ ಹೊಂದುವಂತೆ ಮಾಡಬಹುದು.



**ಕುಂಭ:** ಮನರಂಜನೆ ಮತ್ತು ಮೋಜಿನ ಒಂದು ದಿನ. ನೀವು ನಿಮ್ಮ ಇಂದಿನ ದಿನವನ್ನು ಉತ್ತಮಗೊಳಿಸಲು ಕಳೆದ ದಿನಗಳಲ್ಲಿ ಹಣವನ್ನು ಹೂಡಿಕೆ ಮಾಡಿದ್ದರೆ, ಅದರ ಪ್ರಯೋಜನವನ್ನು ಇಂದು ನೀವು ಪಡೆಯಬಹುದು. ಸಹೋದ್ಯೋಗಿಗಳನ್ನು ನಿರ್ವಹಿಸುವಾಗ ಜಾಣತನದ ಅಗತ್ಯವಿದೆ. ಇಂದು ವಿಷಯಗಳು ನೀವು ಬಯಸುವ ರೀತಿಯಲ್ಲಿ ನಡೆಯದ ದಿನಗಳಲ್ಲಿ ಒಂದು.



**ಮೀನ:** ಸಂಗಾತಿಯೊಡನೆ ಚಲನಚಿತ್ರ - ರಂಗಭೂಮಿ ಅಥವಾ ಊಟ ನಿಮ್ಮನ್ನು ಒಂದು ಶಾಂತ ಮತ್ತು ಅದ್ಭುತವಾದ ಮನಸ್ಥಿತಿಯಲ್ಲಿರುತ್ತದೆ ಇಂದು ನೀವು ಹಣಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಹೊಂದಿರಬಹುದು. ಇದನ್ನು ಪರಿಹರಿಸುವುದಕ್ಕಾಗಿ ನೀವು ನಿಮ್ಮ ತಂದೆ ಅಥವಾ ತಂದೆಗೆ ಸಮಾನವಾದಂತಹ ಯಾವುದೇ ವೈವ್ಯಕ್ತಿಯಿಂದ ಸಲಹೆಯನ್ನು ತೆಗೆದುಕೊಳ್ಳಬಹುದು.

# ಬೆಲೆ ಅಸ್ಥಿರತೆಯ ಪರಿಹಾರಕ್ಕೆ ಬಲಿಷ್ಟ ಕೃಷಿಕ ಸಂಘಟನೆ ಅಗತ್ಯ

ರೈತನು ಬೆಳೆದ ಯಾವುದೇ ಉತ್ಪನ್ನಕ್ಕೂ ಬೆಲೆ ನಿರ್ಧರಣೆ ಮಾಡುವವರು ವ್ಯಾಪಾರಸ್ಥರು. ಮಾರುಕಟ್ಟೆಯ ಬೆಲೆ ಯಾವಾಗಲೂ ವ್ಯಾಪಾರಸ್ಥರ ಪರವಾಗಿ ಇರುತ್ತದೆಯೇ ಹೊರತು ರೈತನಿಗೆ ಅನುಕೂಲಕರವಾಗಿ ಇರುವುದೇ ಇಲ್ಲ. ಇದು ದೇಶದ ಪ್ರತೀಯೊಬ್ಬ ನಾಗರೀಕನಿಗೂ ತಿಳಿದಿರುವ ವಿಚಾರ. ಕೃಷಿ ಎಂದಿನಿಂದ ಇತ್ತೋ ಅಂದಿನಿಂದಲೂ ಇದೇ ವಿದ್ಯಮಾನ. ಅದನ್ನು ಸರಿಪಡಿಸುವ ನಿಟ್ಟಿನಲ್ಲಿ ಸ್ವತಂತ್ರ ಭಾರತದ ಆಡಳಿತ ಮಾಡಿದ ಸರಕಾರಗಳೆಲ್ಲಾ ಪ್ರಯತ್ನ ಮಾಡುತ್ತಾ ಬಂದಿವೆ. ಆದರೆ ಯಾವುದೂ ಫಲಕಾರಿಯಾಗಿಲ್ಲ. ಕೃಷಿಕರು ಕೂಗುತ್ತಲೇ ಇದ್ದಾರೆ. ಎಲ್ಲರೂ ಇದರ ಬಗ್ಗೆ ಅನುಕಂಪ ವ್ಯಕ್ತಪಡಿಸುತ್ತಾರೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಪರಿಹಾರ ಇಲ್ಲ.

ನಮ್ಮ ದೇಶದಲ್ಲಿ ಇಂಥಃ ಸಮಸ್ಯೆಗೆ ಪರಿಹಾರ ಹುಡುಕುವುದು ಅಷ್ಟು ಸರಳವೂ ಇಲ್ಲ. ಇದನ್ನು ಯಾವ ಸರಕಾರಕ್ಕೂ ಮಾಡಲು ಸಾಧ್ಯವೂ ಇಲ್ಲ. ಪರಿಸ್ಥಿತಿ ಹೀಗೇ ಮುಂದುವರಿಯುತ್ತಲೇ ಇರುತ್ತದೆ. ಇದಕ್ಕಿರುವ ಏಕೈಕ ಪರಿಹಾರ ಎಂದರೆ ಕೃಷಿ ಉತ್ಪನ್ನಗಳ ಕೊರತೆ ಉಂಟಾಗುವಂತೆ ರೈತರು ಮಾಡುವುದು. ಈಗ ಅದನ್ನು ದಾಸ್ತನುಗಾರರು ಮಾಡುತ್ತಿದ್ದಾರೆ. ಅದು ಬೆಳೆ ಬೆಳೆಸದೇ ಇರುವುದು ಅಲ್ಲ. ಬೆಳೆಸಿದ ಬೆಳೆಯನ್ನು ಮಾರುಕಟ್ಟೆಗೆ ಬಿಡದೇ ಕೊರತೆ ಉಂಟು ಮಾಡುವುದು. ಕೃಷಿ ಉತ್ಪನ್ನಗಳಲ್ಲಿ ವಿಶೇಷವಾಗಿ ಹಾಳಾಗದೇ ಇರುವ ವಸ್ತುಗಳ ಬೆಲೆ ನಿರ್ಧರಣೆ ಆಗುವುದು ಬೇಡಿಕೆ ಮತ್ತು ಪೂರೈಕೆಗಳ ಆಧಾರದ ಮೇಲೆ ಅಲ್ಲ. ಅದು ದೊಡ್ಡ ದಾಸ್ತಾನುಗಾರರ ದಾಸ್ತಾನಿನ ಮೇಲೆ. ಬೆಳೆಗಾರರಿಂದ ಕಡಿಮೆ ಬೆಲೆಗೆ ಖರೀದಿ ಮಾಡುತ್ತಾ ತಮ್ಮ ಗೋಡೌನುಗಳನ್ನೂ ಭರ್ತಿ ಮಾಡುತ್ತಾ ಬಹುತೇಕ ಬೆಳೆಗಾರರ ಉತ್ಪನ್ನ ಖಾಲಿ ಆದ ನಂತರ ಬೆಲೆ ಹೆಚ್ಚಳವಾಗಲಾರಂಭಿಸುತ್ತದೆ. ಇದರ ಲಾಭ ವ್ಯಾಪಾರಸ್ಥರಿಗೆ ಆಗುತ್ತದೆಯೇ ಹೊರತು ಬೆಳೆಗಾರರಿಗೆ ಆಗುವುದಿಲ್ಲ. ಇಲ್ಲಿ ಮತ್ತೊಂದು ಲಾಜಿಕ್ ಎಂದರೆ ಎಷ್ಟು ಸಮಯದ ತನಕ ಬೆಳೆಗಾರರಲ್ಲಿ ದಾಸ್ತಾನು ಇರುವುದೋ ಅಷ್ಟು ಸಮಯ ಬೆಲೆ ಸ್ಥಿರವಾಗಿ ಅಥವಾ ಇಳಿಕೆಯ ಸ್ಥಿತಿಯಲ್ಲಿ ಮುಂದುವರಿಯುತ್ತಲೇ ಇರುತ್ತದೆ. ಎಂದಾದರೂ ಬೆಳೆಗಾರರು ಬೆಳೆದ ಉತ್ಪನ್ನವನ್ನು ಮಾರಾಟ ಮಾಡಲೇ ಬೇಕು. ಆ ಸಮಯದ ತನಕ ವ್ಯಾಪಾರಸ್ಥರು ಕಾಯುತ್ತಿರುತ್ತಾರೆ. ಅಡಿಕೆ, ಬೇಳೆ ಕಾಳುಗಳು, ಎಣ್ಣೆ ಕಾಳುಗಳು, ತೆಂಗಿನಕಾಯಿ, ಭತ್ತ, ಗೋಧಿ ಎಲ್ಲವೂ ಅದೇ ರೀತಿ ವ್ಯವಹಾರ ನಡೆಯುತ್ತದೆ. ಬೆಲೆ ಕಡಿಮೆ ಆಗುವುದೇ ದಾಸ್ತಾನು ಹೆಚ್ಚಿಸುವ ಉದ್ದೇಶಕ್ಕೆ. ದಾಸ್ತಾನು ಭರ್ತಿ ಆದ ತರುವಾಯ ಅಲ್ಪ ಸ್ವಲ್ಪ ಬೆಲೆ ಏರಿಕೆ ಮಾಡುತ್ತಲೇ ಇರುತ್ತಾರೆ. ಬೆಲೆ ಏರಿಕೆಯ ಗತಿಯಲ್ಲಿರುವಾಗ ಬೆಳೆಗಾರು ಇನ್ನಷ್ಟು ಹೆಚ್ಚಳದ ನಿರೀಕ್ಷೆಯಲ್ಲಿ ಉತ್ಪನ್ನವನ್ನು ಮರುಕಟ್ಟೆಗೆ ಬಿಡುವುದಿಲ್ಲ. ಬಿಟ್ಟರೂ ಪ್ರಮಾಣ ತುಂಬಾ ಕಡಿಮೆ ಇರುತ್ತದೆ. ಈ ಸಮಯದಲ್ಲಿ ಇನ್ನೂ ಬೆಲೆ ಏರಿಕೆಯ ವದಂತಿಗಳನ್ನು ಹಬ್ಬಿಸುತ್ತಾ ಬೆಳೆಗಾರರು ಮಾರಾಟದಲ್ಲಿ ಆಸಕ್ತಿ ತೋರದೆ ಮತ್ತು ದಾಸ್ತಾನು ಮಾಡುವಂತ ಸನ್ನಿವೇಷವನ್ನು ಉಂಟುಮಾಡುತ್ತಾರೆ. ಏರಿಕೆಯ ತುತ್ತ ತುದಿ ಎಷ್ಟು ಎಂಬುದು ಯಾರಿಗೂ ಗೊತ್ತಿರುವುದಿಲ್ಲ. ಆದರೆ ವ್ಯಾಪಾರಸ್ಥರು ತಾವು ಖರೀದಿ ಮಾಡಿದ ಉತ್ಪನ್ನಗಳ ಸರಾಸರಿ ಬೆಲೆಗೆ 1 ವರ್ಷಕ್ಕೆ ಕನಿಷ್ಟ 25-30% ಬೆಲೆ ಹೆಚ್ಚಳವನ್ನು ಅಪೇಕ್ಷಿಸುತಾರೆ ಎಂಬುದಂತೂ ನಿಶ್ಚಿತ. ವರ್ಷವೊಂದರಲ್ಲಿ ಬೆಲೆ ಏರಿಕೆ ಇಳಿಕೆಯ ಗತಿ ಈ ಪ್ರಮಾಣದಲ್ಲಿ ನಡೆಯುತ್ತಿರುವುದನ್ನು ಎಲ್ಲರೂ ಗಮನಿಸಬಹುದು.

ಈ ಸಮಸ್ಯೆಯ ನಿವಾರಣೆಗೆ ಬೇಕಾದ ಕ್ರಮಗಳನ್ನು ಕೈಗೊಂಡರೆ ಮಾತ್ರ ಅದು ನಿಜವಾದ ರೈತ ಸ್ನೇಹೀ ಮಾರುಕಟ್ಟೆ ಸುಧಾರಣಾ ಕ್ರಮವಾಗುತ್ತದೆ. ಇದನ್ನು ಬೆಳೆಗಾರರೂ ಮಾಡಲು ಸಾಧ್ಯವಿದೆ. ಬೆಳೆಗಾರರೆಲ್ಲರೂ ಒಟ್ಟು ಸೇರಿ ಸಂಘಟಿತರಾಗಿ ತಮ್ಮ ಉತ್ಪನ್ನಗಳನ್ನು ದಾಸ್ತಾನು ಮಾಡುವ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು. ದಾಸ್ತಾನಿಗೆ ಇರುವ ಏಕೈಕ ಸಮಸ್ಯೆ ಎಂದರೆ ಬಂಡವಾಳದ ಕೊರತೆ. ಉತ್ಪನ್ನವನ್ನು ಬೆಳೆಸಲು ಮಾಡಿದ ಖರ್ಚನ್ನು ಅದನ್ನು ಮಾರಾಟ ಮಾಡಿಯೇ ಪಡೆಯಬೇಕಾಗಿರುವ ರೈತನ ಸಂಕಷ್ಟ ಅವನ ಸೋಲಿಗೆ ಕಾರಣ. ಒಂದಲ್ಲ ಒಂದು ದಿನ ಮಾರಾಟ ಮಾಡಲೇ ಬೇಕು. ಆ ಸಮಯ ಒಂದು ವರ್ಷದ ಒಳಗೆ ಯಾವಾಗಲಾದರೂ ಇದ್ದೇ ಇರುತ್ತದೆ. ಅದು ಪ್ರತೀ ವ್ಯಾಪಾರಸ್ಥರಿಗೂ ಗೊತ್ತಿದೆ. ಅದಕಾಗಿ ಬೆಲೆ ಏರಿಕೆ ಮಾಡುವುದೇ ಇಲ್ಲ. ಈ ಪರಿಸ್ಥಿತಿಯನ್ನು ತದ್ವಿರುದ್ಧ ಮಾಡಿದಾಗ ಉತ್ತಮ ಬೆಲೆ ಪಡೆಯುವಿಕೆ ಸಾಧ್ಯ. ಒಂದು ಬೆಳೆ ಬೆಳೆಸಲು ಹಾಕುವ ಬಂಡವಾಳದಷ್ಟೇ ಅದನ್ನು ದಾಸ್ತಾನು ಇಟ್ಟುಕೊಳ್ಳಲೂ ಬೇಕಾಗುತ್ತದೆ. ಜೀವನ ನಿರ್ವಹಣೆಗೆ, ಮುಂದಿನ ಬೆಳೆ ನಿರ್ವಹಣೆಗೆ ಹಣಕಾಸಿನ ಅಡಚಣೆ ಆಗದಷ್ಟು ಬೆಳೆಗಾರ ಅನುಕೂಲಸ್ಥನಾದಾಗ ದಾಸ್ತಾನು ಇಡುವುದು ಸುಲಭ. ಇದಕ್ಕೆ ಒಂದು ತಾಲೂಕು ಅಥವಾ ಹೋಬಳಿಯ ಎಲ್ಲಾ ನಿರ್ದಿಷ್ಟ ಬೆಳೆಗಾಗರು ಒಟ್ಟು ಸೇರಿ ದಾಸ್ತಾನು ಗೋಡೌನುಗಳನ್ನು ನಿರ್ಮಿಸಿಕೊಂಡು, ಆ ದಾಸ್ತಾನಿನ ಮೇಲೆ ಬ್ಯಾಂಕು ಸಾಲವನ್ನು ಪಡೆದು ಅವರವರ ಬೆಳೆ ಪ್ರಮಾಣಕ್ಕನುಗುಣವಾಗಿ ಬಳಕೆ ಮಾಡಿಕೊಳ್ಳಬೇಕು. ತುರ್ತು ಅವಶ್ಯಕತೆಗೆ ಮಾರಾಟ ಮಾಡುವ ಸಮಯದಲ್ಲಿ ಎಷ್ಟು ಮೊತ್ತದ ಅವಷ್ಯಕತೆ ಇದೆಯೋ ಅಷ್ಟನ್ನು ಮಾತ್ರ ಮಾರಾಟ ಮಾಡಬೇಕು. ಪ್ರತೀ ಬೆಳೆಗಾಗರೂ ತಮ್ಮ ಬೆಳೆಯ ಮೇಲೆ ಆವರ್ತ ನಿಧಿಯನ್ನು ಕ್ರೋಢೀಕರಿಸಬೇಕು. ಬೆಲೆ ತೀವ್ರ ಕುಸಿತ ಮುಂತಾದ ಸಮಯದಲ್ಲಿ ಇದು ನೆರವಾಗುವಂತಿರಬೇಕು.

ಇದನ್ನು ಸಹಕಾರಿ ಸಂಘಗಳು ಮಾಡಬಹುದಾದರೂ ಇತ್ತೀಚೆಗೆ ಸಹಕಾರೀ ಸಂಘಗಳೂ ಸಹ ತೀರಾ ವ್ಯವಹಾರಿಕವಾಗಿದ್ದು, ಈ ದಿಶೆಯಲ್ಲಿ ಅವರು ರೈತ ಪರವಾಗಿ ಕೆಲಸ ಮಾಡುವುದು ಕಡಿಮೆಯಾಗಿದೆ. ಉದಾಹರಣೆಗೆ ನಮ್ಮ ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಯಾದ ಅಡಿಕೆ ಮಾರುಕಟ್ಟೆಯನ್ನು ಗಮನಿಸಿ. ಸಹಕಾರೀ ವ್ಯವಸ್ಥೆಗೂ , ಖಾಸಗಿ ವರ್ತಕರಿಗೂ ಯಾವುದೇ ವ್ಯತ್ಯಾಸ ಇಲ್ಲ. ಬೆಲೆ ಸ್ಥಿರತೆ ಬಗ್ಗೆ ಯಾವ ರೀತಿ ಕೆಲಸ ಮಾಡುತ್ತಾರೆ ಎಂಬುದು ಅರ್ಥವಾಗುತ್ತಿಲ್ಲ. ಖಾಸಗಿಯವರಿಂದ ಹಿಡಿದು ಎಲ್ಲರದ್ದೂ ಗರಿಷ್ಟ ಲಾಭ ಮಾಡಿಕೊಳ್ಳುವ ವ್ಯವಹಾರವೇ ಆಗಿದೆ. ನಮ್ಮ ದೇಶದ ರೈತರು ಆರ್ಥಿಕವಾಗಿ ಸಬಲರಾಗಬೇಕು. ಒಂದು ವರ್ಷ ತಮ್ಮ ಉತ್ಪನ್ನವನ್ನು ಮಾರಾಟ ಮಾಡದೆಯೂ ಬದುಕುವಷ್ಟು

ಸಬಲರಾಗಬೇಕು. ಇದು ಈ ತನಕ ಆಗಿಲ್ಲ. ಸರಕಾರ ಕೃಷಿಕರಿಗೆ ಸವಲತ್ತುಗಳನ್ನು ಕೊಡುತ್ತಿದೆ. ದೇಶದ ನಾಗರೀಕರಿಂದ ಸರಕಾರ ಏನು ಮಾಡಬೇಕು ಎಂಬ ಬಗ್ಗೆ ಕೇಳುತ್ತಿದೆ.

ಈ ಸಮಯದಲ್ಲಿ ರೈತರೆಲ್ಲಾ ಒಟ್ಟಾಗಿ ತಮ್ಮ ಆರ್ಥಿಕ ಸಬಲೀಕರಣಕ್ಕಾಗಿ ಸರಕಾರದ ಮುಂದೆ ಹೆಚ್ಚುವರಿ ಸಾಲಮಿತಿ ನಿರ್ಧರಣೆ, ಕಡಿಮೆ ಬಡ್ಡಿ, ಮತ್ತು ಸಾರ್ವಜನಿಕ ಹಿತದ ಗೋಡೌನು ಮುಂತಾದವುಗಳ ನಿರ್ಮಾಣ ಈ ಬಗ್ಗೆ ಗಮನಕ್ಕೆ ತರಬೇಕು. ಹೆಚ್ಚು ಹೆಚ್ಚು ಜನರ ಒತ್ತಡ ಸ್ವಲ್ಪ ಮಟ್ಟಿಗಾದರೂ ಕೆಲಸ ಮಾಡುತ್ತದೆ. ಸಣ್ಣ, ಮಧ್ಯಮ ಮತ್ತು ದೊಡ್ಡ ರೈತ ಎಂಬ ಬೇಧವನ್ನು, ರಾಜಕೀಯ ದ್ವೇಷಗಳನ್ನು ಈ ವಿಚಾರದಲ್ಲಿ ಮರೆತು ಬಿಡಬೇಕು.

**- ರಾಧಾಕೃಷ್ಣ** ಹೊಳ್ಳ



# ದೈವಶಕ್ತಿ ಮತ್ತು ಮಾನವ ಶಕ್ತಿ

ದೇವರು ಎಂಬ ನಂಬಿಕೆಯ ಸುತ್ತ ಇರುವ ಭಕ್ತಿಯೇ ದೈವಿಕ ಶಕ್ತಿ. ಇದು ಸರ್ವಶಕ್ತ, ಸರ್ವಾಂತರ್ಯಾಮಿ, ಸರ್ವವ್ಯಾಪಿ, ಅಗೋಚರ, ಅತಿಮಾನುಷ, ಅದೃಶ್ಯ ಶಕ್ತಿ. ಬಹುತೇಕ ಜಗತ್ತಿನ ಎಲ್ಲಾ ಕಡೆಯೂ ಈ ಪರಿಕಲ್ಪನೆಯ ವಿಧಾನ ಒಂದೇ ರೀತಿಯಲ್ಲಿದೆ. ಧರ್ಮಗಳು, ಮತಗಳು, ಭಾಷೆಗಳು, ಪ್ರದೇಶಗಳು, ಆಡಳಿತಾತ್ಮಕ ವ್ಯವಸ್ಥೆಗಳು ಬೇರೆ ಬೇರೆ ಇರಬಹುದು. ಆದರೆ ದೈವಿಕ ಶಕ್ತಿಯ ನಂಬಿಕೆ ಮಾತ್ರ ಒಂದೇ ರೀತಿ ಇದೆ.

ಈ ಜಗತ್ತನ್ನು, ಎಲ್ಲಾ ಜೀವರಾಶಿಗಳನ್ನು ಸೃಷ್ಟಿಸಿರುವುದೇ ಆ ದೈವಶಕ್ತಿ. ಈ ಜಗತ್ತು ಮುಂದುವರೆಯುತ್ತಿರುವುದು ಆ ದೈವ ಶಕ್ತಿಯ ಬಲದಿಂದಲೇ. ನಮ್ಮನ್ನೆಲ್ಲ ಆ ದೈವ ಶಕ್ತಿಯೇ ನಿಯಂತ್ರಿಸುತ್ತಿದೆ. ನಮ್ಮ ಬದುಕಿನ ಆಗುಹೋಗುಗಳಿಗೆ, ಕಷ್ಟ ನಷ್ಟಗಳಿಗೆ, ಸುಖ-ದುಃಖಗಳಿಗೆ ಆ ಶಕ್ತಿಯೇ ಕಾರಣ. ನಾವು ಇಲ್ಲಿ ನಿಮಿತ್ತ ಮಾತ್ರ. ಆತನ ಕೃಪೆಯಿಂದಲೇ ನಾವು ಇಂದು ಬದುಕಿದ್ದೇವೆ ಎಂದೇ ದೈವಿಕ ಶಕ್ತಿಯನ್ನು ನಂಬುವ ಎಲ್ಲರ ಭಾವನೆಯಾಗಿದೆ.

ಅದಕ್ಕೆ ವಿರುದ್ಧವಾಗಿ ದೈವಿಕ ಶಕ್ತಿ ಎಂಬುದೇ ಒಂದು ಭ್ರಮೆ, ಕಾಲ್ಪನಿಕ ಮತ್ತು ನಂಬಿಕೆ ಮಾತ್ರ. ವಾಸ್ತವವಲ್ಲ. ಈ ಜಗತ್ತಿನಲ್ಲಿ ಯಾವುದೇ ಅತಿಮಾನುಷ ಶಕ್ತಿಯೂ ಇಲ್ಲ. ಎಲ್ಲವೂ ಈ ಪ್ರಾಕೃತಿಕ ಸೃಷ್ಟಿಯ ನಿಯಮದ ಅಡಿಯಲ್ಲಿಯೇ ನಡೆಯುತ್ತಿದೆ. ಪ್ರಕೃತಿಯೇ ಒಂದು ಜೀವದ್ರವ್ಯ, ಸೃಷ್ಟಿಯ ಮೂಲ. ಅದರ ಶಕ್ತಿಯ ಅಡಿಯಲ್ಲಿಯೇ ನಾವು ಬದುಕುತ್ತಿದ್ದೇವೆ. ಎಲ್ಲವೂ ಒಂದಕ್ಕೊಂದು ಪೂರಕವಾಗಿ ನಮ್ಮ ಅರಿವು, ಅನುಭವದಿಂದಲೇ ಜಗತ್ತು ಬೆಳವಣಿಗೆ ಹೊಂದುತ್ತಾ ಬಂದಿದೆ ಮತ್ತು ಈ ಹಂತ ತಲುಪಿದೆ. ಎಲ್ಲವೂ ಮಾನವ ಶಕ್ತಿಯ ಬಲದಿಂದಲೇ ನಡೆಯುತ್ತಿದೆ.

ಮಾನವೀಯ ಮೌಲ್ಯಗಳೇ ಈ ನಾಗರೀಕ ಸಮಾಜದ ಬಹುದೊಡ್ಡ ಶಕ್ತಿ. ಅದನ್ನು ನಿಯಂತ್ರಿಸಲು ನೀತಿ ನಿಯಮಗಳ ಸಾಂವಿಧಾನಿಕ ಶಕ್ತಿ ಇದೆ. ಈಗ ನಾವು ಅನುಸರಿಸಬೇಕಾಗಿರುವುದು ದೈವಿಕ ಶಕ್ತಿಯನ್ನಲ್ಲ ಮಾನವ ಶಕ್ತಿಯನ್ನು. ಆ ಶಕ್ತಿ ಮೌಲ್ಯಗಳ ದೃಷ್ಟಿಯಲ್ಲಿ ಅಧ:ಪತನದತ್ತ ಸಾಗುತ್ತಿದೆ. ಅದನ್ನು ಸರಿ ಮಾಡಲು ಯಾವ ದೈವಿಕ ಶಕ್ತಿಯಿಂದಲೂ ಸಾಧ್ಯವಿಲ್ಲ. ಮಾನವ ಶಕ್ತಿಯೇ ಜೀವಪರ ನಿಲುವನ್ನು ತಳೆದು ಈ ಎಲ್ಲಾ ವಿಧ್ವಂಸಕ ಕೃತ್ಯಗಳಿಂದ ಹೊರಬಂದು ಮಾನವೀಯ ಮೌಲ್ಯಗಳ ನಾಗರಿಕ ಪ್ರಜ್ಞೆಯೊಂದಿಗೆ ಬದುಕು ರೂಪಿಸಿಕೊಳ್ಳಬೇಕಿದೆ. ಇದೆ ಜನಶಕ್ತಿ ಅಥವಾ ಮಾನವ ಶಕ್ತಿ.

ರಾಮ, ಕೃಷ್ಣ, ಅಲ್ಲಾ, ಬ್ರಹ್ಮ, ವಿಷ್ಣು, ಮಹೇಶ್ವರ, ಮಾರಮ್ಮ, ಕಾಳಮ್ಮ, ದೇವಿ, ದುರ್ಗೆ ಮುಂತಾದ ದೇವರುಗಳು ದೈವಿಕ ಶಕ್ತಿಯ ಸಂಕೇತಗಳಾದರೆ, ಬುದ್ಧ, ಮಹಾವೀರ, ಜೀಸಸ್, ಪೈಗಂಬರ್, ಗುರುನಾನಕ್, ಬಸವಣ್ಣ, ವಿವೇಕಾನಂದ, ಕಾರ್ಲ್ ಮಾರ್ಕ್ಸ್, ಗಾಂಧಿ, ಅಂಬೇಡ್ಕರ್ ಮುಂತಾದವರು ಜೀವಪರ ನಿಲುವಿನ ಮಾನವ ಶಕ್ತಿಯ ಸಂಕೇತ. ಈಗ ನಮ್ಮ ಮುಂದೆ ಎರಡು ಆಯ್ಕೆಗಳಿವೆ. ದೈವಶಕ್ತಿ ಮತ್ತು ಜನಶಕ್ತಿ. ಎರಡನ್ನೂ ಸಂಭಾಳಿಸಿಕೊಂಡು ಯಾವುದನ್ನೂ ಅತಿಯಾಗಿ ನಂಬದೇ ವಾಸ್ತವ ನೆಲೆಯಲ್ಲಿ ಜೀವಿಸುವ ಒಂದು ವರ್ಗ.

ದೈವಿಕ ಶಕ್ತಿಯೇ ಪರಮೋಚ್ಚ ಶಕ್ತಿ ಎಂದು ಅದನ್ನೇ ನಂಬಿ ಬದುಕುತ್ತಿರುವ ಇನ್ನೊಂದು ವರ್ಗ. ಯಾವ ದೈವ ಶಕ್ತಿಯೂ ಇಲ್ಲ. ಜನಶಕ್ತಿಯೇ ನಮ್ಮೆಲ್ಲರ ಶಕ್ತಿ. ಅದೇ ನಮ್ಮ ಸಮಾಜದ ಚಾಲನ ಶಕ್ತಿ ಎಂದು ನಂಬಿರುವ ಮತ್ತೊಂದು ವರ್ಗ. ವಿಷಯ ಇಷ್ಟು ಸರಳವಾಗಿ ಅರಿವಿನ ಅಂಚಿನಲ್ಲಿಯೇ ಸಾಗುತ್ತಿದ್ದರೆ ಸಮಸ್ಯೆಗಳು ಉದ್ಭವವಾಗುತ್ತಿರಲಿಲ್ಲ. ಆದರೆ ದೈವಶಕ್ತಿ ಮತ್ತು ಜನಶಕ್ತಿ ಪರಸ್ಪರ ವಿರುದ್ಧ ಮತ್ತು ಸಂಘರ್ಷದಲ್ಲಿ ತೊಡಗಿರುವ ಕಾರಣದಿಂದಲೇ ಸಮಾಜ ಸಂಪೂರ್ಣ ನಿಯಂತ್ರಣಕ್ಕೆ ಬಂದಿಲ್ಲ. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ದೈವಿಕ ಶಕ್ತಿ ಮನುಷ್ಯನಲ್ಲಿ ಅನೇಕ ರೀತಿಯ ವಿಭಜನೆಗೆ, ಶ್ರೇಷ್ಠತೆಯ ವ್ಯಸನಕ್ಕೆ ಕಾರಣವಾಗಿದೆ. ಅನೇಕ ಜನರ ಶೋಷಣೆಗೆ ದೈವಿಕ ಶಕ್ತಿಯನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ಅದಕ್ಕೆ ವಿರುದ್ಧವಾಗಿ ಜನಶಕ್ತಿ ಅದನ್ನು ನಿರಾಕರಿಸುತ್ತಿರುವುದರಿಂದ ಘರ್ಷಣೆಗಳು ಪ್ರಾರಂಭವಾಗಿದೆ. ದೈವಿಕ ಶಕ್ತಿಯ ಅತಿಯಾದ ನಂಬಿಕೆಯ ಕಾರಣದಿಂದಲೇ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಅನೇಕ ಹತ್ಯಾಕಾಂಡಗಳು ನಡೆದಿವೆ ಮತ್ತು ನಡೆಯುತ್ತಿವೆ. ಮನುಷ್ಯ ಶಕ್ತಿಗೂ, ಸಾಂವಿಧಾನಿಕ ಶಕ್ತಿಗೂ ಅದನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ. ದೇವರೆಂಬ ಅಗೋಚರ ಶಕ್ತಿ ಮತ್ತು ಮನುಷ್ಯರೆಂಬ ನಮ್ಮ ನಡುವಿನ ಜೊತೆಗಾರ ಶಕ್ತಿ ನಡುವೆ ಸಮನ್ವಯ ಸಾಧ್ಯವೇ? ಅದು ಆತ್ಮ ವಂಚನೆಯಲ್ಲವೇ? ಅದು ವ್ಯಾವಹಾರಿಕ ನಡೆಯಲ್ಲವೇ? ಅದು ಗುಲಾಮ ಸಂಸ್ಕೃತಿಯ ಅನುಸರಣೆಯಲ್ಲವೇ?

ಏಕೆಂದರೆ ನಮ್ಮ ನಡುವಿನ ದೈವಿಕ ಶಕ್ತಿ ಎಂದೂ ನೇರವಾಗಿ ಪ್ರತ್ಯಕ್ಷವಾಗಿಲ್ಲ. ಅದೊಂದು ಅನುಭವ, ತಿಳುವಳಿಕೆ ಅಸಾಧಾರಣ ಶಕ್ತಿ ಎಂಬುದಾಗಿ ಬಿಂಬಿಸಲಾಗಿದೆ. ಅದನ್ನು ಭಯದಿಂದಲೋ, ಭಕ್ತಿಯಿಂದಲೋ ಆಚರಿಸಬೇಕು ಎಂದು ನಂಬಿಸಲಾಗಿದೆ. ಅದರ ಕಾರ್ಯ ವ್ಯಾಪ್ತಿ, ಇರುವಿಕೆ ಸದಾಕಾಲ ಪ್ರಶ್ನೆಗೆ ಒಳಪಡುತ್ತದೆ. ಉತ್ತರ ಸಿಗುತ್ತಿಲ್ಲ. ಈ ಸಮಾಜದ ಎಲ್ಲಾ ಅನ್ಯಾಯ, ಅನೀತಿ ಹತ್ಯಾಕಾಂಡಗಳಿಗೆ ಅದು ನೇರ ಪರಿಹಾರ ಸೂಚಿಸುತ್ತಿಲ್ಲ ಮತ್ತು ನಿಯಂತ್ರಿಸುತ್ತಿಲ್ಲ. ಅದಕ್ಕಾಗಿ ಜನ್ಮ ಪುನರ್ಜನ್ಮದ ನಂಬಿಕೆ, ಸ್ವರ್ಗ ನರಕದ ಕಲ್ಪನೆ ಸೃಷ್ಟಿಸಲಾಗಿದೆ.

ಆದರೆ ಮಾನವ ಶಕ್ತಿ ಮಾತ್ರ ನಮ್ಮ ಕಣ್ಣ ಮುಂದೆಯೇ ಇದೆ. ಅನೇಕ ಮಾನವ ಶಕ್ತಿಯ ಮಹಾ ದಾರ್ಶನಿಕರು ಸುಖ ಸಮೃದ್ಧಿಯ ಬದುಕಿನ ಆಶಯಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅನೇಕ ಪ್ರಯೋಗಗಳನ್ನು ಮಾಡಿದ್ದಾರೆ ಮತ್ತು ಯಶಸ್ವಿಯಾಗಿದ್ದಾರೆ. ಅದು ಅನುಸರಿಸಲು ಯೋಗ್ಯವೂ ಆಗಿದೆ. ಫಲಿತಾಂಶವೂ ಸಾರ್ವತ್ರಿಕ ಸತ್ಯವಾಗಿ ನಮ್ಮ ಮುಂದಿದೆ. ದೈವಿಕ ಶಕ್ತಿ ಕೇವಲ ಕೆಲವರ ಆಸ್ತಿ ಎಂಬಂತಾಗಿದೆ.

ಆದರೆ ಈ ಕ್ಷಣಕ್ಕೂ ದೈವಿಕ ಶಕ್ತಿಯೇ ಎಲ್ಲಾ ರೀತಿಯಲ್ಲೂ ಮೇಲುಗೈ ಪಡೆದಿದೆ. ಮಾನವ ಶಕ್ತಿಯ ತತ್ವ ಸಿದ್ಧಾಂತಗಳು ಕೇವಲ ತಿಳುವಳಿಕೆಗೆ ಮಾತ್ರ ಸೀಮಿತವಾಗಿದೆ. ನನ್ನ ವೈಯಕ್ತಿಕ ದೃಷ್ಟಿಯಲ್ಲಿ ದೈವಶಕ್ತಿ ಒಂದು ಮಾನಸಿಕ, ತಾತ್ಕಾಲಿಕ, ಕೃತಕ, ಮೌಢ್ಯದ ನಂಬಿಕೆ ಮಾತ್ರ. ಆದರೆ ಮಾನವ ಶಕ್ತಿ ಅರಿವಿನ, ಅನುಭಾವಿಕ ಶಕ್ತಿ. ಅದನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಬದುಕಿನ ನೆಮ್ಮದಿಯ ಗುಣಮಟ್ಟ ಶಾಶ್ವತವಾಗಿ ಹೆಚ್ಚಾಗುತ್ತದೆ.

ಆದರೆ ಅದು ಸಹ ಅಷ್ಟು ಸುಲಭವಲ್ಲ. ಶ್ರಮ ಪಟ್ಟರೆ ಮಾನವ ಶಕ್ತಿಯ ಸದುಪಯೋಗ ಪಡೆದುಕೊಳ್ಳಬಹುದು. ಆದರೆ ಎಷ್ಟೇ ಶ್ರಮ ಪಟ್ಟರು ದೈವಿಕ ಶಕ್ತಿಯನ್ನು ಕಾಣಲು ಸಾಧ್ಯವೇ ಇಲ್ಲ. ಅದು ಸಾಮಾನ್ಯ ಜ್ಞಾನಕ್ಕೆ ನಿಲುಕುವುದೂ ಇಲ್ಲ. ಅಸಾಮಾನ್ಯ ಜ್ಞಾನದಿಂದ ಪ್ರಯೋಜನವು ಇಲ್ಲ. ಮಾನವ ಶಕ್ತಿಯೇ ಅತ್ಯಂತ ಮಹತ್ವದ್ದು ಮತ್ತು ಉಪಯುಕ್ತವಾದದ್ದು. ಉಳಿದದ್ದು ನಿಮ್ಮ ವಿವೇಚನೆಗೆ ಬಿಡುತ್ತಾ....

**- ವಿವೇಕಾನಂದ. ಎಚ್. ಕೆ.,** ಬೆಂಗಳೂರು



# ಆಧುನಿಕ ತಂತ್ರಜ್ಞಾನದಿಂದ ಕೃಷಿಯಲ್ಲಿ ಲಾಭ

## ಮಿಶ್ರ ಬೇಸಾಯ ಕ್ರಮದಿಂದ ನಷ್ಟ ತಪ್ಪಿಸಬಹುದು | ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರೈತ ರಂಗಸ್ವಾಮಿ

• ಪ್ರಜೋದಯ ವರದಿ

**ಅರಕಲಗೂಡು:** ರೈತರು ಸಾಂಪ್ರದಾಯಿಕ ಪದ್ಧತಿಗೆ ಜೋತು ಬೀಳದೆ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡಾಗ ಕೃಷಿಯನ್ನು ಲಾಭದಾಯಕವಾಗಿಸಿಕೊಳ್ಳಲು ಸಾಧ್ಯ ಎಂದು ರಾಜ್ಯೋತ್ಸವ ಪ್ರಶಸ್ತಿ ವಿಜೇತ ಹಾಗೂ ಪ್ರಗತಿಪರ ಕೃಷಿಕ ಎಂ.ಸಿ. ರಂಗಸ್ವಾಮಿ ಅವರು ತಿಳಿಸಿದರು.

ತಾಲ್ಲೂಕು ರೈತ ಸಂಘ ದೊಡ್ಡಮಗ್ಗೆ ಗ್ರಾಮದ ಮಗ್ಗೆ ಮನೆಯಲ್ಲಿ ಬುಧವಾರ ಏರ್ಪಡಿಸಿದ್ದ ಕೃಷಿ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿ, ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಹಲವು ತಂತ್ರಜ್ಞಾನಗಳ ಆವಿಷ್ಕಾರವಾಗಿದೆ. ರೈತರು ತಜ್ಞರ ಸಲಹೆ ಪಡೆದು ಇದನ್ನು ಅಳವಡಿಸಿಕೊಳ್ಳಬೇಕು. ಮಿಶ್ರಪದ್ಧತಿ



ಬೇಸಾಯ ಕ್ರಮದಿಂದ ನಷ್ಟವಾಗುವುದನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯ. ಹೈನುಗಾರಿಕೆ ಬಹಳಷ್ಟು ರೈತರ ಆದಾಯದ ಮೂಲವಾಗಿದ್ದು ಇದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿದರೆ ಇನ್ನೂ ಹೆಚ್ಚಿನ ಲಾಭ ಪಡೆಯಬಹುದು, ತಾವು ಇಸ್ರೇಲ್ ಮಾದರಿಯಲ್ಲಿ ರೂಪಿಸಿರುವ ಡೈರಿಯಿಂದ ಗುಣಮಟ್ಟದ ಹಾಲು ಉತ್ಪಾದಿಸುತ್ತಿದ್ದು ಇದಕ್ಕೆ ಹೊರ ದೇಶಗಳ ತಜ್ಞರಿಂದಲೂ ಮೆಚ್ಚುಗೆ ವ್ಯಕ್ತವಾಗಿದೆ ಎಂದು ಹೇಳಿಕೊಂಡರು.

ಕೃಷಿಕರು ಕುಟುಂಬದಲ್ಲಿನ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಕೂಡು ಕುಟುಂಬ ನಡೆಸಿದಾಗ ಕೃಷಿ ಕಷ್ಟಕರವಾಗುವುದಿಲ್ಲ, ದುಶ್ಚಟಗಳನ್ನು ತೊರೆದು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಿ ಅವರನ್ನು ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದು ಅಗತ್ಯ ಎಂದರಲ್ಲದೆ ತಮ್ಮ ಕೃಷಿ ಅನುಭವಗಳ ಕುರಿತು ಮಾಹಿತಿ ನೀಡಿದರು.

ತಾಲ್ಲೂಕು ರೈತ ಸಂಘದ ಅಧ್ಯಕ್ಷ ಎಸ್.ವಿ.ಯೋಗಣ್ಣ ಮಾತನಾಡಿ, ತಾಲ್ಲೂಕಿನ ರೈತರಿಗೆ ಪ್ರಗತಿಪರ ಕೃಷಿಕ ಎಂ.ಸಿ.ರಂಗಸ್ವಾಮಿ ಅವರ ಕೃಷಿ ಅನುಭವಗಳ ಕುರಿತು ಮಾಹಿತಿ ದೊರಕಿಸಿಕೊಡುವ ಉದ್ದೇಶದಿಂದ ಕೃಷಿ ಸಂವಾದ ಹಮ್ಮಿಕೊಳ್ಳಲಾಗಿದೆ. ತಮ್ಮ ಪಗ್ರತಿಪರ ಕೃಷಿಯ ಮೂಲಕ ರಂಗಸ್ವಾಮಿ ಅವರು ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಈ ಬಾರಿ ರಾಜ್ಯೋತ್ಸವ ಪ್ರಶಸ್ತಿ ಪಡೆಯುವ ಮೂಲಕ ತಾಲ್ಲೂಕಿಗೆ ಕೀರ್ತಿ ತಂದಿದ್ದಾರೆ. ಇವರ ಕೃಷಿ ಸಾಧನೆಗೆ ಕರ್ನಾಟಕ ರತ್ನ ಹಾಗೂ ಭಾರತ ರತ್ನ ಪ್ರಶಸ್ತಿ ದೊರಕುವಂತಾಗಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಕುರಿತು ಗಮನ ಹರಿಸಿಲಿ ಎಂದರು.

ರೈತ ಸಂಘದ ಸದಸ್ಯರು ರೈತ ನಾಯಕ ದಿ.ಎಂ.ಡಿ. ನಂಜುಂಡಸ್ವಾಮಿ ಅವರ ಭಾವ ಚಿತ್ರವನ್ನು ನೀಡಿ ರಂಗಸ್ವಾಮಿ ಅವರನ್ನು ಆತ್ಮೀಯವಾಗಿ ಸನ್ಮಾನಿಸಿದರು.

ಸಹಾಯಕ ಕೃಷಿ ನಿರ್ದೇಶಕಿ ಕೆ.ಜಿ.ಕವಿತಾ, ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಡಿ. ರಾಜೇಶ್, ರೈತ ಮುಖಂಡರಾದ ಬಂದಿಗನಹಳ್ಳಿ ರವಿ, ಕೃಷ್ಣೇಗೌಡ, ಕಮಲಮ್ಮ ಸೇರಿದಂತೆ ಹಲವು ನೂರಕ್ಕೂ ಹೆಚ್ಚಿನ ರೈತರು ಸಂವಾದದಲ್ಲಿ ಭಾಗವಹಿಸಿದ್ದರು. ರೈತರು ರಂಗಸ್ವಾಮಿ ಅವರ ಡೈರಿ, ಕೃಷಿ ತಾಕುಗಳಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.

# ಶಾಲೆಗಳಲ್ಲಿ 'ವಂದೇ ಮಾತರಂ' ಕಡ್ಡಾಯಗೊಳಿಸಿ

## ರಾಜ್ಯಸಭೆ ಚರ್ಚೆಯಲ್ಲಿ ಸದಸ್ಯೆ ಸುಧಾ ಮೂರ್ತಿ ಒತ್ತಾಯ

• ಪ್ರಜೋದಯ ವರದಿ

**ನವದೆಹಲಿ:** ಶಾಲೆಗಳಲ್ಲಿ ವಂದೇ ಮಾತರಂ ಹಾಡುವುದನ್ನು ಕಡ್ಡಾಯಗೊಳಿಸಬೇಕು ಎಂದು ರಾಜ್ಯಸಭೆ ಸದಸ್ಯೆ ಸುಧಾ ಮೂರ್ತಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ವಂದೇ ಮಾತರಂ ರಚನೆಗೆ 150 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ರಾಜ್ಯಸಭೆಯಲ್ಲಿ ನಡೆದ ಚರ್ಚೆಯಲ್ಲಿ ಮಾತನಾಡಿದ ಸುಧಾ ಮೂರ್ತಿ, ವಂದೇ ಮಾತರಂ ಗೀತೆ ದೇಶವನ್ನು ಒಂದುಗೂಡಿಸುವ ಸೂತ್ರ ಎಂದು ಕರೆದರು. ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ರಾಷ್ಟ್ರ ಗೀತೆ ವಂದೇ ಮಾತರಂ ಹಾಡುವುದನ್ನು ಕಡ್ಡಾಯಗೊಳಿಸಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ನಾನು ಇಲ್ಲಿ ಸಂಸದೆಯಾಗಿ, ಲೋಕೋಪಕಾರಿ ಅಥವಾ ಲೇಖಕಿಯಾಗಿ ನಿಂತಿಲ್ಲ. ಮಂದರ್ ಇಂಡಿಯಾ ಅಥವಾ ಭಾರತ ಮಾತೆಯ ಮಗಳಾಗಿ ಇಲ್ಲಿ ನಿಂತಿದ್ದೇನೆ ಎಂದು ಅವರು ಭಾವುಕರಾಗಿ ನುಡಿದರು.



ಭಾರತದಲ್ಲಿರುವ ಪ್ರತಿ ರಾಜ್ಯವು ಬಣ್ಣ ಬಣ್ಣದ ತುಂಡಿನ ಬಟ್ಟೆಯಂತೆ. ಆ ಎಲ್ಲಾ ತುಂಡುಗಳನ್ನು ಒಟ್ಟಿಗೆ ಬೆಸೆಯುವ ದಾರ ಮತ್ತು ಸೂಜಿಯೇ ಈ ವಂದೇ ಮಾತರಂ ಗೀತೆ. ಇದು ಕೇವಲ ಭೂಪಟ ಅಥವಾ ಧ್ವಜವಲ್ಲ, ಇದು ಭೂಮಿಯನ್ನು ತಾಯ್ನಾಡು ಎಂದು ಪರಿಗಣಿಸುವ ಪರಿಕಲ್ಪನೆ. ಇದು ಕೇವಲ ಭೂಮಿಯ ತುಂಡಲ್ಲ, ಇದು ಮಾತೃಭೂಮಿ ಎಂದು ಸುಧಾ ಮೂರ್ತಿ ಅವರು ವರ್ಣಿಸಿದರು.

ಎಲ್ಲ ರಾಜ್ಯದ ಶಾಲಾ ಮಕ್ಕಳಿಗೆ ರಾಷ್ಟ್ರಗೀತೆ ಜನಗಣಮನವನ್ನು ಕಲಿಸುತ್ತೇವೆ. ಆದರೆ, ವಂದೇ ಮಾತರಂ ಹಾಡಿಸದಿರಲು ಕಾರಣ ಏನು? ಎಂದು ಪ್ರಶ್ನಿಸಿದ ಅವರು, ಮಕ್ಕಳಿಗೆ ವಂದೇ ಮಾತರಂ ಗೀತೆ ಕಲಿಸೋಕೆ ಒಂದು ಮೂರು ನಿಮಿಷ ಹಿಡಿಯಬಹುದು ಅಷ್ಟೇ. ಆದರೆ, ಹಾಡನ್ನು ಕಲಿಸಲು ನಾವು ಮುಂದಾಗುತ್ತಲೇ ಇಲ್ಲ ಯಾಕೆ?. ಹೀಗೆ ಈ ನಡವಳಿಕೆ ಮುಂದು ವರೆದರೆ, ಮುಂದೊಂದು ದಿನ ನಮ್ಮ ಮಕ್ಕಳು ವಂದೇ ಮಾತರಂ ಹಾಡನ್ನು ಹಾಡೋದೆ ಮರೆತು ಬಿಡುತ್ತಾರೆ. ಸಾಹಿತ್ಯ ಮರೆಯುತ್ತಾರೆ. ಸಂಪೂರ್ಣ ಪಠ್ಯವನ್ನೇ ಕಳೆದುಕೊಳ್ಳುತ್ತಾರೆ ಎಂದು ಅವರು ಇದೇ ಸಂದರ್ಭದಲ್ಲಿ ತೀವ್ರ ಕಳವಳ ವ್ಯಕ್ತಪಡಿಸಿದರು.

# ಡಾ.ವೈ.ಎಸ್.ವೀರಭದ್ರಪ್ಪಗೆ ರಜತ ನಕ್ಷತ್ರ ಪ್ರಶಸ್ತಿ



• ಪ್ರಜೋದಯ ವರದಿ

**ಹಾಸನ:** ಭಾರತ ಸ್ಕೌಟ್ ಮತ್ತು ಗೈಡ್ಸ್ ಹಾಸನ ಜಿಲ್ಲಾ ಸಂಸ್ಥೆಯಲ್ಲಿ ಕಳೆದ 40 ವರ್ಷಗಳಿಂದ ಸಲ್ಲಿಸಿದ ಅತ್ಯುನ್ನತ ಸೇವೆಗಾಗಿ ಹಾಸನ ಜಿಲ್ಲಾ ಸಂಸ್ಥೆಯ ಮುಖ್ಯ ಆಯುಕ್ತರಾದ ಡಾ. ವೈ. ಎಸ್. ವೀರಭದ್ರಪ್ಪನವರಿಗೆ ಭಾರತ್ ಸ್ಕೌಟ್ ಮತ್ತು ಗೈಡ್ಸ್ ರಾಷ್ಟ್ರೀಯ ಸಂಸ್ಥೆ ಜೀವಮಾನ ಸಾಧನೆಗಾಗಿ ನೀಡುವ ಉನ್ನತ ಪ್ರಶಸ್ತಿಗಳಲ್ಲಿ ಒಂದಾದ ರಜತ ನಕ್ಷತ್ರ ಪ್ರಶಸ್ತಿಯನ್ನು ಉತ್ತರಪ್ರದೇಶದ ಗೌರವಾನ್ವಿತ ರಾಜ್ಯಪಾಲರಾದ ಆನಂದಿ ಬೆನ್ ಅವರು ಲಕ್ನೋದ ರಾಜಭವನದಲ್ಲಿ ವಿತರಿಸಿದರು.

ಭಾರತ ಸ್ಕೌಟ್ ಗೈಡ್ ರಾಷ್ಟ್ರೀಯ ಸಂಸ್ಥೆಯ ಮುಖ್ಯ ಆಯುಕ್ತ ಕೆ.ಕೆ ಖಂಡೇಲ್ ವಾಲಾ ಹಾಗೂ ಕರ್ನಾಟಕ ರಾಜ್ಯ ಮುಖ್ಯ ಆಯುಕ್ತ ಪಿ.ಜಿ. ಆರ್ ಸಿಂಧ್ಯಾ ಇನ್ನಿತರರು ಹಾಜರಿದ್ದರು.

# ರುದ್ರಭೂಮಿಗೆ ಮೀಸಲಿಟ್ಟ ಭೂಮಿ ಒತ್ತುವರಿ: ಗ್ರಾಮಸ್ಥರ ಪ್ರತಿಭಟನೆ

• ಪ್ರಜೋದಯ ವರದಿ

**ಬೇಲೂರು:** ರುದ್ರಭೂಮಿಗೆ ಮೀಸಲಿಟ್ಟ ಭೂಮಿಯನ್ನು ಸೇರಿದಂತೆ ಸರ್ಕಾರಿ ಜಾಗ 10 ಎಕರೆಯನ್ನು ಒತ್ತುವರಿ ಮಾಡಿಕೊಂಡು ರಾತ್ರೋ ರಾತ್ರಿ ಸಮತಟ್ಟು ಮಾಡಿರುವುದನ್ನು ಖಂಡಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದ ಘಟನೆ ನಡೆಯಿತು.

ತಾಲೂಕಿನ ಹಳೆಬೀಡು ಹೋಬಳಿ ಪನ್ನತ್ ಪುರ, ದೇವಿಹಳ್ಳಿ, ಭೋವಿ ಕಾಲೋನಿ, ಮುಳ್ಳೇನಹಳ್ಳಿ, ಬ್ಯಾಡರಹಳ್ಳಿ ಸೇರಿದಂತೆ ಸುಮಾರು 10 ಗ್ರಾಮಗಳಿಗೆ ಸ್ಮಶಾನ ಸೇರಿದಂತೆ ಇನ್ನಿತರ ಮೂಲಭೂತ ಸೌಕರ್ಯಕ್ಕಾಗಿ ಸರ್ವೆ ನಂಬರ್ 53 ಹಾಗು 54 ರಲ್ಲಿ ಜಾಗವನ್ನು ಮೀಸಲಿಡಲಾಗಿತ್ತು. ಆದರೆ ಇದೇ ಗ್ರಾಮದ ಹನುಮಂತ ಭೋವಿ, ಶಿವು ಭೋವಿ ಹಾಗು ಪುಟ್ಟ



ಭೋವಿ ಎಂಬ ಒಂದೇ ಕುಟುಂಬಸ್ಥರು ಅಕ್ರಮ ದಾಖಲೆ ಸೃಷ್ಟಿಸಿಕೊಂಡು ಭೂ ಕಬಳಿಕೆ ಮಾಡಿದ್ದಾರೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮಸ್ಥರಾದ ಮಲ್ಲಿಕಾರ್ಜುನ ಸುರೇಶ್, ಅಣ್ಣಪ್ಪ ಅವರು ಮಾತನಾಡಿ, ದೇವಿಹಳ್ಳಿ ಗ್ರಾಮದ ಸರ್ವೆ ನಂಬರ್ 53 ಹಾಗು ಪನ್ನತ್ ಪುರ ಗ್ರಾಮದ ಸರ್ವೆ ನಂ 54 ರಲ್ಲಿ ಸರ್ಕಾರಿ ಭೂಮಿ 32 ಎಕರೆ ಇದ್ದು ಅಲ್ಲಿ ಸುಮಾರು 8 ಜನರಿಗೆ ಒಂದುವರೆ ಎಕರೆಯಂತೆ ಸರ್ಕಾರಿ ಭೂಮಿ ಮಂಜೂರಾಗಿದ್ದು ಉಳಿದ ಭೂಮಿ ಗ್ರಾಮಠಾಣ ಎಂದು ಬರುತ್ತಿದ್ದು, ಈಗಾಗಲೇ ದೇವಿಹಳ್ಳಿ ಭೋವಿ ಕಾಲೋನಿ ಪನ್ನತ್‌ಪುರ, ಮೂಳೇನಹಳ್ಳಿ ಬ್ಯಾಡರಹಳ್ಳಿ ಗ್ರಾಮಸ್ಥರಿಗೆ ಸುಮಾರು 400 ಕ್ಕೂ ಹೆಚ್ಚು ಕುಟುಂಬ ಇರುವ ವಿವಿಧ ಪಂಗಡದವರಿಗೆ ಇಲ್ಲಿ ರುದ್ರಭೂಮಿಗೆ ಜಾಗ ಮೀಸಲಿಡುವಂತೆ ಮನವಿ ಮಾಡಲಾಗಿದೆ. ಇದರ ಜೊತೆಯಲ್ಲಿ ಪೊನ್ನತ್ ಪುರ ಗ್ರಾಮದ ಪೂರ್ವಿಕರು ಬಳದಗುಂಡಿಯಲ್ಲಿ ಅವರ ಜನಾಂಗದ ಶವ ಸಂಸ್ಕಾರಕ್ಕೆ ಅಲ್ಲಿ ಜಾಗವನ್ನು ಮೀಸಲಿಟ್ಟುಕೊಂಡಿದ್ದಾರೆ. ಆದರೆ ಇಲ್ಲಿ ಕೆಲವರು ಇದೇ ಗ್ರಾಮದ ಶಿವಭೋವಿ, ಹನುಮಂತಭೋವಿ, ಪುಟ್ಟಭೋವಿ ಕುಟುಂಬಸ್ಥರು ಅವರಿಗೆ ಸರ್ಕಾರ ಮಂಜೂರು ಮಾಡಿರುವ ಭೂಮಿಗಿಂತಲೂ ಹೆಚ್ಚುವರಿಯಾಗಿ ಭೂಮಿ ಒತ್ತುವರಿ ಮಾಡಿಕೊಂಡಿರುವುದಲ್ಲದೆ ರಾತ್ರೋ ರಾತ್ರಿ ಜೆಸಿಬಿಗಳಿಂದ ಇಲ್ಲಿದ್ದಂತ ರುದ್ರಭೂಮಿಯೇ

### ಸಂಪೂರ್ಣ ಮಾಹಿತಿ ಪಡೆದು ಕ್ರಮ

ಅಧಿಕಾರಿಗಳ ಜೊತೆ ಇಲ್ಲಿ ಯಾರಿಗೆ ಭೂಮಿ ಮಂಜೂರಾಗಿದೆ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ಬೇಕು. ಈ ಸರ್ವೆ ನಂಬರಲ್ಲಿ ಎಷ್ಟು ಜಾಗ ಒತ್ತುವರಿಯಾಗಿದೆ ಎಂದು ಸರ್ವೆ ಅಧಿಕಾರಿಗಳಿಗೆ ಸರ್ವೆ ಮಾಡಲು ಸೂಚಿಸಿದ್ದೇನೆ. ಇಲ್ಲಿ ಯಾರೇ ಒತ್ತುವರಿ ಮಾಡಿದ್ದರು ಅದನ್ನು ಬಿಡುವುದಿಲ್ಲ. ರುದ್ರಭೂಮಿಗೆ ಮೀಸಲಿಟ್ಟ ಜಾಗವನ್ನು ಯಾರು ಸಹ ಕಬಳಿಸುವಂತಿಲ್ಲ. ನಿಮಗೆ ನೀಡಿರುವ ಸಾಗುವಳಿಯಲ್ಲಿ ಎಷ್ಟು ಜಮೀನು ಮಂಜೂರಾಗಿರುತ್ತದೆ ಅಷ್ಟಕ್ಕೆ ಮಾತ್ರ ಅವರಿಗೆ ಅವಕಾಶ ಇರುತ್ತದೆ. ಅದು ಬಿಟ್ಟು ಹೆಚ್ಚುವರಿ ಒತ್ತುವರಿ ಮಾಡಿದ್ದರೆ ಅದನ್ನು ಹಿಂಪಡೆಯಲಾಗುವುದು.

– ಶ್ರೀಧರ್ ಕಂಕನವಾಡಿ, ತಹಶೀಲ್ದಾರ್

ಇಲ್ಲದಂತೆ ಮುಚ್ಚಿಹಾಕಿದ್ದಾರೆ ಎಂದು ದೂರಿದರು.

ಗ್ರಾಮ ಲೆಕ್ಕಾಧಿಕಾರಿ ಗಣೇಶ್ ಎಂಬುವವರು ಅವರ ಜೊತೆ ಶಾಮೀಲಾಗಿದ್ದು ನಮಗೆ ನ್ಯಾಯ ದೊರಕಿಸಿ ಕೊಡಬೇಕು ಎಂದು ಒತ್ತಾಯಿಸಿದರು.

ಯಲಹಂಕ ಗ್ರಾಪಂ ಸದಸ್ಯ ಕೃಷ್ಣ, ವೆಂಕಟಭೋವಿ, ಚೌಡಭೋವಿ, ಪರಮೇಶ್, ವೆಂಕಟೇಶ್, ಧರ್ಮಭೋವಿ, ವೆಂಕಟಮ್ಮ, ಸಂಕಮ್ಮ, ಪೆದ್ದಮ್ಮ, ನಂಜಮ್ಮ, ಪಾರ್ವತಿ ಸೇರಿದಂತೆ ಇನ್ನಿತರರು ಹಾಜರಿದ್ದರು.

# ಕ್ಷೇಮಾಭಿವೃದ್ಧಿಯೇ ಸಂಘಗಳ ಶ್ರೇಯೋಭಿಲಾಷೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ವಿದ್ಯುತ್ ಕೆಲಸಗಾರರ ಕ್ಷೇಮಾಭಿವೃದ್ಧಿಯೇ ಸಂಘಗಳ ಶ್ರೇಯೋಭಿಲಾಷೆ ಯಾಗಬೇಕು ಎಂದು ವಿದ್ಯುತ್ ಗುತ್ತಿಗೆದಾರರ ಸಂಘದ ಮುಖಂಡ ಅತ್ರಿಪ್ರಭಾಕರ್ ಅವರು ಇಚ್ಛಾಸಕ್ತಿ ವ್ಯಕ್ತಪಡಿಸಿದರು.

ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯ ಗೌರವಾಧ್ಯಕ್ಷ ಎಸ್.ಎಂ.ಕೃಷ್ಣ ನೇತೃತ್ವದ ಸಂಘ ಪಟ್ಟಣದ ಪಿಆರ್ ಕಲ್ಯಾಣ ಮಂದಿರದಲ್ಲಿ ಪಂಚವರ್ಷದ ಮಹಾ ಚುನಾವಣೆ ಡಿ.14 ರಂದು ಭಾನುವಾರ ಬೆಂಗಳೂರಿನಲ್ಲಿ ನಡೆಯಲಿರುವ ಹಿನ್ನಲೆಯಲ್ಲಿ ಪ್ರಚಾರ ಸಭೆ ನಡೆಸಿ ಮಾತನಾಡಿದರು.

ವಿದ್ಯುತ್ ಕೆಲಸಗಾರರ ಜೀವನ ಸ್ಥಿತಿ ಶೋಚನೀಯ ಸ್ಥಿತಿಯಲ್ಲಿದೆ. ಅವರ ಅಭ್ಯುದಯಕ್ಕೆ ಸಂಘಗಳು ಪರಿಣಾಮಕಾರಿಯಾಗಿ ಗಮನ



ಹರಿಸಬೇಕು. ಚುನಾವಣೆ ಎನ್ನುವುದು ನಿಮಿತ್ತ ಮಾತ್ರ. ಅದಕ್ಕೆ ಹೊರತಾಗಿ ಗುತ್ತಿಗೆದಾರರು ಮತ್ತು ಕೆಲಸಗಾರರು ಎಲ್ಲರೂ ಒಂದೇ. ಇದನ್ನು ಅರಿತು ಉತ್ತಮ ಮನೋಭಾವದಿಂದ ಸಂಘಟನೆಯನ್ನು ನಡೆಸಬೇಕಿದೆ ಎಂದು ಅವರು ಅಭಿಪ್ರಾಯಪಟ್ಟರು.

ರಾಜ್ಯ ಸಂಘದ ಮಾಜಿ ಉಪಾಧ್ಯಕ್ಷ ಪುರುಶೋತ್ತಮ್ ಮಾತನಾಡಿದರು, ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಕಲ್ಲೇಶಾಚಾರ್, ರವಿ, ಮುಖಂಡ ರಂಗೇಗೌಡ ಹಾಗೂ ಅರಸೀಕೆರೆ ಸಂಘದ ಅಧ್ಯಕ್ಷ ಚಂದ್ರಪ್ಪ ಇನ್ನಿತರರು ಉಪಸ್ಥಿತರಿದ್ದರು.

### ಸಮಾಲೋಚನೆ ಸಭೆ

**ಹಾಸನ:** ಕೆಎಂಎಬಿಆರ್ 2006ರ ನಿಯಮ 131 ರಿಂದ 133 ರಲ್ಲಿರುವಂತೆ, ಹಾಸನ ಮಹಾನಗರ ಪಾಲಿಕೆಯ 2026-27ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿ ತಯಾರಿಸುವ ಸಂಬಂಧ ನೊಂದಾಯಿತ ವಸತಿ ಕ್ಷೇಮಾಭಿವದ್ಧಿ ಸಂಘಗಳು, ನೊಂದಾಯಿತ ಸರ್ಕಾರೇತರ ಸಂಘ ಸಂಸ್ಥೆಗಳು, ವಾಣಿಜ್ಯ ಮತ್ತು ಕೈಗಾರಿಕಾ ಸಂಘಗಳು, ಇತರೆ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ರಾಜಕೀಯ ಮುಖಂಡರುಗಳು, ಹಿರಿಯ ನಾಗರೀಕರು, ಮಾದ್ಯಮದವರು ಮತ್ತು ಸಾರ್ವಜನಿಕ ಅಭಿಪ್ರಾಯಗಳನ್ನು ಸಂಗ್ರಹಿಸಲು ಮೊದಲನೇ ಸುತ್ತಿನ ಸಾರ್ವಜನಿಕ ಸಮಾಲೋಚನೆ ಸಭೆಯನ್ನು ಡಿ.18 ರಂದು ಸಂತೇಪೇಟೆಯ ಮಹಾನಗರ ಪಾಲಿಕೆಯ ಕುವೆಂಪು ಸಭಾಂಗಣದಲ್ಲಿ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರು ಹಾಗೂ ಹಾಸನ ಮಹಾನಗರ ಪಾಲಿಕೆಯ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ.

# ಧರ್ಮಸ್ಥಳದ ವಿರುದ್ಧ ಷಡ್ಯಂತ್ರ, ಸತ್ಯ ಮೇಲುಗೈ

• ಪ್ರಜೋದಯ ವರದಿ

**ಬೆಳಗಾವಿ:** ಧರ್ಮಸ್ಥಳದ ವಿರುದ್ಧ ಪಿತೂರಿ ನಡೆಯುತ್ತಿದೆ. ಇಂತಹ ವಿವಾದಗಳು ಹಲವು ತಲೆಮಾರುಗಳಿಂದ ಉಳಿದುಕೊಂಡಿರುವ ಸಂಸ್ಥೆಗಳಿಗೆ ಹಾನಿ ಮಾಡಬಹುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬುಧವಾರ ಹೇಳಿದ್ದಾರೆ.

ಬೆಳಗಾವಿಯಲ್ಲಿ ಮಾತನಾಡಿದ ಅವರು, 'ಧರ್ಮಸ್ಥಳದ ವಿರುದ್ಧ ಪಿತೂರಿ ನಡೆಯುತ್ತಿದೆ ಎಂದು ನಾನು ವಿಧಾನಸಭೆಯಲ್ಲಿ ಬಹಿರಂಗವಾಗಿ ಹೇಳಿದ್ದೆ. ಆದರೆ, ಸತ್ಯ ಮೇಲುಗೈ ಸಾಧಿಸಿದೆ. ಕಾನೂನು ತನ್ನದೇ ಆದ ಹಾದಿಯನ್ನು ಹಿಡಿಯಬೇಕು. ಇಂತಹ ವಿವಾದಗಳು ಹಲವು ತಲೆಮಾರುಗಳಿಂದ ಜಾರಿಯಲ್ಲಿರುವ ಸಂಸ್ಥೆಗಳಿಗೆ ಹಾನಿ ಮಾಡಬಹುದು. ಆರ್‌ಎಸ್‌ಎಸ್ ಮತ್ತು ಬಿಜೆಪಿ ನಡುವೆ ದೊಡ್ಡ



ವ್ಯತ್ಯಾಸವಿದೆ ಮತ್ತು ಅದು ಕೂಡ ಈ ವಿವಾದದಲ್ಲಿ ಆಳವಾಗಿ ಬೇರೂರಿದೆ...' ಎಂದು ಸುದ್ದಿಗಾರರಿಗೆ ತಿಳಿಸಿದರು.

ಇದಕ್ಕೂ ಮೊದಲು, ಆಗಸ್ಟ್ 31 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಸಾಮೂಹಿಕ ಅಂತ್ಯಕ್ರಿಯೆ ಪ್ರಕರಣದ ಬಗ್ಗೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್ಐಎ) ತನಿಖೆಯನ್ನು ತಳ್ಳಿಹಾಕಿದರು. ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಸಾಮೂಹಿಕ ಅಂತ್ಯಕ್ರಿಯೆ ಪ್ರಕರಣ ಕೊನೆಗೂ ತಾರ್ಕಿಕ ಅಂತ್ಯ ಕಾಣುತ್ತಿದ್ದು, ವಿಶೇಷ ತನಿಖಾ ತಂಡ ಬೆಳ್ತಂಗಡಿ ನ್ಯಾಯಾಲಯಕ್ಕೆ ಪ್ರಾಥಮಿಕ ವರದಿಯನ್ನು ಸಲ್ಲಿಸಿದೆ ಎನ್ನಲಾಗಿದೆ.

ಪ್ರಾಥಮಿಕ ವರದಿಯಲ್ಲಿ, ಧರ್ಮಸ್ಥಳದ ವ್ಯವಸ್ಥಾಪಕರಿಗೆ ಮತ್ತು ಮೇಲ್ವಿಚಾರಕರಿಗೆ ಕ್ಲೀನ್‌ಚಿಟ್ ನೀಡಲಾಗಿದ್ದು, ಧರ್ಮಸ್ಥಳದಲ್ಲಿ ಅಂತಹ ಯಾವುದೇ ಕೃತ್ಯಗಳು ನಡೆದಿಲ್ಲ ಎಂದು ಸ್ಪಷ್ಟಪಡಿಸಿದೆ. ಆರೋಪಿಗಳಾದ ಚಿನ್ನಯ್ಯ, ಮಹೇಶ್ ತಿಮರೋಡಿ, ಗಿರೀಶ್ ಮಟ್ಟಣ್ಣನವರ್, ವಿಠ್ಠಲಗೌಡ, ಟಿ. ಜಯಂತ್ ಮತ್ತು ಸುಜಾತಾ ಭಟ್ ಅವರು ಅಪರಾಧ ಕೃತ್ಯದಲ್ಲಿ ನೇರವಾಗಿ ಶಾಮೀಲಾಗಿದ್ದಾರೆ. ಈ ಗ್ಯಾಂಗ್, 1 ಆರೋಪಿ ಚಿನ್ನಯ್ಯ ಅಲಿಯಾಸ್ ಚಿನ್ನಯ್ಯನಿಗೆ ಹಣದ ಆಮಿಷ ತೋರಿಸಿ, ಆತನಿಂದ 'ಅಪರಿಚಿತ ಶವಗಳನ್ನು ಹೂತಿದ್ದೇನೆ' ಎಂದು ಸುಳ್ಳು ಹೇಳಿಸಿ, ಅದನ್ನು ವಿಡಿಯೋ ರೆಕಾರ್ಡ್ ಮಾಡಿಕೊಂಡಿರುವುದು ಬಯಲಾಗಿದೆ. ಹಣದ ಆಸೆಗೆ ಷಡ್ಯಂತ್ರಕ್ಕೆ ಸಹಕರಿಸಿದ್ದಾನೆ ಎಂದು ತಿಳಿಸಿದೆ.

### ಇಸ್ಪೀಟ್ ಅಡ್ಡೆ ಮೇಲೆ ಪೊಲೀಸರ ದಾಳಿ

• ಪ್ರಜೋದಯ ವರದಿ

**ಆಲೂರು:** ಪೊಲೀಸರು ಇಸ್ಪೀಟ್ ಅಡ್ಡೆಯ ಮೇಲೆ ದಾಳಿ ನಡೆಸಿ, 15,560ರೂ. ಹಣ ಹಾಗೂ ವಿವಿಧ ವಸ್ತುಗಳನ್ನು ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ.

ತಾಲ್ಲೂಕಿನ ಅಬ್ಬನ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿನ್ನಳ್ಳಿ ಗ್ರಾಮದ ಬಳಿ ಸಾರ್ವಜನಿಕ ಸ್ಥಳದಲ್ಲಿ 8 ರಿಂದ 10 ಜನ ಅಕ್ರಮವಾಗಿ ಹಣವನ್ನು ಪಣಕಿಟ್ಟು ಇಸ್ಪೀಟ್ ಆಡುತ್ತಿದ್ದರೆಂಬ ಖಚಿತ ಮಾಹಿತಿ ಮೇರೆಗೆ ಸಬ್‌ಇನ್ಸ್‌ಪೆಕ್ಟರ್ ಪ್ರವೀಣ್ ಕುಮಾರ್ ನೇತೃತ್ವದ ತಂಡ ದಾಳಿ ನಡೆಸಿ, ಪಣಕ್ಕಿಟ್ಟಿದ್ದ ಹಣ, ವಸ್ತುಗಳನ್ನು ವಶಪಡಿಸಿಕೊಂಡು, ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ಸ್ತ್ರೀ ಸಾಹಿತ್ಯಕ್ಕೆ ವಿಮರ್ಶೆಯಲ್ಲಿ ಅನ್ಯಾಯ ಜಾಗತಿಕ ಸಮಸ್ಯೆ

• ಪ್ರಜೋದಯ ವರದಿ

**ಹಾಸನ** ಜಿಲ್ಲಾ ಬರಹಗಾರರ ಸಂಘದ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ವಿಮರ್ಶೆಯಲ್ಲಿ ಸ್ತ್ರೀ ಸಾಹಿತ್ಯಕ್ಕೆ ಅನ್ಯಾಯ ವಿಷಯವಾಗಿ ವಿಚಾರಗೋಷ್ಠಿ, ಸಂವಾದ ಕವಿಗೋಷ್ಠಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಕನ್ನಡ ಧ್ವಜಾರೋಹಣ ಮತ್ತು ಬರಹಗಾರರ ಸಂಘದ ಧ್ವಜಾರೋಹಣ ಕಾರ್ಯಕ್ರಮವನ್ನು ಜಿಲ್ಲಾ ಕಾರ್ಯನಿರತ ಪತ್ರಕರ್ತ ಸಂಘದ ಅಧ್ಯಕ್ಷರಾದ ಕೆಂಚೇಗೌಡ ಹಾಗೂ ಸಾಹಿತಿ ಚನ್ನರಾಯಪಟ್ಟಣದ ಮೇಟಿಕೆರೆ ಹಿರಿಯಣ್ಣ ನೆರವೇರಿಸಿ ಚಾಲನೆ ನೀಡಿದರು.

ಹಂಪಿ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿಗಳಾದ ವಿದ್ಯಾವಾಚಸ್ಪತಿ ಮಲ್ಲಿಕ ಘಂಟಿ ಮಾತನಾಡಿ, ವಿಮರ್ಶಾ ಕ್ಷೇತ್ರದಲ್ಲಿ ಸ್ತ್ರೀ ಸಾಹಿತ್ಯಕ್ಕೆ ವಿವಿಧ ಕಾಲಘಟ್ಟಗಳಲ್ಲಿ ಸಂಭವಿಸಿರುವ ಅನ್ಯಾಯಗಳ ಬಗ್ಗೆ ಆಳವಾದ ಚರ್ಚೆ ನಡೆಸಿದರು.

ಜಿಲ್ಲಾ ಬರಹಗಾರರ ಸಂಘದ ಅಧ್ಯಕ್ಷ



ಸುಂದರೇಶ ಡಿ.ಉಡುವಾರೆ ಮಾತನಾಡಿ. ಸ್ತ್ರೀ ಸಾಹಿತ್ಯಕ್ಕೆ ವಿಮರ್ಶೆಯಲ್ಲಿ ಅನ್ಯಾಯವಾಗಿರುವುದು ಯುಗಯುಗಗಳಿಂದಲೂ ಕಂಡುಬರುವ ಜಾಗತಿಕ ಸಮಸ್ಯೆ. ಹಾಸನ ಜಿಲ್ಲೆಯಿಂದ ರಾಷ್ಟ್ರ ಮಟ್ಟಕ್ಕೆ ಒಳ್ಳೆಯ ಸಂದೇಶ ರವಾನೆಯಾಗಬೇಕಾಗಿದೆ. ಸ್ತ್ರೀ ಸಾಹಿತಿಗಳು ಈ ಕುರಿತು ದೃಢ ನಿರ್ಧಾರ ಕೈಗೊಳ್ಳಬೇಕು ಎಂದು ಹೇಳಿದರು.

ಸಾಹಿತಿ ಡಾ. ಬರಾಳು ಶಿವರಾಮ್ ಅವರು ಮಾತನಾಡಿ, ಸುಂದರೇಶ ಡಿ. ಉಡುವಾರೆ ಅಧ್ಯಕ್ಷರಾದ ನಂತರ ಜಿಲ್ಲೆಯಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಹತ್ತಾರು ಕಾರ್ಯಕ್ರಮಗಳನ್ನು ನಡೆಸಿ ನೂರಾರು ಪ್ರತಿಭೆಗಳಿಗೆ ವೇದಿಕೆ ಒದಗಿಸಿದ್ದಾರೆ. ಅನೇಕ ಸಾಧಕರನ್ನು ಗುರುತಿಸಿ ರಾಜ್ಯ ಪ್ರಶಸ್ತಿಗಳನ್ನು ನೀಡುವ ಮೂಲಕ ಗೌರವಿಸಿದ್ದಾರೆ. ಇವರ ವೈಚಾರಿಕತೆ ಹಾಗೂ ಕಾರ್ಯಪಟುತ್ವ ಶ್ಲಾಘನೀಯ ಎಂದು ಪ್ರಶಂಸಿಸಿದರು.

ಜಾನಪದ ವಿದ್ವಾಂಸ, ನಿವೃತ್ತ ಪ್ರಾಂಶುಪಾಲ ಮೇಟಿಕೆರೆ ಹಿರಿಯಣ್ಣ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಾಹಿತ್ಯ ಓದುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಬರಹಗಾರರ ಪುಸ್ತಕಗಳನ್ನು ಕೊಂಡು ಓದುವವರಿಲ್ಲದಿರುವುದು ಸಾಹಿತ್ಯದ ಕುರಿತ ಒಲವಿನ ಕೊರತೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಗಡಿನಾಡು ಕನ್ನಡ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಪ್ರತಿನಿಧಿ ಸೋಮಶೇಖರ ಮಾತನಾಡಿ, ಶರಣ ಸಾಹಿತ್ಯ ಪೂರ್ವ ಮತ್ತು ನಂತರದ ದಿನಮಾನಗಳಲ್ಲಿ ಸ್ತ್ರೀ ಸಾಹಿತ್ಯಕ್ಕೆ ಲಭ್ಯವಾಗದ ಮಾನ್ಯತೆ ಬಗ್ಗೆ ಚರ್ಚೆ ಮಂಡಿಸಿದರು.

ಜಿಲ್ಲಾ ಬರಹಗಾರರ ಸಂಘದ ಗೌರವಾಧ್ಯಕ್ಷ ವೆಂಕಟೇಶ, ಶೈಲಜ, ಡಾ. ಶಾಂತಾ ಅತ್ನಿ, ಹೇಮ ಪಟ್ಟಣ ಶೆಟ್ಟಿ ಸುವರ್ಣ, ಪ್ರೇಮಪ್ರಶಾಂತ್, ಭಾರತಿ ಹಾದಿಗೆ, ಹುಲ್ಲೇನಹಳ್ಳಿ ರಾಜೇಶ್ವರಿ, ಮೀನಾಕ್ಷಿ, ಲಕ್ಷ್ಮಿ ದೇವಿದಾಸಪ್ಪ, ಚನ್ನೇಗೌಡ, ಗ್ಯಾರಂಟಿ ರಾಮಣ್ಣ, ಡಾ. ಬಸವರಾಜು ಅರಸೀಕೆರೆ, ವಿಶ್ವಾಸ್ ಡಿ. ಗೌಡ, ಗಿರಿಜಾ ನಿರ್ವಾಣಿ, ವಿವಿಧ ಮಹಿಳಾ ಸಂಘಟನೆಗಳ ಪ್ರತಿನಿಧಿಗಳು ಹಾಗೂ ಇನ್ನಿತರರು ಇದ್ದರು.

# ಪತ್ರಿಕೋದ್ಯಮ ಅಪ್ರೆಂಟಿಸ್ ತರಬೇತಿಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ತಲಾ ಒಬ್ಬ ಅಭ್ಯರ್ಥಿ ಗಳನ್ನು ವೃತ್ತಿ ತರಬೇತಿ ಆಯ್ಕೆಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪತ್ರಿಕೋದ್ಯಮ ಪದವೀಧರರು ಅಥವಾ ಪತ್ರಿಕೋದ್ಯಮ ಸ್ನಾತಕೋತ್ತರ ಪದವೀಧರರಿಗೆ ಹಾಸನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಚೇರಿಯಲ್ಲಿ 2026 ರ ಜನವರಿಯಿಂದ ಡಿಸೆಂಬರ್‌ವರೆಗೆ 12 ತಿಂಗಳ ಅವಧಿಯ ಅಪ್ರೆಂಟಿಸ್ ತರಬೇತಿ ನೀಡಲಾಗುವುದು.

ಕರ್ನಾಟಕದಲ್ಲಿ ಕಾನೂನಾತ್ಮಕವಾಗಿ ಸ್ಥಾಪಿತಗೊಂಡ ವಿಶ್ವವಿದ್ಯಾನಿಲಯದಿಂದ ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ





ಪೂರ್ಣಗೊಳಿಸಿರುವ ಹಾಗೂ ಕಂಪ್ಯೂಟರ್ ಜ್ಞಾನವಿರುವ ಕನ್ನಡ ಭಾಷೆ ಬಳಸಲು ಪ್ರಬುದ್ಧತೆ ಇರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ.

ಮೆರಿಟ್ ಹಾಗೂ ಸಂದರ್ಶನದ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಅರ್ಜಿ ಸಲ್ಲಿಸಲು 2025 ರ ಡಿಸೆಂಬರ್ 26 ಕೊನೆಯ ದಿನಾಂಕವಾಗಿದೆ. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳಿಗೆ 35 ವರ್ಷ ಮೀರಿರಬಾರದು. ತರಬೇತಿಯ ಅವಧಿ ವೇಳೆ ಮಾಹೆಯಾನ 15 ಸಾವಿರ ರೂಪಾಯಿ ಸ್ಟೈಫಂಡ್ ನೀಡಲಾಗುವುದು.

ಒಮ್ಮೆ ಫಲಾನುಭವಿಯಾದವರನ್ನು ಈ ಯೋಜನೆಯಡಿ ಮತ್ತೊಂದು ಅವಧಿಗೆ ಆಯ್ಕೆ ಮಾಡಲು ಅವಕಾಶವಿರುವುದಿಲ್ಲ. ವಿಶೇಷ ಘಟಕ ಯೋಜನೆಯಡಿ ಹಾಗೂ ಗಿರಿಜನ ಉಪಯೋಜನೆಯಡಿ ಜಿಲ್ಲೆಯಲ್ಲಿ ಅರ್ಹ ಅಭ್ಯರ್ಥಿಗಳು ದೊರೆಯದೆ ಇದ್ದಲ್ಲಿ ನೆರೆಯ ಜಿಲ್ಲೆಗಳಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು.

ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಾರ್ತಾ ಭವನ, ಬಿ.ಎಂ. ರಸ್ತೆ ಹಾಸನ ಇಲ್ಲಿಗೆ ಡಿ.26 ರೊಳಗೆ ಅರ್ಜಿ ಸಲ್ಲಿಸಬಹುದಾಗಿದ್ದು, ಮಾಹಿತಿಗೆ ಕಚೇರಿ ಸಂಪರ್ಕಿಸಿ.

# ವಕೀಲರ ಕಚೇರಿಗಳಿಗೂ ಗೃಹಜ್ಯೋತಿ ಗ್ಯಾರಂಟಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ವಕೀಲರು ನಗರ, ಪಟ್ಟಣ ಪ್ರದೇಶದಲ್ಲಿ ಹೊಂದಿರುವ ಕಚೇರಿಗಳಿಗೆ ಗೃಹಜ್ಯೋತಿ ಗ್ಯಾರೆಂಟಿ ಯೋಜನೆಯಡಿ ಉಚಿತ ವಿದ್ಯುತ್ ಪಡೆಯಲು ಸರ್ಕಾರ ಸುತ್ತೋಲೆ ಹೊರಡಿಸಿದ್ದು, ಪಟ್ಟಣದಲ್ಲಿನ ವಕೀಲರು ಇದರ ಸದುಪಯೋಗಕ್ಕೆ ಮುಂದಾಗಿ ಗ್ಯಾರೆಂಟಿಯ ಲಾಭ ಪಡೆಯುವಂತೆ ತಾಲ್ಲೂಕು ಗ್ಯಾರೆಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಹಾಗೂ ಹಿರಿಯ ವಕೀಲ ಎಲ್.ಪಿ.ಪ್ರಕಾಶ್ ಗೌಡ ತಿಳಿಸಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ತಾಲ್ಲೂಕು ಮಟ್ಟದ ಗ್ಯಾರೆಂಟಿ ಯೋಜನೆ ಅನುಷ್ಠಾನ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ವಕೀಲ ವೃತ್ತಿ ನಡೆಸುವ ಮತ್ತು ವಕೀಲರು ಪಟ್ಟಣಗಳಲ್ಲಿ ಹೊಂದಿರುವ ಕಚೇರಿಗಳನ್ನು ಸರ್ಕಾರ ವಾಣಿಜ್ಯ ಉದ್ದೇಶ ಎಂಬುದಾಗಿ ಪರಿಗಣಿಸಿ ಗೃಹಜ್ಯೋತಿ ಯೋಜನೆಯಿಂದ ಹೊರಗಿಟ್ಟಿತ್ತು. ಇದೀಗ ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಮನವಿ ಮೇರೆಗೆ ಸರ್ಕಾರ ಸುತ್ತೋಲೆ



ಹೊರಡಿಸಿದೆ ಎಂದು ತಿಳಿಸಿದರು.

ವಕೀಲರ ಕಛೇರಿಗಳು ಸೇವಾ ವಲಯವೆಂದು ಪರಿಗಣಿಸಿ ಎಲ್‌ಟಿ-3 ಗ್ರೇಡ್‌ನಿಂದ ಎಲ್‌ಟಿ-1 ಗ್ರೇಡ್‌ಗೆ ತಂದು ಗೃಹಬಳಕೆ ಉದ್ದೇಶ ಎಂದು ಭಾವಿಸಿ ಗೃಹಜ್ಯೋತಿ ಅಡಿಗೆ ತಂದಿದೆ. ಆದರಿಂದ ಚನ್ನರಾಯಪಟ್ಟಣ ನಗರದಲ್ಲಿ 100ಕ್ಕೂ ಹೆಚ್ಚು ವಕೀಲರ ಕಚೇರಿಗಳಿದ್ದು, ಅವರುಗಳು ತಮ್ಮ ಆಧಾರ್ ಕಾರ್ಡ್‌ನ್ನು ಲಿಂಕ್ ಮಾಡಿ ಯೋಜನೆಯ ಲಾಭ ಪಡೆಯಬೇಕು, ಇಲ್ಲವೇ ತಾಲ್ಲೂಕು ಪಂಚಾಯಿತಿಯಲ್ಲಿರುವ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮತಿ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬೇಕೆಂದರು.

ಇನ್ನು ಗ್ಯಾರಂಟಿ ಸಮಿತಿ ಸದಸ್ಯರು ಪಟ್ಟಣದ ಕೆಲ ನ್ಯಾಯಬೆಲೆ ಅಂಗಡಿಗಳಲ್ಲಿ ಕಾರ್ಡಿಗೊಂದು ಕೆ.ಜಿ. ಅಕ್ಕಿ ಹಿಡಿಯುತ್ತಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಆರೋಪ ಕೇಳಿ ಬಂದ ನ್ಯಾಯಬೆಲೆ ಅಂಗಡಿಗಳ ಮೇಲೆ ಗ್ಯಾರಂಟಿ ಸದಸ್ಯರು ಮತ್ತು ಅಧಿಕಾರಿಗಳ ತಂಡ ಭೇಟಿ ಪರಿಶೀಲನೆ ನಡೆಸಿ ತಪ್ಪು ಕಂಡು ಬಂದರೆ ಕ್ರಮಕ್ಕೆ ಸೂಚಿಸಲಾಗುವುದು. ಈ ಕುರಿತಾಗಿ ತಾಲ್ಲೂಕಿನ ಎಲ್ಲ ಪಡಿತರ ಅಂಗಡಿ ಮಾಲೀಕರ ಸಭೆಯನ್ನು ತಹಶೀಲ್ದಾರ್‌ರವರ ನೇತೃತ್ವದಲ್ಲಿ ಕರೆದು ಚರ್ಚಿಸಲಾಗುವುದು ಎಂದು ಅವರು ಹೇಳಿದರು.

ಮೇಲುಕೋಟೆ ಪುಣ್ಯಕ್ಷೇತ್ರದಿಂದ ಧರ್ಮಸ್ಥಳಕ್ಕೆ ಬಸ್ ಸಂಚರಿಸುವ ಕುರಿತಾಗಿ ಸದಸ್ಯರು ಆಗ್ರಹಿಸಿದ್ದು, ಈ ಕುರಿತಾಗಿ ಮೇಲುಕೋಟೆಯಿಂದ ಶ್ರವಣಬೆಳಗೊಳ ಮೂಲಕ ಧರ್ಮಸ್ಥಳಕ್ಕೆ ಬಸ್ ಸಂಚಾರ ಶೀಘ್ರ ಆರಂಭಿಸಲಾಗುವುದು ಎಂದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಜಿ.ಆರ್. ಹರೀಶ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳು ಹಾಜರಿದ್ದರು.

## ವಿಭಾಗ - ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮದಲ್ಲಿ ಜಯಕರ ಶೆಟ್ಟಿ ಇಂದ್ರಾಳಿ ಅಭಿಮತ

# ಸಹಕಾರ ಕ್ಷೇತ್ರದ ಏಳಿಗೆಗೆ ಶಿಕ್ಷಣ, ತರಬೇತಿ ಅವಶ್ಯ

• ಪ್ರಜೋದಯ ವರದಿ

**ಹಾಸನ:** ಸಹಕಾರ ಕ್ಷೇತ್ರದಲ್ಲಿರುವ ಕಾರ್ಯ ನಿರ್ವಹಿಸುತ್ತಿರುವ ಅಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು, ಸದಸ್ಯರು, ಸಿಬ್ಬಂದಿಗೆ ಸಹಕಾರ ಶಿಕ್ಷಣ ತರಬೇತಿ ಅತೀ ಅವಶ್ಯ ಎಂದು ರಾಜ್ಯ ಸಹಕಾರ ಮಹಾ ಮಂಡಳದ ನಿರ್ದೇಶಕ, ಉಡುಪಿ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ ಸಲಹೆ ನೀಡಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ನಿ., ಬೆಂಗಳೂರು, ಹಾಸನ ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ಮೈಸೂರು ವಿಭಾಗದ ಪತ್ತಿನ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಹಮ್ಮಿಕೊಂಡಿದ್ದ ವಿಭಾಗ ಹಾಗೂ ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ



ಅವರು ಮಾತನಾಡಿದರು.

ಇಂದು ಸಹಕಾರ ಕ್ಷೇತ್ರವು ತನ್ನದೇ ಆದ ಛಾಪನ್ನು ಮೂಡಿಸಿ ಎಲ್ಲಾ ಕ್ಷೇತ್ರದಲ್ಲೂ ಮುನ್ನಡೆಯುತ್ತಿದೆ. ಉತ್ತಮ ಸಾಧನೆಯನ್ನು ಮಾಡುತ್ತಿರುವುದರಿಂದ ಸಹಕಾರ ಸಂಘಗಳು ಅದರಲ್ಲೂ ಪತ್ತಿನ ಸಹಕಾರ ಸಂಘಗಳ ಏಳಿಗೆಗೆ ದುಡಿಯುತ್ತಿರುವ ಆಡಳಿತ ಮಂಡಳಿ, ಸಿಬ್ಬಂದಿಗಳಿಗೆ ದಿನ ನಿತ್ಯದ ವ್ಯವಹಾರಗಳ ಕುರಿತಂತೆ ಅರಿಯುವುದು ಹಾಗೇಯೇ ತರಬೇತಿಗಳಲ್ಲಿ ಭಾಗವಹಿಸಿ ದಿನದಿಂದ ದಿನಕ್ಕೆ ಆದ ಬದಲಾವಣೆಗಳ ಕುರಿತಂತೆ ತಿಳಿದು ಅದನ್ನು ಸಂಘಗಳ ಅಭಿವೃದ್ಧಿಗೆ ಪೂರಕವಾಗುವಂತೆ ಕೆಲಸ ನಿರ್ವಹಿಸಬೇಕೆಂದು ಹೇಳಿದರು.

ಹಾಸನ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಸ್.ಎನ್.ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದು ಸಹಕಾರ ಕ್ಷೇತ್ರದಲ್ಲಿ ಪತ್ತಿನ ಸಹಕಾರ ಸಂಘಗಳ ಪಾತ್ರ ದೊಡ್ಡದು. ಕಾರಣ ದಿನನಿತ್ಯ ಸದಸ್ಯರೊಂದಿಗೆ ಹಣಕಾಸಿನ ವ್ಯವಹಾರ ನಡೆಸುತ್ತಿದ್ದು, ಅಲ್ಲಿನ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರುಗಳು ಹಾಗೂ ಸಿಬ್ಬಂದಿಗಳ ಪ್ರಾಮಾಣಿಕ ಸೇವೆಯೇ ಪ್ರಮುಖ ಕಾರಣ. ಹಾಗಾಗಿ ಇಂದಿನ ತರಬೇತಿ ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕರುಗಳು ನೀಡುವ ಮಾಹಿತಿಯ ಸದುಪಯೋಗಪಡಿಸಿ ಕೊಳ್ಳಬೇಕೆಂದು ಅವರು ತಿಳಿಸಿದರು.

ಹಾಸನ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕ ಆರ್.ಟಿ. ದ್ಯಾವೇಗೌಡ ಮಾತನಾಡಿ ಇಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದಿಂದ ಐಟೆಕ್ ಮಾದರಿಯವ ತರಭೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು, ಅತ್ಯುತ್ತಮ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ನೀಡುತ್ತಿರುವುದು ಸಂತೋಷದ ಸಂಗತಿ, ಹಾಗೇಯೇ ಕಲಿಯುವಂತಹ ಶಿಬಿರಾರ್ಥಿಗಳು ಮೈಸೂರು ವಿಭಾಗದ ಎಲ್ಲಾ ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಬಾಗವಹಿಸುವುದು ಕಂಡಾಗ ಮಹಾಮಂಡಳದ ಉದ್ದೇಶವಾದ ಸಹಕಾರ ಶಿಕ್ಷಣ ತರಬೇತಿ ಅತ್ಯುನ್ನತ ಮಟ್ಟಕ್ಕೆ ಏರಿದೆ ಎಂದರು.

ಈ ವೇಳೆ ಹಾಸನ ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷ ಡಿ.ಪಿ. ಸೋಮೇಗೌಡ, ನಿರ್ದೇಶುರುಗಳಾದ ವಿ.ಎನ್. ರಾಜಣ್ಣ, ಪುಟ್ಟಸ್ವಾಮಿಗೌಡ, ನಾಗರಾಜು, ಪದ್ಮರಾಜ್, ಪ್ರವೀಣ್, ಸಿದ್ದೇಶ್, ಸೋಮಣ್ಣ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಸಮನ್ವಯಾಧಿಕಾರಿ ಮಲ್ಲಯ್ಯಶೆಟ್ಟಿ ಇನ್ನಿತರರು ಭಾಗವಹಿಸಿದ್ದರು.

### 19 ಜನರಿಗೆ ಸಮನ್ಸ್ ಜಾರಿ | ಜಿಲ್ಲಾದ್ಯಂತ ವ್ಯಾಪಕ ವಿರೋಧ

# ಅರ್ಜುನನ ಸಾವಿಗೆ ನ್ಯಾಯ ಕೇಳಿದವರ ವಿರುದ್ಧ ಎಫ್ಐಆರ್

• ಪ್ರಜೋದಯ ವರದಿ

**ಸಕಲೇಶಪುರ:** ಕಾಡಾನೆ ಜೊತೆಗಿನ ಕಾದಾಟದಲ್ಲಿ ವೀರ ಮರಣವಪ್ಪಿದ ಮೈಸೂರು ದಸರಾ ಅಂಬಾರಿ ಹೊತ್ತ ಅರ್ಜುನ ಆನೆಯ ಸಾವಿಗೆ ನ್ಯಾಯ ಕೇಳಿದ 19 ಹೋರಾಟಗಾರರ ವಿರುದ್ಧ ಎರಡು ವರ್ಷಗಳ ಬಳಿಕ ಅರಣ್ಯ ಇಲಾಖೆ ಎಫ್ಐಆರ್ ದಾಖಲಿಸಿದೆ.

ಮೈಸೂರು ದಸರಾದಲ್ಲಿ 8 ವರ್ಷ ಅಂಬಾರಿ ಹೊತ್ತಿದ್ದ ಅರ್ಜುನ ಕರ್ನಾಟಕದ ಸಾಂಸ್ಕೃತಿಕ ವೈಭವದ ಜೀವಂತ ಪ್ರತೀಕವಾಗಿದ್ದ. 2023ರ ಡಿ.4ರಂದು ಸಕಲೇಶಪುರ ತಾಲ್ಲೂಕಿನ ಯಸಳೂರು ವಲಯಾರಣ್ಯ ವ್ಯಾಪ್ತಿಯಲ್ಲಿ ಕಾಡಾನೆ ಜೊತೆಗೆ ನಡೆದ ಘರ್ಷಣೆಯಲ್ಲಿ ಸಾವಿಗೀಡಾಗಿದ್ದ. ಆದರೆ ಆತನ ಸಾವಿನ ಕುರಿತು ಹಲವು ಅನುಮಾನಗಳು ವ್ಯಕ್ತವಾಗಿದ್ದ ಹಿನ್ನಲೆಯಲ್ಲಿ ಸ್ಥಳೀಯರು, ಪರಿಸರ ಪ್ರೇಮಿಗಳು ಹಾಗು ಅರ್ಜುನನ ಅಭಿಮಾನಿಗಳು ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿದ್ದರು.

ಈ ಹಿನ್ನಲೆಯಲ್ಲಿ ನೂರಾರು ಜನರು ಹೋರಾಟ ನಡೆಸಿ, ನಿವೃತ್ತಿ ಹೊಂದಿದ್ದ ಅರ್ಜುನನನ್ನು ಕಾಡಾನೆ ಕಾರ್ಯಾಚರಣೆಗೆ ಬಳಸಿರುವುದು ಸರಿಯಲ್ಲವೆಂದು ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಕಾಡಾನೆಗೆ ಅಗತ್ಯವಾಗಿದ್ದ ಅರವಳಿಕೆ ಮತ್ತು ಅರಣ್ಯ ಇಲಾಖೆಯ ನಿರ್ಲಕ್ಷ್ಯದಿಂದ ಸಾಕಾನೆ ಪ್ರಶಾಂತನಿಗೆ ಬಿದ್ದು ಗಾಯಗೊಂಡ ಘಟನೆ ಕೂಡ ಚರ್ಚೆಗೆ ಕಾರಣ ವಾಗಿತ್ತು. ಪ್ರಶಾಂತ



ಕಾರ್ಯಾಚರಣೆಯಿಂದ ಹಿಂದೆ ಸರಿಯುವಂತೆ ಮಾಡಿದ್ದು, ಅದು ಅರ್ಜುನನ ಸಾವಿಗೆ ಕಾರಣ ವಾದ ಅರಣ್ಯ ಇಲಾಖೆಯ ನಿರ್ಲಕ್ಷ್ಯವೇ ಎಂದು ಹೋರಾಟಗಾರರು ಆರೋಪಿಸಿ, ಸಮಗ್ರ ತನಿಖೆಗೆ ಒತ್ತಾಯಿಸಿದ್ದರು. ಈ ವೇಳೆ ಸ್ಥಳಕ್ಕೆ ಭೇಟಿ ನೀಡಿದ್ದ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಸೂಕ್ತ ತನಿಖೆ ನಡೆಸುವುದಾಗಿ ಭರವಸೆ ನೀಡಿದ್ದರು.

**ಯಾರ್ಯಾರ ವಿರುದ್ಧ ಎಫ್ಐಆರ್**

ಆ ಹೋರಾಟದಲ್ಲಿ ಭಾಗಿಯಾಗಿ ನ್ಯಾಯ ಒತ್ತಾಯಿಸಿದ್ದ 19 ಜನರ ವಿರುದ್ಧ ಅರಣ್ಯ ಇಲಾಖೆ ಎಫ್ಐಆರ್ ದಾಖಲಿಸಿ ಸಮನ್ಸ್ ಜಾರಿಗೊಳಿಸಿದೆ. ಅವರಲ್ಲಿ ಪರಿಸರ ಹೋರಾಟಗಾರ ಹುರುಡಿ ವಿಕ್ರಂ, ತಾಲ್ಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷ ಯಡೇಹಳ್ಳಿ ಆರ್. ಮಂಜುನಾಥ್, ಜೆಡಿಎಸ್ ಮುಖಂಡ ಬೆಕ್ಕಿನಳ್ಳಿ ನಾಗರಾಜ್ ಸೇರಿ ನವೀನ್, ನಾಗರಾಜು, ಸೋದನ್, ರವಿ, ಆಕಾಶ್, ರತನ್, ಕಿರಣ್, ಆನಂದ್, ದೇವರಾಜ್, ತ್ರಿವನ್ ಗೌಡ, ಜಯಪ್ಪ, ಸಂತೋಷ್, ಸಚಿನ್, ಜಗದೀಶ್, ಮನು ಮತ್ತು ಮಿಥುನ್ ಸೇರಿದ್ದಾರೆ.

ಸ್ಥಳೀಯರು, ಸಂಘ-ಸಂಸ್ಥೆಗಳ ಪ್ರತಿನಿಧಿಗಳು, ಪರಿಸರ-ಗಜ ಪ್ರೇಮಿಗಳು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದ ಹೋರಾಟವನ್ನು ಇದೀಗ ಕಾನೂನು ಮೂಲಕ ಬಗ್ಗು ಬಡಿಯಲು ಹೊರಟಿರುವುದು ಯಾವ ನ್ಯಾಯ ಎಂಬ ಪ್ರಶ್ನೆ ಕಾಡತೊಡಗಿದೆ. ನ್ಯಾಯಕ್ಕಾಗಿ ಹೋರಾಡಿದ ವರನ್ನು ಆರೋಪಿಗಳನ್ನಾಗಿಸಿರುವುದು ಅನ್ಯಾಯವೆಂದು ಅವರು ಹೇಳಿದ್ದಾರೆ. ಇದೇ ವೇಳೆ ಹೋರಾಟಗಾರರ ಮೇಲೆ ದಾಖಲಾಗಿರುವ ಮೊಕದ್ದಮೆಗಳನ್ನು ಹಿಂಪಡೆಯುವಂತೆ ಸರ್ಕಾರ ವನ್ನು ಒತ್ತಾಯಿಸಿದ್ದಾರೆ.

ಅರ್ಜುನ ಆನೆಯ ಸಾವಿನ ನಿಜ ಕಾರಣ ಬಹಿರಂಗವಾಗಬೇಕು ಹಾಗು ಹೋರಾಟಗಾರರ ಮೇಲಿನ ಕ್ರಮವನ್ನು ನಿಲ್ಲಿಸಬೇಕು ಎಂಬ ಆಗ್ರಹ ಕೇಳಿಬಂದಿದೆ.

### ಕೆಪಿಸಿಸಿ ಸದಸ್ಯತ್ವಕ್ಕೆ ರಾಜೀನಾಮೆ

ಈ ಬೆಳವಣಿಗೆಯ ಹಿನ್ನಲೆಯಲ್ಲಿ ಅರ್ಜುನನಿಗೆ ನ್ಯಾಯ ಸಿಕ್ಕಬೇಕು ಮತ್ತು ಹೋರಾಟಗಾರರ ಮೇಲಿನ ಪ್ರಕರಣಗಳನ್ನು ರದ್ದುಗೊಳಿಸಬೇಕು ಎಂಬ ಆಗ್ರಹದೊಂದಿಗೆ ಕೆಪಿಸಿಸಿ ಸದಸ್ಯ ಯಡೆಹಳ್ಳಿ ಆರ್.ಮಂಜುನಾಥ್ ಅವರು ತಮ್ಮ ಪಕ್ಷದ ಪದವಿಗೆ ರಾಜೀನಾಮೆ ಸಲ್ಲಿಸಿದ್ದಾರೆ. ಈ ಕುರಿತು ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ಪತ್ರ ಬರೆದು, ಕಾಂಗ್ರೆಸ್ ಪಕ್ಷ ನನಗೆ ನೀಡಿದ್ದ ಸ್ಥಾನಮಾನಗಳಿಗೆ ನಾನು ಎಂದಿಗೂ ಋಣಿ. ಆದರೆ ನಮ್ಮದೇ ಸರ್ಕಾರ ಅಧಿಕಾರದ ಲ್ಲಿರುವ ಸಂದರ್ಭದಲ್ಲಿ, ನ್ಯಾಯ ಒತ್ತಾಯಿಸಿದ ಹೋರಾಟಗಾರರನ್ನು ಪ್ರಕರಣಕ್ಕೆ ಒಳಪಡಿಸಿರು ವುದು ಮನಸ್ಸಿಗೆ ನೋವುಂಟು ಮಾಡಿದೆ. ಆದ್ದರಿಂದ ಕೆಪಿಸಿಸಿ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಿದ್ದೇನೆಂದು ತಿಳಿಸಿದ್ದಾರೆ.

### ಕಾಫಿ ಕಳವು: ಪೊಲೀಸ್ ಠಾಣೆ ಮೆಟ್ಟಿಲೇರಿದ ಬೆಳೆಗಾರರು

» ಮೊದಲನೇ ಪುಟದಿಂದ

ಕಾಫಿ ಬೆಳೆಗಾರ ಜಗನ್ನಾಥ್ ಶೆಟ್ಟಿ ಅವರು ಮಾತನಾಡಿ, ಭಾನುವಾರ ಕಾಫಿ ಕೊಯ್ದು ಪಲ್ಪರ್ ಮಾಡಿ ಮನೆಯ ಸಮೀಪ ಕಣದಲ್ಲಿ ಸುಮಾರು 800 ಕೆಜಿಯಷ್ಟು ಹಸಿ ಕಾಫಿ ಬೀಜಗಳನ್ನು ಚೀಲದಲ್ಲಿ ಶೇಖರಿ ಸಿಟ್ಟು ಪಕ್ಕದಲ್ಲಿಯೇ ಕಾರಿನೊಳಗೆ ವಿಶ್ರಾಂತಿ ಪಡೆ ಯುತ್ತಿದ್ದೆ. ಮಧ್ಯ ರಾತ್ರಿ 3 ಗಂಟೆ ಸಮಯದಲ್ಲಿ ಮೂರ್ನಾಲ್ಕು ಜನರಿದ್ದ ಖದೀಮರ ಗುಂಪು ಕೈಯಲ್ಲಿ ಲಾಂಗು ಮಚ್ಚುಗಳ ಸಮೇತ ಬಂದು ಸುಮಾರು 2 ಲಕ್ಷ ರೂ. ಮೌಲ್ಯದ ಕಾಫಿಯನ್ನು ದೋಚುತ್ತಿದ್ದಾರು. ಈ ವೇಳೆ ಎಚ್ಚರ ಗೊಂಡು ಆತ್ಮರಕ್ಷಣೆಗಾಗಿ ಬಂದೂಕಿ ನಿಂದ ಗಾಳಿಯಲ್ಲಿ ಗುಂಡು ಹಾರಿಸಿದೆ ಆಗ ಅಲ್ಲಿಂದ ಕಾಲ್ಕಿತ್ತಿದ್ದಾರೆ. ಸಾಲದಕ್ಕೆ ಮರುದಿನ ಬೆಳಿಗ್ಗೆ 7.30ರ ಸಮಯ ದಲ್ಲಿ ದೂರು ನೀಡಲು ಸ್ಥಳೀಯ ಪೊಲೀಸ್ ಠಾಣೆಗೆ ಹೋಗಿ ವಾಪಾಸ್ ಬರುವಾಗ ಅಲ್ಲಿ ಉಳಿದಿದ್ದ ಇನ್ನೂ ಎರಡು ಮೂಟೆ ಕಾಫಿಯನ್ನು ಸಹಾ ಕಳವು ಮಾಡಿದ್ದಾರೆ. ಇವೆಲ್ಲವನ್ನೂ ಗಮನಿಸಿದರೆ ಯಾವುದೋ ಗುಂಪು ನಿತ್ಯ ಹುನ್ನಾರ ನಡೆಸುತ್ತಿದೆ. ಈ ಬಗ್ಗೆ ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿ ಖದೀಮರನ್ನು ಪತ್ತೆಹಚ್ಚಿ ನಮಗೆ ನ್ಯಾಯ ಒದಗಿಸಬೇಕು ಹಾಗು ಇಂತಹ ಪ್ರಕರಣಗಳು ಮತ್ತೆಲ್ಲೂ ಮರುಕಳಿಸಬಾರದೆಂದು ಮನವಿ ಮಾಡಿದರು.

### ಎಂಟಿಇಎಸ್ ಆಡಳಿತ ಮಂಡಳಿ ಸಭೆಗೆ ಹೈಕೋರ್ಟ್ ತಡೆ

» ಮೊದಲನೇ ಪುಟದಿಂದ

ಪ್ರಕರಣದ ತುರ್ತು ನೋಟೀಸ್ ಅನ್ನು ಪ್ರತಿವಾದಿಗಳಿಗೆ ಜಾರಿಗೊಳಿಸಲಾಗಿದ್ದು, ಮುಂದಿನ ವಿಚಾರಣೆ 2026 ಜನವರಿ 7 ರಂದು ನಡೆಯಲಿದೆ.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿ ಅಧ್ಯಕ್ಷ ಸ್ಥಾನಕ್ಕಾಗಿ ಸಂಸ್ಥೆ ಮಾಜಿ ಅಧ್ಯಕ್ಷ ಅಶೋಕ್ ಹಾರನ ಹಳ್ಳಿ ಬಣದ ಬಿ.ಆರ್.ಗುರುದೇವ್ ಮತ್ತು ಆರ್.ಟಿ. ದ್ಯಾವೇಗೌಡ ಅವರ ಬಣದ ನಡುವೆ ಕಿತ್ತಾಟ ನಡೆಯುತ್ತಿದ್ದು, ಅಧ್ಯಕ್ಷ ಸ್ಥಾನದ ಕಗ್ಗಂಟು ಮುಂದು ವರೆದಿದೆ. ಈ ನಡುವೆ ಡಿ.11ರಂದು ಆರ್.ಟಿ.ದ್ಯಾವೇಗೌಡ ಅವರ ಬಣ ಕಾರ್ಯ ಕಾರಿ ಸಮಿತಿ ಸಭೆ ನಡೆಸಲು ಮುಂದಾಗಿತ್ತು. ಅದಕ್ಕೆ ವಿರೋಧ ವ್ಯಕ್ತ ಪಡಿಸಿದ ಬಿ.ಆರ್.ಗುರುದೇವ್ ಅವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದ ರಿಂದ ವಿಚಾರಣೆ ನಡೆಸಿದ ನ್ಯಾಯಾ ಲಯ ಸಭೆ ನಡೆಸಲು ತಡೆಯೊಡ್ಡಿದೆ.

**ಜಿಲ್ಲಾ ನ್ಯಾಯಾಲಯದಲ್ಲೂ ಪ್ರಕರಣ**

ಈ ಹಿಂದೆ ಡಿ.4 ರಂದು ಜಿಲ್ಲಾ ನ್ಯಾಯಾ ಲಯ ಸಂಘದ ಅಧ್ಯಕ್ಷ ಆರ್ .ಟಿ. ದ್ಯಾವೇಗೌಡ, ಕಾರ್ಯದರ್ಶಿ ಚೌಡಹಳ್ಳಿ ಜಗದೀಶ ಮತ್ತು ಖಜಾಂಚಿ ಪಾರ್ಶ್ವನಾಥ್ ಅವರು ಅಧಿಕಾರದಲ್ಲಿ ಮುಂದುವರೆಯಲಿ ದ್ದಾರೆ. ಅಂತಿಮ ತೀರ್ಪು ಬರುವವರೆಗೂ ಯಾವುದೇ ರೀತಿಯಲ್ಲೂ ಹಸ್ತಕ್ಷೇಪ ಮಾಡ ಬಾರದು ಎಂದು ಜಿಲ್ಲಾ ನ್ಯಾಯಾಲಯ ಆದೇಶ ಹೊರಡಿಸಿತ್ತು. ಈ ನಡುವೆ ಹೈಕೋರ್ಟ್ ತಡೆ ನೀಡಿರುವುದು ಎರಡು ಬಣಗಳ ನಡುವಿನ ತಿಕ್ಕಾಟ ಮುಂದುವರಿದಂತಾಗಿದೆ.

### ದ್ವೇಷ ಭಾಷಣ ಬಂದ್‌ಗೆ ವಿಧೇಯಕ ಮಂಡನೆ

» ಮೊದಲನೇ ಪುಟದಿಂದ

ಧರ್ಮ, ಜನಾಂಗ, ಜಾತಿ ಅಥವಾ ಸಮುದಾಯ, ಲಿಂಗ, ಲೈಂಗಿಕ ದೃಷ್ಟಿಕೋನ, ಜನ್ಮಸ್ಥಳ, ವಾಸಸ್ಥಳ, ಭಾಷೆ, ಅಂಗವೈಕಲ್ಯ ಅಥವಾ ಬುಡಕಟ್ಟು ಆಧಾರದ ಮೇಲೆ ಯಾವುದೇ ಪಕ್ಷಪಾತ ವನ್ನು ದ್ವೇಷ ಭಾಷಣ ಎಂದು ವರ್ಗೀಕರಿಸಲಾಗಿದೆ. ಮೊದಲ ಬಾರಿಗೆ ದ್ವೇಷ ಭಾಷಣ, ದ್ವೇಷ ಅಪರಾಧಗಳಿಗೆ ಕನಿಷ್ಠ 1 ವರ್ಷ ಮತ್ತು ಗರಿಷ್ಠ 7 ವರ್ಷದವರೆಗೆ ಜೈಲು ಹಾಗು 50 ಸಾವಿರ ರೂ. ದಂಡ ವಿಧಿಸಲು ಅವಕಾಶ ನೀಡಲಾಗಿದೆ. ಅಪರಾಧ ಪುನರಾವರ್ತನೆ ಆದರೆ ಕನಿಷ್ಟ 2 ವರ್ಷದಿಂದ ಗರಿಷ್ಠ 10 ವರ್ಷದ ವರೆಗೆ ಜೈಲು ಶಿಕ್ಷೆ ಹಾಗು 1 ಲಕ್ಷ ರೂ ದಂಡ ವಿಧಿಸಬಹು ದಾಗಿದೆ.

ದ್ವೇಷ ಭಾಷಣ ಮಾಡಿ ಪ್ರಕರಣ ದಾಖಲಾ ದರೆ ಜಾಮೀನು ರಹಿತ ಪ್ರಕರಣವಾಗಿದ್ದು, ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ್ ಮೂಲಕ ದ್ವೇಷ ಭಾಷಣಗಳ ವಿಚಾರಣೆ ಮಾಡ ಬೇಕು. ದ್ವೇಷ ಭಾಷಣಗಳ ಪ್ರಕರಣ ಗಳನ್ನು ಕಾರ್ಯ ನಿರ್ವಾಹಕ ಮ್ಯಾಜಿಸ್ಟ್ರೇಟ್ ಅಥವಾ ಉಪ ಪೊಲೀಸ್ ವರಿಷ್ಠಾಧಿಕಾರಿ ದರ್ಜೆ ಗಿಂತ ಕಡಿಮೆ ಇಲ್ಲದ ಯಾರೇ ಪೊಲೀಸ್ ಅಧಿಕಾರಿಯು ಮಾಹಿತಿ ಸ್ವೀಕರಿಸಿ ದರೆ ವಿಚಾರಣೆ ಮಾಡಿ ಕಾಯ್ದೆಯಡಿ ಕ್ರಮ ಕೈಗೊಳ್ಳಲು ಅವಕಾಶ ನೀಡಲಾಗಿದೆ.

### ಅಂಗನವಾಡಿ ನೌಕರರಿಗೆ ನೆರವಾಗುವಂತೆ ಮನವಿ



• ಪ್ರಜೋದಯ ವರದಿ

**ಹಾಸನ:** ರಾಜ್ಯದ ಅಂಗನವಾಡಿ ಕಾರ್ಯ ಕರ್ತರು ಹಾಗು ಸಹಾಯಕರ ಬೇಡಿಕೆಗಳನ್ನು ಈಡೇರಿಸುವಂತೆ ಕೋರಿ ಸಂಸದ ಶ್ರೇಯಸ್ ಪಟೇಲ್ ಅವರು ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಅನ್ನಪೂರ್ಣ ದೇವಿ ಅವರನ್ನು ಭೇಟಿಯಾಗಿ ಮನವಿ ಮಾಡಿದರು.

ಬುಧವಾರ ದೆಹಲಿಯಲ್ಲಿ ಸಚಿವರನ್ನು ಭೇಟಿಯಾಗಿ, ಅಂಗನವಾಡಿ ಕಾರ್ಯಕ ರ್ತರು ಮತ್ತು ಸಹಾಯಕರು ಕಳೆದ 10 ವರ್ಷಗಳಿಂದ ಭತ್ಯೆ ಪರಿಷ್ಕರಣೆ ಆಗದೆ ಸಂಕಷ್ಟದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರಸ್ತುತ 4,500 ರೂ. (ಕಾರ್ಯಕರ್ತರು) ಮತ್ತು 2,250 ರೂ. (ಸಹಾಯಕರು) ಪಡೆ ಯುತ್ತಿದ್ದಾರೆ. ಜೀವನ ವೆಚ್ಚ ಏರಿಕೆ ಮತ್ತು ಕೆಲಸದ ಭಾರ ಹೆಚ್ಚಳದಿಂದ ಈ ಸಂಭಾವನೆ ತುಂಬಾ ಕಡಿಮೆಯಾಗಿದೆ. ಜೊತೆಗೆ ಡಿಎ ಮತ್ತು ಚಾರ್ಜ್ ಅಲೌನ್ಸ್‌ಗಳ ಹೆಚ್ಚಳವೂ ಹಲವು ವರ್ಷಗಳಿಂದ ಬಾಕಿ ಇದೆ ಎಂದು ಗಮನಕ್ಕೆ ತಂದರು. ಮಕ್ಕಳು, ಗರ್ಭಿಣಿ ಯರು ಹಾಗು ಸಮುದಾಯದೊಂದಿಗೆ ಕೆಲಸ ಮಾಡುವ ಮುಂಚೂಣಿ ಸಿಬ್ಬಂದಿಗೆ ಇಎಸ್ಐ ಹಾಗು ಸಾಮಾಜಿಕ ಭದ್ರತೆ ಅಗತ್ಯ ವಾಗಿದೆ. ಇವರ ಕಲ್ಯಾಣಕ್ಕಾಗಿ ಭತ್ಯೆ ಪರಿಷ್ಕ ರಣೆ, ಡಿಎ/ಚಾರ್ಜ್ ಅಲೌನ್ಸ್ ಹೆಚ್ಚಳ ಮತ್ತು ಇಎಸ್ಐ ಸೌಲಭ್ಯಗಳನ್ನು ತಕ್ಷಣ ಒದಗಿಸಲು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

### ಪೊಲೀಸ್ ವರಿಷ್ಠಾಧಿಕಾರಿ ವರ್ಗಾವಣೆಗೆ ಎಎಪಿ ಆಗ್ರಹ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಕೊಲೆ, ದರೋಡೆ, ಗಾಂಜಾ, ಡ್ರಗ್ಸ್, ಜೂಜಾಟ, ಇಸ್ಪೀಟ್ ದಂಧೆ ಮಿತಿ ಮೀರಿದ್ದು ಕಾನೂನು ಕಾಪಾಡುವಲ್ಲಿ ಪೊಲೀಸ್ ಇಲಾಖೆ ಸಂಪೂರ್ಣ ವಿಫಲವಾಗಿದೆಯೆಂದು ಎಎಪಿ ರಾಜ್ಯ ಉಪಾಧ್ಯಕ್ಷ ಅಗಿಲೆ ಯೋಗೇಶ್ ಅವರು ಆರೋಪಿಸಿದರು.

ಸುದ್ದಿಗೋಷ್ಟಿಯಲ್ಲಿ ಬುಧವಾರ ಮಾತನಾಡಿ, ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿ ಮೊಹಮ್ಮದ್ ಸುಜೀತಾ ಅವರನ್ನು ಕೂಡಲೇ ವರ್ಗಾವಣೆ ಮಾಡಬೇಕು. ಎಸ್‌ಪಿ ಅವರು ಹಾಸನಕ್ಕೆ ಬಂದ ನಂತರ ಕಾನೂನು ಸುವ್ಯವಸ್ಥೆ ಗಾಳಿಗೆ ತೂರಿದ್ದಾರೆ. ಜಿಲ್ಲೆಯಾದ್ಯಂತ ಅಪರಾಧ ಕತ್ಯಗಳು ಹೆಚ್ಚಾಗುತ್ತಿವೆ. ಗಾಂಜಾ ನಶೆಯಲ್ಲಿ ಯುವಕ ಕೊಲೆಯಾದರೂ ಪೊಲೀಸರ ಗಮನಕ್ಕೆ ಬಂದಿಲ್ಲ. ಗುಪ್ತಚರ ಇಲಾಖೆ ಸಂಪೂರ್ಣ ನಿಷ್ಕ್ರಿಯವಾಗಿದೆಯೆಂದರು.

ಕೊಲೆ ಮಾಡಿದ ಯುವಕನೇ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ಬಳಿಕ ಪೊಲೀಸರ ಕಣ್ಣು ತೆರೆದಿದೆ. ಗಾಂಜಾ, ಅಫೀಮು, ಡ್ರಗ್ಸ್ ಶಾಲಾ-ಕಾಲೇಜು ವಿದ್ಯಾರ್ಥಿ ಗಳ ಕೈಗೆ ಸುಲಭವಾಗಿ ಸಿಗುತ್ತಿರುವುದು ಆತಂಕಕಾರಿ. ಅದನ್ನು ತಡೆಗಟ್ಟುವವರು ಯಾರು, ರಾತ್ರಿ ವೇಳೆ ಮಹಿಳೆಯರು, ಮಕ್ಕಳಿಗೆ ಸುರಕ್ಷತೆ ಇಲ್ಲವಾಗಿದೆ. ಬೈಕ್ ವ್ಹೀಲಿಂಗ್ ಪ್ರಕರಣ ಹೆಚ್ಚುತ್ತಿವೆ. ಸರಗಳ್ಳತನ, ಸುಲಿಗೆ, ನಿರಂತರ ಜೂಜಾಟ, ಇಸ್ಪೀಟ್, ಮಟ್ಕಾ ಅಟ್ಟಹಾಸ ಮೆರೆಯುತ್ತಿದೆ. ಆದರೂ ಎಸ್‌ಪಿ ಕಣ್ಣುಮುಚ್ಚಿ ಕುಳಿತಿದ್ದಾರೆಂದರು.



ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ಅದಕ್ಕಾಗಿ ದಕ್ಷ ಪೊಲೀಸ್ ಅಧಿಕಾರಿಯನ್ನು ನೇಮಿಸಬೇಕು. ಗಾಂಜಾ-ಡ್ರಗ್ ಮಾಫಿಯಾ, ಕೊಲೆ-ದರೋಡೆ ಪ್ರಕರಣ ಗಳ ಬಗ್ಗೆ ವಿಶೇಷ ತನಿಖಾ ತಂಡ ರಚಿಸಿ ಸಂಪೂರ್ಣ ತನಿಖೆ ನಡೆಸಬೇಕು. ನಿರಂತರವಾಗಿ ನಡೆ ಯುತ್ತಿರುವ ಕಾನೂನು ಬಾಹಿರ ಚಟುವಟಿಕೆ ಖಂಡಿಸಿ, ಪಕ್ಷಾತೀತವಾಗಿ ಎಲ್ಲಾ ಸಂಘ-ಸಂಸ್ಥೆ ಗಳು, ಸಾಹಿತಿಗಳು, ಸಾಮಾಜಿಕ ಕಾರ್ಯಕರ್ತರನ್ನು ಒಗ್ಗೂಡಿಸಿ ನಗರದಲ್ಲಿ ಶೀಘ್ರವೇ ಬೃಹತ್ ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಟಿಯಲ್ಲಿ ಎಎಪಿ ಜಿಲ್ಲಾಧ್ಯಕ್ಷ ಆನಂದ್, ತಾಲ್ಲೂಕು ಅಧ್ಯಕ್ಷ ಮಂಜು, ಕಾರ್ಯ ದರ್ಶಿ ಖಾದರ್, ಕಾರ್ಯಕರ್ತೆ ಶೋಭಾ ಇದ್ದರು.

### ಕಾಡಾನೆ ಹಾವಳಿ ತಡೆಗೆ ರೈತರಿಂದ ಪ್ರತಿಭಟನೆ

» ಮೊದಲನೇ ಪುಟದಿಂದ

ಸಾವು-ನೋವಾದಾಗ ಮಾತ್ರ ಬರುವ ಅರಣ್ಯ ಇಲಾಖೆ ಅಧಿ ಕಾರಿಗಳು ಬೆಳೆಗಾರರ ಸಂಕಷ್ಟ ಅರಿಯಲು ಕನಿಷ್ಠ ಸೌಜನ್ಯಕ್ಕೂ ಈ ಭಾಗದಲ್ಲಿ ಪರಿಶೀಲನೆ ಮಾಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅರಣ್ಯ ಸಚಿವರು ಹಾಗು ಇಲಾಖೆ ಸಿಬ್ಬಂದಿ ನಿದ್ರೆಗೆ ಮಾತ್ರ ಸೀಮಿತರಾಗಿದ್ದಾರೆ. ಈ ಭಾಗದಲ್ಲಿ ಯಾವುದೇ ಸಾವು- ನೋವಾದರು ಸಹ ನಮ್ಮ ಸಮಸ್ಯೆಗಳನ್ನು ಆಲಿಸುವುದಿಲ್ಲ. ಇಂತಹ ಲಜ್ಜೆಗೆಟ್ಟ ಸಚಿವರು ಆ ಸ್ಥಾನದಲ್ಲಿ ಕೂರುವ ಯೋಗ್ಯತೆ ಇಲ್ಲ. ಕೂಡಲೇ ಕಾಡಾನೆಗಳನ್ನು ಸ್ಥಳಾಂತರ ಮಾಡಬೇಕೆಂದು ಒತ್ತಾಯಿಸಿದರು.

ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ಅದ್ದೂರಿ ಚೇತನ್ ಹಾಗು ರೈತ ಸಂಘದ ಅಧ್ಯಕ್ಷ ಭೋಗ ಮಲ್ಲೇಶ್ ಮಾತನಾಡಿ, ಅನುಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಣಗುಪ್ಪೆ, ಬೆಳ್ಳಾವರ, ಹಿರೆ ಹಸಡೆ, ಚಿಕ್ಕ ಹಸಡೆ, ಡೋಲನಮನೆ, ನೇರಳಕಟ್ಟೆ ಭಾಗದಲ್ಲಿ ಕಾಡಾನೆಗಳ ಹಾವಳಿ ದಿನ ದಿಂದ ದಿನಕ್ಕೆ ಹೆಚ್ಚುತ್ತಿದೆ. ಜಿಲ್ಲಾಧಿಕಾರಿ ಈ ಸಮಸ್ಯೆಗೆ ಪರಿಹಾರ ನೀಡಲು ಸಭೆ ಕರೆದು ಮೂರು ತಿಂಗಳಾದರು ಕೇವಲ ಅದು ಭಾಷಣಕ್ಕೆ ಮಾತ್ರ ಸೀಮಿತವಾಗಿದೆ. ನಾವು ಎಷ್ಟೇ ಬಾರಿ ಪ್ರತಿ ಭಟನೆ ಮಾಡಿದರೂ ಪ್ರಯೋಜನವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅರೇಹಳ್ಳಿ ಹೋಬಳಿ ಕಾಫಿ ಬೆಳೆಗಾರ ಸಂಘದ ಅಧ್ಯಕ್ಷ ಶಾರೀಬ್ ಫರ್ಹಾನ್ ಮಾತನಾಡಿ ದರು. ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವೀರಭದ್ರಶೆಟ್ಟಿ, ಮಾಜಿ ಅಧ್ಯಕ್ಷ ಬಸವರಾಜ್, ಸತೀಶ್, ಚಂದನ್, ವೆಂಕಟೇಶ್, ದೇವರಾಜು, ಮಂಜುನಾಥ್, ಶಿವಶಂಕರಪ್ಪ, ಗ್ರಾ.ಪಂ. ಅಧ್ಯಕ್ಷೆ ಲಲಿತಾ, ಇಂದಿರಾ, ಲೋಹಿತ್, ವಿನಯ್, ರಾಮಶೆಟ್ಟಿ, ತೇಜಸ್, ವೆಂಕಟೇಶ್, ರವಿ ಹಾಜರಿದ್ದರು.

### ಜನರಿಗೆ ಸವಲತ್ತು ನೀಡದೆ ಬರಿಗೈಯಲ್ಲಿ ಕಳಿಸಿದ ಸರ್ಕಾರ

» ಮೊದಲನೇ ಪುಟದಿಂದ

ಯಿಂದ ನುಣುಚಿಕೊಳ್ಳುವ ಸಲುವಾಗಿ ಹಾಗು ಮಲೆನಾಡು ಭಾಗದ ಜನರನ್ನು ಹೆದರಿಸಲು ಕೇಸು ಹಾಕಿದ್ದಾರೆ. ಸರ್ಕಾರ ಕೂಡಲೇ ಪ್ರಕರಣ ಹಿಂಪಡೆಯಬೇಕು. ಇಲ್ಲದಿದ್ದರೆ ಹೋರಾಟ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ಅವರು ಮಾತನಾಡಿ, ಡಿ.6ರ ಸಮಾವೇಶವನ್ನು ಹಾಸನ ಬದಲು ಅರಸೀಕೆರೆಯಲ್ಲಿ ಮಾಡಬಹು ದಿತ್ತು. ಆ ತಾಲ್ಲೂಕಿಗೆ ಅಧಿಕ ಯೋಜನೆ ಘೋಷಿಸಿದ್ದಾರೆ. ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಶ್ರೇಷ್ಠ ಆರ್ಥಿಕ ತಜ್ಞನಂತೆ ಮಾತನಾ ಡುತ್ತಾರೆ. ಅವರು ಜೆಡಿಎಸ್‌ನಲ್ಲೇ ಇದ್ದರು ಎಂಬುದನ್ನು ಯಾವತ್ತೂ ಮರೆಯಬಾರದೆಂದು ತಿರುಗೇಟು ನೀಡಿದರು. ರಣಘಟ್ಟ ಏತ ನೀರಾವರಿ ಯೋಜನೆಗೆ ಅನುದಾನ ಕೊಟ್ಟಿಲ್ಲ. 60 ಕೆರೆಗಳಿಗೆ ನೀರು ಹರಿಸುವ ಮತ್ತೊಂದು ಯೋಜನೆಗೆ ಬಿಡಿಗಾಸು ನೀಡಿಲ್ಲ. ಹಿಂದಿನ ಸರ್ಕಾರದ ಯೋಜನೆಗಳ ಉದ್ಘಾಟಿಸುವುದೇ ಇವರ ಧ್ಯೇಯವಾಗಿದೆ. ರಸ್ತೆಯುದ್ದಕ್ಕೂ ಫ್ಲೆಕ್ಸ್ ಹಾಕಿರು ವುದೇ ಕಾಂಗ್ರೆಸ್‌ನ ಸಾಧನೆಯಾಗಿದೆ. ನಾವು ಸರ್ಕಾರ ಪತನಗೊಳಿಸಲು ಪ್ರಯತ್ನಿಸುವುದಿಲ್ಲ. 2028ರ ಚುನಾವಣೆ ಟಿಕೆಟ್‌ಗಾಗಿ ಓಡಾಡುತ್ತಿರುವವರನ್ನು ಓಲೈಸು ವುದನ್ನು ಬಿಟ್ಟು ಅಭಿವೃದ್ಧಿಗೆ ಗಮನ ಕೊಡಿ ಎಂದು ಸಲಹೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಎಸ್ .ದ್ಯಾವೇಗೌಡ, ಮಹಾನಗರ ಪಾಲಿಕೆ ಮಾಜಿ ಮೇಯರ್ ಗಿರೀಶ್ ಚನ್ನವೀರಪ್ಪ, ಮಾಧ್ಯಮ ವಕ್ತಾರ ಹೊಂಗೆರೆ ರಘು ಇದ್ದರು.

### ಡಿ.13ರಂದು ಎಂಸಿಇ ನೆನಪಿನ ದೋಣಿ

• ಪ್ರಜೋದಯ ವರದಿ

**ಹಾಸನ:** ನಗರದ ಮಲೆನಾಡುತಾಂತ್ರಿಕ ಮಹಾವಿದ್ಯಾಲಯದ ಹಳೆ ವಿದ್ಯಾರ್ಥಿ ಗಳ ಸಮ್ಮಿಲನ ಕಾರ್ಯಕ್ರಮ 'ನೆನಪಿನ ದೋಣಿ' ಡಿಸೆಂಬರ್ 13 ರಂದು ಕಾಲೇಜು ಆವರಣದಲ್ಲಿ ನಡೆಯಲಿದೆ. ಈ ವೇಳೆ ಹಳೆ ವಿದ್ಯಾರ್ಥಿಗಳು ಸ್ಥಾಪಿಸಿ ರುವ ವಿವಿಧ ವಿದ್ಯಾರ್ಥಿ ವೇತನಗಳ ವಿತರಣೆ ಹಾಗೂ ಸಾಧಕ ಹಳೆ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ ಜರುಗಲಿದೆ.

ಮಲೆನಾಡುತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷರಾದ ಆರ್.ಟಿ.ದ್ಯಾವೇಗೌಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಾಂಶುಪಾಲ ಡಾ. ಹೆಚ್.ಜೆ.ಅಮರೇಂದ್ರ, ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಕಾರ್ಯದರ್ಶಿ ಸಿ.ಆರ್.ಜಗದೀಶ್, ಖಜಾಂಚಿ ಹೆಚ್ .ಡಿ.ಪಾರ್ಶ್ವನಾಥ್, ಕಾಲೇಜು ನಿರ್ದೇ ಶಕ ಡಾ.ಎಸ್.ಪ್ರದೀಪ್, ಹಳೆ ವಿದ್ಯಾ ರ್ಥಿಗಳ ಸಂಘದ ಪದಾಧಿಕಾರಿಗಳಾದ ಡಾ.ಕೆ.ಎಸ್.ಜಯಂತ, ಮಹೇಂದ್ರ ಗೌಡ, ಸಿ.ಲಕ್ಷ್ಮೀಶ ಹಾಗೂ ವಿವೇಕ್ ಗೌಡ ಅವರು ಉಪಸ್ಥಿತರಿರುವರು.

# ಮಾನವ ಹಕ್ಕುಗಳ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ

• ಪ್ರಜೋದಯ ವರದಿ

**ಹಾಸನ:** ಪ್ರತಿಯೊಬ್ಬರಿಗೂ ಸ್ವತಂತ್ರ ವಾಗಿ ಜೀವಿಸುವ, ಮಾತನಾಡುವ, ಇಷ್ಟದ ಧರ್ಮ ಪಾಲಿಸುವ, ದುಡಿಯುವ ಹಕ್ಕಿದ್ದು ಅವುಗಳ ಮೇಲೆ ಯಾರಾದರೂ ಸವಾರಿ ಮಾಡಿದರೆ ಮಾನವ ಹಕ್ಕುಗಳ ಸ್ಪಷ್ಟ ಉಲ್ಲಂಘನೆ ಯಾಗುವುದು ಮಾತ್ರವಲ್ಲದೆ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಲು ಅವಕಾಶಗಳಿವೆಯೆಂದು ಪೋಕ್ಸೋ ನ್ಯಾಯಾಧೀಶ ದೇವರಾಜು ಅವರು ಹೇಳಿದರು.

ನಾಗರಿಕ ಹಕ್ಕುಗಳ ಸಂರಕ್ಷಣಾ ಸಂಘ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಎಂ.ಕೃಷ್ಣ ಕಾನೂನು ಕಾಲೇಜು ಹಾಗು ಸರ್ಕಾರಿ ಕಾನೂನು ಕಾಲೇಜಿನಿಂದ ನಗರದ ಎಂ.ಕೃಷ್ಣ ಕಾನೂನು ಕಾಲೇಜಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ಮನುಷ್ಯ ನನ್ನು ಮನುಷ್ಯನಾಗಿ ನೋಡದ ಪರಿಣಾಮ ಮಾನವ ಹಕ್ಕುಗಳ ಆಯೋಗವನ್ನು ವಿಶ್ವಸಂಸ್ಥೆ 1948ರಲ್ಲಿ



ಘೋಷಿಸಿತು. ತನಗೆ ಸೂಕ್ತವಾಗುವ ಧರ್ಮ, ಭಾಷೆ, ಉದ್ಯೋಗ, ಉಡುಗೆ, ಆಹಾರದ ಹಕ್ಕನ್ನು ಮನುಷ್ಯ ಹೊಂದಿರುತ್ತಾನೆ. ಲಿಂಗ ಅಥವಾ ಧರ್ಮದ ಆಧಾರದ ಮೇಲೆ ತಾರತಮ್ಯ ಮಾಡುವುದು ಶಿಕ್ಷಾರ್ಹ ಅಪರಾಧ. ಪುರುಷ ಮತ್ತು ಸ್ತ್ರೀ ತಾರತಮ್ಯವನ್ನು ಕಾನೂನು ಸಹಿಸುವುದಿಲ್ಲವೆಂದರು.

**ಪೋಕ್ಸೋ ಕಾಯ್ದೆ ಕುರಿತು ಇರಲಿ ಎಚ್ಚರ**

ಹದಿಹರೆಯದ ವಯಸ್ಸಿನಲ್ಲಿ ಪ್ರೀತಿಯ ಮೋಹದ ಬಲೆಗೆ ಸಿಲುಕಿ ಜೀವನ ಹಾಳು ಮಾಡಿ ಕೊಳ್ಳಬಾರದು. ದೇಶದಲ್ಲಿ ಪೋಕ್ಸೋ ಕಾಯ್ದೆ ಬಲಿಷ್ಟವಾಗಿದ್ದು ಅಪರಾಧಿ ಎಂದು ಸಾಬೀತಾದರೆ ಪೂರ್ತಿ ಜೀವನವನ್ನು ಜೈಲಿನಲ್ಲೇ ಕಳೆಯಬೇಕಾಗುತ್ತದೆ. ಓದುವ ವಯಸ್ಸಿನಲ್ಲಿ ಯುವಕ-ಯುವತಿಯರು ಬೇರೆಡೆ ಗಮನ ಹರಿಸದೆ ಉತ್ತಮ ಭವಿಷ್ಯ ಕಟ್ಟಿಕೊಳ್ಳ ಬೇಕೆಂದು ಕಿವಿಮಾತು ಹೇಳಿದರು.

ಅಪ್ರಾಪ್ತರು ಕ್ಷಣಿಕ ಸುಖಕ್ಕಾಗಿ ದುಶ್ಚಟಗಳ ದಾಸರಾಗಬಾರದು. ಒಳ್ಳೆಯವರ ಸಹವಾಸ, ಮಾನವೀಯ ಮೌಲ್ಯಗಳ ಅಳವಡಿಕೆ, ಸದ್ವಿಚಾರಗಳ ಮೂಲಕ ದೇಶಕ್ಕೆ ಒಳ್ಳೆಯ ಪ್ರಜೆಗಳಾಗಿ ಬೆಳೆಯಬೇಕು. ಹಾಸನದಲ್ಲಿ 15ಕ್ಕಿಂತ ಕಡಿಮೆ ವಯಸ್ಸಿನವರು ಪೋಕ್ಸೋ ಕೇಸುಗಳಲ್ಲಿ ಹೆಚ್ಚು ಭಾಗವಹಿಸುತ್ತಿ ರುವುದು ಆತಂಕ ಮೂಡಿಸಿದೆ ಯೆಂದರು.

ನಾಗರಿಕ ಹಕ್ಕುಗಳ ಸಂರಕ್ಷಣಾ ಸಂಘದ ಅಧ್ಯಕ್ಷ ಅಬ್ದುಲ್ ಹಮಿದ್ ಅವರು ಪ್ರಾಸ್ತಾವಿಕವಾಗಿ ಮಾತ ನಾಡಿ, ಅತ್ತೆ-ಸೊಸೆ ಜಗಳ, ಮರ್ಯಾದೆ ಹತ್ಯೆ, ಲೈಂಗಿಕ ಕಿರುಕುಳ, ಬಾಲಾಪರಾಧ ಗಳೆಲ್ಲವೂ ಸಮಾಜ ಬಾಹಿರ ಕೃತ್ಯಗಳಾಗಿವೆ. ಮಹಿಳಾ ಸ್ವಾತಂತ್ರ್ಯ ಕಾಪಾಡುವುದು ಎಲ್ಲರ ಜವಾಬ್ದಾರಿ ಎಂದು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ, ಸರ್ಕಾರಿ ಕಾನೂನು ಕಾಲೇಜು ಪ್ರಾಂಶುಪಾಲ ರಾದ ಸೀನಾ ಥಾಮಸ್, ಎಂ.ಕೃಷ್ಣ ಕಾಲೇಜು ಪ್ರಾಂಶುಪಾಲ ವಿ. ಶ್ರೀನಿವಾಸ್, ವಕೀಲ ಅನ್ವಾದ್ ಪಾಳ್ಯ, ಚಿಂತಕ ಹೆಚ್.ಕೆ.ವಿವೇಕಾನಂದ, ಎಸ್. ಶರಣ್ಯ ಇತರರಿದ್ದರು.

### ಗಣೇಶ್ ಗೌಡ ಹತ್ಯೆ ಖಂಡಿಸಿ ಎಸ್‌ಡಿಪಿಐ ಪ್ರತಿಭಟನೆ



• ಪ್ರಜೋದಯ ವರದಿ

**ಹಾಸನ:** ಚಿಕ್ಕಮಗಳೂರು ಜಿಲ್ಲೆ ಸಖರಾಯಪಟ್ಟಣದಲ್ಲಿ ಇತ್ತೀಚೆಗೆ ನಡೆದ ಕಾಂಗ್ರೆಸ್ ಮುಖಂಡ ಗಣೇಶ್ ಗೌಡ ಹತ್ಯೆಆರೋಪಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ಆಗ್ರಹಿಸಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಕಾರ್ಯಕರ್ತರು ಬುಧವಾರ ನಗರದ ಹೇಮಾವತಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು.

ಅಮಾಯಕ ವ್ಯಕ್ತಿಯನ್ನು ಕೊಲೆ ಮಾಡಿರುವುದು ಕಾನೂನು ವ್ಯವಸ್ಥೆಯ ವೈಫಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಕೃತ್ಯದಲ್ಲಿ ಭಾಗಿಯಾಗಿರುವ ಭಜರಂಗದಳ ಕಾರ್ಯಕರ್ತರನ್ನು ಶೀಘ್ರ ಬಂಧಿಸಿ ಶಿಕ್ಷೆಗೆ ಗುರಿಪಡಿಸಬೇಕೆಂದು ಒತ್ತಾಯಿಸಿದರು.

ಜನರ ಜೀವ, ಹಕ್ಕು ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ರಕ್ಷಿಸುವ ಹೊಣೆ ಸರ್ಕಾರದ ಮೇಲಿದೆ. ಪ್ರಕರಣವನ್ನು ಎಸ್‌ಐಟಿ ತನಿಖೆಗೆ ವಹಿಸಬೇಕು. ಈ ಪ್ರಕರಣದಲ್ಲಿ ಸರ್ಕಾರದ ನಿರ್ಲಕ್ಷ್ಯ ಮತ್ತು ಪೊಲೀಸರ ನಿಧಾನಗತಿಯ ಕಾರ್ಯ ಎದ್ದು ಕಾಣುತ್ತಿದೆ ಎಂದರು.

ಎಸ್‌ಡಿಪಿಐ ಜಿಲ್ಲಾ ಮಾಧ್ಯಮ ಉಸ್ತುವಾರಿ ಫೈರೋಜ್ ಪಾಷ, ಶಜಿಲ್ ಅಹಮದ್, ಸೈಯ್ಯದ್ ಫರಿದ್, ಕಾಜಿವ್, ಅಮೀರ್ ಜಾನ್, ಫೈರೋಜ್, ಸೈಯ್ಯದ್ ನದಿಮ್, ವಾಜೀದ್, ಯಾಸಿನ್, ಸೈಯ್ಯದ್ ಅನ್ವರ್, ಭೀಮ್ ಆರ್ಮಿಯ ಪ್ರದೀಪ್, ನಿಡುಗರಹಳ್ಳಿ ಸಿದ್ದಪ್ಪ, ತನ್ವಿರ್, ಗುಲಾಬ್ ಸಲೀಮ್, ಮುಸವ್ವಿರ್, ಸಮೀವುಲ್ಲಾ ಇದ್ದರು.

### ಸ್ಕಾಲರ್ಸ್ ಶಾಲಾ ಮಕ್ಕಳೊಂದಿಗೆ ಅಂಧ ಸಾಧಕ ಬಸವರಾಜು ಸಂವಾದ



• ಪ್ರಜೋದಯ ವರದಿ

**ಹಾಸನ:** ಅಸಾಮಾನ್ಯ ಸ್ಮರಣಶಕ್ತಿ ಮತ್ತು ವೇಗದ ಗಣಿತ ಲೆಕ್ಕಾಚಾರದ ಮೂಲಕ ನಡೆದಾ ಡುವ ಮಾನವ ಕಂಪ್ಯೂಟರ್ ಎಂದು ಪ್ರಸಿದ್ಧರಾಗಿರುವ ಬಸವರಾಜು ಉಮರಾಣಿ ಅವರು ನಗರದ ಸ್ಕಾಲರ್ಸ್ ವರ್ಲ್ಡ್ ಹಾಗು ಸ್ಕಾಲರ್ಸ್ ಇಂಟರ್ ನ್ಯಾಷನಲ್ ಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿ ಗಳೊಂದಿಗೆ ಸಂವಾದ ನಡೆಸಿದರು.

ಮಕ್ಕಳು ನೀಡಿದ ಕಠಿಣ ಮತ್ತು ದೊಡ್ಡ ಸಂಖ್ಯೆಗಳ ಲೆಕ್ಕಗಳಿಗೆ ಅವರು ಕ್ಷಣಾರ್ಧದಲ್ಲಿ ಉತ್ತರಿಸುವ ರೀತಿ ಬೆರಗುಗೊಳಿಸಿತು. ಕಂಪ್ಯೂಟರ್ ಮಟ್ಟದ ವೇಗದಲ್ಲಿ ಉತ್ತರಿಸುವ ಅವರ ಸಾಮರ್ಥ್ಯಕ್ಕೆ ಮಕ್ಕಳು ಚಪ್ಪಾಳೆಯ ಸುರಿಮಳೆಗೈದರು.

ದೇಹದ ನ್ಯೂನತೆಗಳಿದ್ದರೂ ಅದನ್ನು ಅಡ್ಡಿಯಾಗಿಸಿಕೊಳ್ಳದೆ ಸಾಧನೆ ಮಾಡಿದ ಬಸವರಾಜು ಉಮರಾಣಿ ಅವರನ್ನು ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಕೊಂಡಾಡಿದರು. ಅಂತರರಾಷ್ಟ್ರೀಯ ಮಟ್ಟದ ಗಣಿತ ಮತ್ತು ವ್ಯಕ್ತಿತ್ವ ವಿಕಸನ ತಜ್ಞರಾಗಿರುವ ಬಸವರಾಜು ಯೋಗ, ಧ್ಯಾನ, ಪ್ರಾಣಾ ಯಾಮ ಜೀವನದಲ್ಲಿ ಏಕಾಗ್ರತೆ, ಸ್ಮರಣ ಶಕ್ತಿ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಲು ಹೇಗೆ ಸಹಾಯಕವಾಗುತ್ತದೆಂದು ತಿಳಿಸಿದರು.

ಮೊಬೈಲ್ ಬಿಟ್ಟು ಪುಸ್ತಕ ಹಿಡಿಯಿರಿ, ಜ್ಞಾನ ಭಂಡಾರ ವೃದ್ಧಿಯಾಗುತ್ತದೆ. ಗಣಿತ ವನ್ನು ಸುಲಭವಾಗಿ ಕಲಿಸಲು ಶಿಕ್ಷಕರು ಸರಳ ತಂತ್ರಗಳನ್ನು ಬಳಸಬೇಕೆಂದು ತಿಳಿಸಿದರು. ಶಾಲೆಯ ಆಡಳಿತಾಧಿಕಾರಿ ಡಾ.ಹೆಚ್. ಎನ್.ಚಂದ್ರಶೇಖರ್ ಅವರು, ಬಸವರಾಜು ಉಮರಾಣಿ ಅವ ರನ್ನು ಸನ್ಮಾನಿಸಿದರು. ಕಾರ್ಯದರ್ಶಿ ಮಮತಾ ಚಂದ್ರಶೇಖರ್ ಹಾಗು ಸಿಬ್ಬಂದಿ ಹಾಜರಿದ್ದರು.

### ಡಿ.14ರಂದು ಕೇಂ.ಕ.ಸಾ. ವೇದಿಕೆ ಜಿಲ್ಲಾ ಸಾಹಿತ್ಯ ಸಮ್ಮೇಳನ

• ಪ್ರಜೋದಯ ವರದಿ



**ಹಾಸನ:** ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯಿಂದ ಡಿ.14ರಂದು ಕನ್ನಡ ಸಾಹಿತ್ಯ ಪರಿಷತ್ ಭವನ ದಲ್ಲಿ ಜಿಲ್ಲಾ ಪ್ರಥಮ ಕೇಂದ್ರ ಕನ್ನಡ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆಯೆಂದು ವೇದಿಕೆ ಸಂಸ್ಥಾಪಕ ಅಧ್ಯಕ್ಷ ಕೊಟ್ರೇಶ್ ಎಸ್.ಉಪ್ಪಾರ್ ಅವರು ತಿಳಿಸಿದರು.

ಸುದ್ದಿಗೋಷ್ಟಿಯಲ್ಲಿ ಬುಧವಾರ ಮಾತನಾಡಿ, ಜಾನಪದ ಕಲಾವಿದ ಗ್ಯಾರಂಟಿ ರಾಮಣ್ಣ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಪ್ರಕೃತಿ ಸಮುದಾಯ ಸೇವಾ ಸಂಸ್ಥೆಯ ಅಶ್ವಥ್ ಹಾಗು ವರ್ಷಾ ಅವರು ಸಮ್ಮೇಳನಕ್ಕೆ ಚಾಲನೆ ನೀಡಲಿದ್ದಾರೆ. ಬಿ.ಟಿ.ಮಾನವ ನೇತೃತ್ವದ ಕಲಾತಂಡಗ ಳೊಂದಿಗೆ ಮೆರವಣಿಗೆ ನಡೆಯಲಿದೆ.

ಜಾನಪದ ಕಲಾವಿದ ಡಾ.ಪಿಚ್ಚಳ್ಳಿ ಶ್ರೀನಿವಾಸ್ ಸಮ್ಮೇಳನ ಉದ್ಘಾಟಿಸಲಿದ್ದು, ಸಾಹಿತಿ ಎನ್.ಶೈಲಜಾ ಹಾಸನ ಅಧ್ಯಕ್ಷತೆ ವಹಿಸುವರು. ಪತ್ರಕರ್ತ ಹೆತ್ತೂರು ನಾಗರಾಜು ಸಮ್ಮೇಳನ ಅಧ್ಯಕ್ಷರ ಕುರಿತು ಮಾತನಾಡಲಿದ್ದಾರೆಂದರು. ಮಧ್ಯಾಹ್ನದ ಅವಧಿಯಲ್ಲಿ ಜಾನಪದಕ್ಕೊಂದು ಕಾವ್ಯಗನ್ನಡಿ ಎಂಬ ಸಾಹಿತ್ಯಿಕ ಗೋಷ್ಠಿ ನಡೆಯಲಿದ್ದು ಹಾಸನದ ಸಾಹಿತಿ ಹಾಡ್ಲಹಳ್ಳಿ ನಾಗರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. ಕವಯಿತ್ರಿ ಹೆಚ್.ಸಿ.ಭವ್ಯ ನವೀನ್ ಆಶಯ ನುಡಿಗಳನ್ನಾಡಲಿದ್ದಾರೆ. ಜಾನಪದ ವಿದ್ವಾಂಸ ಡಾ. ಹಂಪನ ಹಳ್ಳಿ ತಿಮ್ಮೇಗೌಡರು ಸಾಮಾಜಿಕ ಪರಿವರ್ತನೆಯಲ್ಲಿ ಜಾನಪದ ಎಂಬ ವಿಷಯದಡಿ ಉಪನ್ಯಾಸ ನೀಡುವರು. ಜಿಲ್ಲಾ ಮಟ್ಟದ ಕವಿಗೋಷ್ಠಿಯಲ್ಲಿ ಜಯಶಂಕರ್ ಬೆಳಗುಂಬ, ಹೊ.ರಾ.ಪರಮೇಶ್, ಲಲಿತ ಎಸ್., ವಾಣಿ ಮಹೇಶ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆಂದು ತಿಳಿಸಿದರು.

ಸುದ್ದಿಗೋಷ್ಟಿಯಲ್ಲಿ ಲೇಖಕರಾದ ನಾಗರಾಜ್ ಹೆತ್ತೂರು, ಮಂಜು ಬನವಾಸೆ, ಹೆಚ್.ಎಸ್.ಬಸವರಾಜ್, ತಾಲ್ಲೂಕು ಅಧ್ಯಕ್ಷೆ ಗೀತಾ, ಕಾರ್ಯದರ್ಶಿ ಸಿ.ಎನ್.ನೀಲಾವತಿ ಇದ್ದರು.

### ಮೇಲೇರಿದ ಕೊಹ್ಲಿ | ಅಗ್ರ ಐವರಲ್ಲಿ ಭಾರತದವರೇ ಮೂವರು

# ಏಕದಿನ ರ‍್ಯಾಂಕಿಂಗ್: ರೋಹಿತ್‌ಗೆ ಅಗ್ರಸ್ಥಾನ

• ಪ್ರಜೋದಯ ವರದಿ

**ದುಬೈ:** ಇತ್ತೀಚೆಗೆ ನಡದ ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಯಲ್ಲಿ ಅಮೋಘ ಬ್ಯಾಟಿಂಗ್ ಪ್ರದರ್ಶನ ತೋರಿದ ವಿರಾಟ್ ಕೊಹ್ಲಿ, ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಎರಡು ಸ್ಥಾನ ಮೇಲೇರಿದ್ದಾರೆ.

2021ರ ಏಪ್ರಿಲ್‌ನಲ್ಲಿ ಅಗ್ರಸ್ಥಾನದಿಂದ ಕೆಳಗಿಳಿದಿದ್ದ ಅವರು, ಮತ್ತೊಮ್ಮೆ ನಂಬರ್ 1 ಬ್ಯಾಟರ್ ಎನಿಸಿಕೊಳ್ಳುವತ್ತಾ ದಾಪುಗಾಲಿಟ್ಟಿದ್ದಾರೆ. ಬುಧವಾರ ಬಿಡುಗಡೆಯಾಗಿರುವ ಐಸಿಸಿ ಏಕದಿನ ಬ್ಯಾಟರ್‌ಗಳ ಪಟ್ಟಿಯಲ್ಲಿ ಭಾರತದ ಮೂವರು ಅಗ್ರ ಐದರಲ್ಲಿ ಕಾಣಿಸಿ ಕೊಂಡಿದ್ದಾರೆ.

2ನೇ ಸ್ಥಾನಕ್ಕೇರಿರುವ ಕಿಂಗ್ ಕೊಹ್ಲಿ, ನ್ಯೂಜಿಲೆಂಡ್‌ನ ಡೆರಿಲ್ ಮಿಚೇಲ್, ಅಫ್ಘಾನಿಸ್ತಾನದ ಇಬ್ರಾಹಿಂ ಜದ್ರಾನ್ ಅವರನ್ನು ಹಿಂದಿಕ್ಕಿದ್ದಾರೆ. ಹಿಟ್‌ಮ್ಯಾನ್ ರೋಹಿತ್ ಶರ್ಮಾ, ಅಗ್ರಸ್ಥಾನ ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಕೊಹ್ಲಿ, ದಕ್ಷಿಣ ಆಫ್ರಿಕಾ ವಿರುದ್ಧದ



ಮೂರು ಪಂದ್ಯಗಳ ಸರಣಿಯಲ್ಲಿ ಎರಡು ಶತಕ ಹಾಗೂ ಅರ್ಧಶತಕ ಸಹಿತ 302 ರನ್ ಕಲೆಹಾಕಿದ್ದರು. ರೋಹಿತ್, 2 ಅರ್ಧಶತಕ ಸಹಿತ 146 ರನ್‌ಗಳಿಸಿದ್ದರು. ರೋಹಿತ್ ಖಾತೆಯಲ್ಲಿ ಸದ್ಯ 781 ಪಾಯಿಂಟ್‌ಗಳಿವೆ. ಕೊಹ್ಲಿ ಬಳಿ 773 ಪಾಯಿಂಟ್ ಇವೆ. ಮಿಚೇಲ್, ಜದ್ರಾನ್ ಮತ್ತು ಟೀಂ ಇಂಡಿಯಾ ನಾಯಕ ಶುಭಮನ್ ಗಿಲ್, ಕ್ರಮವಾಗಿ ನಂತರದ ಮೂರು ಸ್ಥಾನಗಳಲ್ಲಿ ಇದ್ದಾರೆ.

**ಕುಲದೀಪ್, ಪಾಂಡ್ಯಗೂ ಬಡ್ತಿ**

ಆಫ್ರಿಕಾ ವಿರುದ್ಧದ ಸರಣಿಯ ಮೂರು ಪಂದ್ಯಗಳಿಂದ 9 ವಿಕೆಟ್ ಉರುಳಿಸಿದ್ದ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರೂ, ಏಕದಿನ ಬೌಲರ್‌ಗಳ ವಿಭಾಗದಲ್ಲಿ ಮೇಲೇರಿದ್ದಾರೆ. ಕುಲದೀಪ್ ಖಾತೆಯಲ್ಲಿ 655 ಪಾಯಿಂಟ್‌ಗಳಿದ್ದು, ಮೂರನೇ ಸ್ಥಾನದಲ್ಲಿದ್ದಾರೆ.

ಟಿ-20 ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಆಲ್‌ರೌಂಡ್ ಆಟದ ಮೂಲಕ ಗಮನ ಸೆಳೆದಿರುವ ಹಾರ್ದಿಕ್ ಪಾಂಡ್ಯ ಟಿ-20 ಆಲ್ ರೌಂಡರ್‌ಗಳ ವಿಭಾಗದಲ್ಲಿ, ಮೂರು ಸ್ಥಾನ ಮೇಲೇರಿ 4ನೇ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ.

ಟೆಸ್ಟ್ ಹಾಗೂ ಟಿ-20 ಬೌಲರ್‌ಗಳ ವಿಭಾಗದಲ್ಲಿ ಭಾರತದವರೇ ಆದ ವೇಗಿ ಜಸ್‌ಪ್ರೀತ್ ಬೂಮ್ರಾ ಮತ್ತು ಸ್ಪಿನ್ನರ್ ವರುಣ್ ಚಕ್ರವರ್ತಿ ಕ್ರಮವಾಗಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK